www.KannadaPrabha.in | ಮಂಗಳವಾರ 5.05.2026 | • ಬೆಂಗಳೂರು • ಬೆಳಗಾವಿ • ಶಿವಮೊಗ್ಗ • ಹುಬ್ಬಳ್ಳಿ • ಮಂಗಳೂರು • ಕಲಬುರಗಿ | Kannada Prabha • Daily • Tuesday • 05.05.2026 • Volume 60 • Issue 124 • Pages 16 | • Price ₹7 | Kalaburagi

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಮೋದಿಯ ಮುಂದೆ ಮಂಕಾದ ದೀದಿ



ಮೊದಲ ಯತ್ನದಲ್ಲೇ ವಿಜಯದ ವಿಶಲ್

ಪಂಚರಾಜ್ಯಗಳ ಚುನಾವಣೆಯಲ್ಲಿ ಐತಿಹಾಸಿಕ ಫಲಿತಾಂಶ

ಬಿಜೆಪಿ ಪರ ಬಂಗಾಳ ಪರಿವರ್ತನೆ | ಹಳೆ ದ್ರಾವಿಡ ಪಕ್ಷಗಳ ತಿರಸ್ಕರಿಸಿ ತ.ನಾಡು ಪರಿವರ್ತನೆ

ಪೊರಿಬೊರ್ತನ್!

ಮೋದಿ-ಶಾ ಅರ್ಭಟ: ದೀದಿ ಧೂಳೀಪಟ | 206 ಸೀಟು ಗೆದ್ದು ಬಂಗಾಳದಲ್ಲಿ ಮೊದಲ ಸಲ ಬಿಜೆಪಿ ಸರ್ಕಾರ

ತ.ನಾಡಿಗೆ ವಿಜಯ್ ಜನನಾಯಕ | 60 ವರ್ಷದಲ್ಲೇ ಡಿಎಂಕೆ, ಅಣ್ಣಾಡಿಎಂಕೆ ಬಿಟ್ಟು ಮೂರನೆ ಪಕ್ಷಕ್ಕೆ ಗದ್ದುಗೆ

10 ವರ್ಷಗಳ ಬಳಿಕ ಕೇರಳ ಕೈವಶ | ಅಸ್ಸಾಂನಲ್ಲಿ ಬಿಜೆಪಿ ಹ್ಯಾಟ್ರಿಕ್ | ಪುದುಚೇರಿಗೆ ಮತ್ತೊಮ್ಮೆ ರಂಗಸ್ವಾಮಿ

34 ವರ್ಷ ಬಂಗಾಳದಲ್ಲಿ ಅಧಿಕಾರದಲ್ಲಿದ್ದ ಎಡರಂಗವನ್ನು ಕಿತ್ತೊಗೆಯಲು 2011ರಲ್ಲಿ ಮಮತಾ ಬ್ಯಾನರ್ಜಿ ಬಂಗಾಳಿ ಭಾಷೆಯಲ್ಲಿ 'ಪೊರಿಬೊರ್ತನ್' (ಪರಿವರ್ತನೆ) ಎಂಬ ಘೋಷಣೆ ಮೊಳಗಿಸಿದ್ದರು. ಆ ವರ್ಷ ಬಂಗಾಳದಲ್ಲಿ ಪರಿವರ್ತನೆಯೇ ಆಗಿತ್ತು. 15 ವರ್ಷಗಳ ಬಳಿಕ ಬಂಗಾಳದಲ್ಲಿ ಮತ್ತೆ ಪರಿಬೊರ್ತನ್ ಆಗಿದೆ. ಫಲವಾಗಿ, ಬಿಜೆಪಿ ಮೊದಲ ಬಾರಿ ಅಧಿಕಾರಕ್ಕೇರಿದೆ. ಇತ್ತ ತ.ನಾಡಿನಲ್ಲೂ ಪೊರಿಬೊರ್ತನ್ ಆಗಿದೆ. ದೇಶವನ್ನೇ ವಿಜಯ್ ಅಚ್ಚರಿಗೆ ದೂಡಿದ್ದಾರೆ.

ತಮಿಳುನಾಡು
ಒಟ್ಟು ಸ್ಥಾನ: 234 | ಬಹುಮತಕ್ಕೆ: 118

ಪಕ್ಷ	2026	2021	ಲಾಭ/ನಷ್ಟ
ಟಿವಿಕೆ	107	----	+107
ಡಿಎಂಕೆ+	74	159	-85
ಎಡಿಎಂಕೆ+	52	75	-23
ಇತರರು	1	0	+1

ಪಶ್ಚಿಮ ಬಂಗಾಳ
ಒಟ್ಟು ಸ್ಥಾನ: 294 | ಬಹುಮತಕ್ಕೆ: 148

ಪಕ್ಷ	2026	2021	ಲಾಭ/ನಷ್ಟ
ಬಿಜೆಪಿ	206	77	+129
ಟಿಎಂಸಿ	81	214	-133
ಕಾಂಗ್ರೆಸ್	2	0	+2
ಇತರರು	4	2	+2

ಕೇರಳ
ಒಟ್ಟು ಸ್ಥಾನ: 140 | ಬಹುಮತಕ್ಕೆ: 71

ಪಕ್ಷ	2026	2021	ಲಾಭ/ನಷ್ಟ
ಯುಡಿಎಫ್	89	40	+49
ಎಲ್‌ಡಿಎಫ್	35	92	- 57
ಬಿಜೆಪಿ	03	0	+3
ಇತರರು	13	8	+5

ಅಸ್ಸಾಂ
ಒಟ್ಟು ಸ್ಥಾನ: 126 ಬಹುಮತಕ್ಕೆ: 64

ಪಕ್ಷ	2026	2021	ಲಾಭ/ನಷ್ಟ
ಬಿಜೆಪಿ	102	73	+29
ಕಾಂಗ್ರೆಸ್	21	31	- 10
ಎಐಯುಡಿಎಫ್	02	16	- 14
ಇತರರು	01	06	-5

ಪುದುಚೇರಿ
ಒಟ್ಟು ಸ್ಥಾನ: 30 ಬಹುಮತಕ್ಕೆ: 16

ಪಕ್ಷ	2026	2021	ಲಾಭ/ನಷ್ಟ
ಎಐಎನ್‌ಆರ್‌ಸಿ	18	16	+2
ಡಿಎಂಕೆ+	06	08	- 2
ಟಿವಿಕೆ	04	00	+ 4
ಇತರರು	03	06	-3

ದೇಶದಲ್ಲಿ ಎಲ್ಲೂ ಇಲ್ಲ ಎಡರಂಗ ಸರ್ಕಾರ




ಕೇರಳದಲ್ಲಿ ಎಡರಂಗದ ಸೋಲಿನೊಂದಿಗೆ ಯಾವುದೇ ರಾಜ್ಯದಲ್ಲಿ ಎಡಪಕ್ಷಗಳ ಸರ್ಕಾರ ಅಸ್ತಿತ್ವದಲ್ಲಿ ಇಲ್ಲದಂತಾಗಿದೆ. ಈ ರೀತಿ ಆಗಿದ್ದು 50 ವರ್ಷದಲ್ಲೇ ಮೊದಲು. 1977ರಿಂದ ದೇಶದ ಎಲ್ಲಾದರೂ 1 ಕಡೆ ಎಡರಂಗ ಸರ್ಕಾರ ಇರುತ್ತಿತ್ತು.

KAS, PSI, PDO, PC ಪರೀಕ್ಷೆಗಳಿಗೆ ಆನ್ ಲೈನ್ ಮೂಲಕ ಉಚಿತ ತರಬೇತಿ

ಹಿಂದು ಕಲಿಗಳ ತವರಲ್ಲಿ ಹಿಂದು ಪಕ್ಷ ಅಧಿಕಾರಕ್ಕೆ





ಹಿಂದು ಧರ್ಮ ಪ್ರಚಾರಕ ಸ್ವಾಮಿ ವಿವೇಕಾನಂದರು ಹಾಗೂ ಬಿಜೆಪಿಯ ಪೂರ್ವಾಶ್ರಮ ಜನಸಂಘದ ಸ್ಥಾಪಕ ಶ್ಯಾಮಪ್ರಸಾದ ಮುಖರ್ಜಿ ಅವರ ತವರು ಬಂಗಾಳ. ದೇಶದ ಉದ್ದಗಲಕ್ಕೂ ಗೆಲುವಿನ ಪತಾಕೆ ಹಾರಿಸಿದ ಬಿಜೆಪಿಯು ಹಿಂದು ಪಕ್ಷ ಎನಿಸಿಕೊಂಡಿದ್ದರೂ ಬಂಗಾಳ ಪ್ರವೇಶ ಕಷ್ಟವಾಗಿತ್ತು. ಈಗ ಅಲ್ಲೂ ಗೆಲ್ಲುವ ಮೂಲಕ ಹಿಂದು ಕಲಿಗಳ ತವರಲ್ಲಿ ಚುಕ್ಕಾಣಿಗೇರಿದಂತಾಗಿದೆ.

ಪ.ಬಂಗಾಳ ಗೆಲುವಿಂದ ಬಾಂಗ್ಲಾದೇಶಕ್ಕೆ ನಡುಕ

ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಗೆದ್ದಿರುವುದು ಆ ರಾಜ್ಯದ ಜತೆ ಗಡಿ ಹಂಚಿಕೊಂಡಿರುವ ಬಾಂಗ್ಲಾದೇಶಕ್ಕೆ ನಡುಕ ಹುಟ್ಟಿಸಿದೆ. ಬಾಂಗ್ಲಾ ಅಕ್ರಮ ವಲಸಿಗ ವಿಚಾರವನ್ನೇ ಮುಂದಿಟ್ಟು ಕೊಂಡು ಬಿಜೆಪಿ ಚುನಾವಣೆ ಎದುರಿಸಿತ್ತು. ಹೀಗಾಗಿ ಬಂಗಾಳದಿಂದ ಬಾಂಗ್ಲಾಕ್ಕೆ ಸಾಮೂಹಿಕ ವಲಸೆ ಆರಂಭವಾಗಬಹುದು, ಅದನ್ನು ನಿರ್ವಹಿಸು ವುದು ಹೇಗೆಂಬ ಚಿಂತೆ ಬಾಂಗ್ಲಾದೇಶದ್ದು.

ಮೋದಿ- ಅಮಿತ್ ಶಾ ಎಲೆಕ್ಷನ್ ಜೋಡೆತ್ತು



2014ರ ನಂತರ ಬಿಜೆಪಿಯದ್ದು ಸುವರ್ಣ ಯುಗ. ಮೋದಿ- ಅಮಿತ್ ಶಾ ಜೋಡಿ ಬಿಜೆಪಿ ಎಂದಿಗೂ ಗೆಲ್ಲದ ರಾಜ್ಯಗಳ ಲ್ಲೆಲ್ಲಾ ಏಕಾಂಗಿಯಾಗಿ ಪಕ್ಷವನ್ನು ಅಧಿಕಾರಕ್ಕೆ ತಂದಿದೆ. ಅಧಿಕಾರದಲ್ಲಿರುವ ರಾಜ್ಯಗಳನ್ನೂ ಉಳಿಸಿಕೊಂಡು ಹೋಗುತ್ತಿದೆ. ಅಮೆರಿಕ ಚುನಾವಣೆಯಲ್ಲೂ ಮೋದಿ ಹೆಸರು ಪ್ರಸ್ತಾ ಪವಾಗುವಂತಾಗಿದೆ. ಹೀಗಾಗಿ ಈ ಜೋಡಿ ಎಲೆಕ್ಷನ್‌ಗಳನ್ನು ಗೆಲ್ಲುವ ಜೋಡೆತ್ತಿನಂತಾಗಿದೆ!

ವಿಜಯ್ ಕಾರು ಚಾಲಕನ ಮಗನೂ ಈಗ ಎಂಎಲ್‌ಎ!

ಆಟೋ ಚಾಲಕನೂ ಈಗ ಶಾಸಕ

ವಿಜಯ್ ಅವರ ಕಾರು ಚಾಲಕ ರಾಜೇಂದ್ರನ್ ಪುತ್ರ ಶಬರಿನಾಥನ್ (30) ಟಿವಿಕೆ ಶಾಸಕರಾಗಿ ಆಯ್ಕೆಯಾಗಿದ್ದಾರೆ. 3 ದಶಕದಿಂದ ತಮ್ಮ ಬಳಿ ರಾಜೇಂದ್ರನ್ ಚಾಲಕ ಆಗಿರುವ ಹಿನ್ನೆಲೆಯಲ್ಲಿ ಅವರ ಪುತ್ರಗೆ ವಿಜಯ್ ಟಿಕೆಟ್ ಕೊಟ್ಟಿದ್ದರು. ಇನ್ನು ವಿಜಯ್ ಪಕ್ಷದಿಂದ ಸ್ಪರ್ಧಿಸಿದ್ದ ಆಟೋ ಚಾಲಕನೊಬ್ಬ 14 ಸಾವಿರ ಮತಗಳಿಂದ ಗೆದ್ದಿದ್ದಾನೆ.


ವಿಜಯ್ ಗೆಲುವಿನ ಹಿಂದೆ ಸಿದ್ದು ಮಾಜಿ ಸಲಹೆಗಾರ! ↘ 08

ಎಡ, ದೀದಿ ಬಳಿಕ ಈಗ ಬಲಪಂಥಕ್ಕೆ ಬಂಗಾಳ

34 ವರ್ಷದಿಂದ ಅಧಿಕಾರ ದಲ್ಲಿದ್ದ ಎಡರಂಗವನ್ನು ಕಿತ್ತೊಗೆಯಲು ಮಮತಾ ಬ್ಯಾನರ್ಜಿ ಪಟ್ಟ ಶ್ರಮ ಅಷ್ಟಿಷ್ಟಲ್ಲ. ಮಮತಾರನ್ನು ಕೂಡ ಅಷ್ಟೇ ಶ್ರಮ ಹಾಕಿ ಈಗ ಬಿಜೆಪಿ ಕೆಳಗಿಳಿಸಿದೆ. ಈ ರೂಪಾಂತರ ದಿಂದಾಗಿ, ಎಡಪಂಥವನ್ನು ಬೆಂಬಲಿಸುತ್ತಿದ್ದ ಬಂಗಾಳ, ಮಮತಾ ಸಿದ್ಧಾಂತಕ್ಕೆ ವಾಲಿತ್ತು. ಈಗ ಬಲಪಂಥೀಯ ಸಿದ್ಧಾಂತಕ್ಕೆ ಆಕರ್ಷಿತವಾಗಿದೆ.

ಗಂಗಾ ನದಿಯ ಮಡಿಲು ಈಗ ಬಿಜೆಪಿಯ ತೊಟ್ಟಿಲು

ಗಂಗೋತ್ರಿ–ಗಂಗಾಸಾಗರ ಕೇಸರಿ



ಪಶ್ಚಿಮ ಬಂಗಾಳವನ್ನೂ ಬಿಜೆಪಿ ಗೆಲ್ಲುವುದರೊಂದಿಗೆ ಜಾರ್ಖಂಡ್ ಬಿಟ್ಟು ಗಂಗಾ ನದಿ ಹರಿಯುವ ಎಲ್ಲ ರಾಜ್ಯಗಳೂ ಕೇಸರಿ ಪಕ್ಷದ ವಶವಾದಂತಾಗಿದೆ. ಉತ್ತರಾಖಂಡ, ಉತ್ತರಪ್ರದೇಶ, ಬಿಹಾರ, ಜಾರ್ಖಂಡ್, ಪಶ್ಚಿಮ ಬಂಗಾಳದಲ್ಲಿ ಗಂಗಾ ನದಿ ಹರಿಯುತ್ತದೆ.

ರಜನಿ, ಕಮಲ್ ಕೈಯಲ್ಲಿ ಆಗದ್ದನ್ನು ಸಾಧಿಸಿದ ವಿಜಿಲ್



ತಮಿಳುನಾಡು ಹೇಳಿಕೇಳಿ ಅಗಾಧ ಸಿನಿಮಾ ಪ್ರಭಾವ ಹೊಂದಿರುವ ರಾಜ್ಯ. ಎಂ.ಜಿ.ಆರ್. ಅವರು ತಮ್ಮ ಸಿನಿಮಾ ಪ್ರಭಾವದಿಂದಲೇ ಡಿಎಂಕೆಯಂತಹ ದೈತ್ಯ ಪಕ್ಷವನ್ನು ಮಣಿಸಿ 10 ವರ್ಷ ಮುಖ್ಯಮಂತ್ರಿಯಾದವರು. ಇದೀಗ ಅಲ್ಲಿ ವಿಜಯ್ ರೂಪದಲ್ಲಿ ಮತ್ತೊಂದು ಪರ್ಯಾಯ ಸಿಕ್ಕಿದೆ. ರಜನೀಕಾಂತ್, ಕಮಲಹಾಸನ್, ವಿಜಯಕಾಂತ್ ಅವರ ಕೈಯಲ್ಲಿ ಆಗದ್ದನ್ನು ಅವರೀಗ ಮಾಡಿ ತೋರಿಸಿದ್ದಾರೆ.

ಕೇರಳದಲ್ಲಿ ಬಿಜೆಪಿಗೆ ಐತಿಹಾಸಿಕ 3 ಸೀಟು

ರಾಜೀವ್ ಚಂದ್ರಶೇಖರ್ ಸಾಧನೆ



ಕೇರಳದಲ್ಲಿ ಬಿಜೆಪಿ ಈ ಬಾರಿ 3 ಸ್ಥಾನ ಗೆದ್ದು ಇತಿಹಾಸ ಸೃಷ್ಟಿಸಿದೆ. ರಾಜ್ಯದಲ್ಲಿ ಬಿಜೆಪಿ ಖಾತೆ ತೆರೆದಿದ್ದೇ 2016ರಲ್ಲಿ. ಆಗ 1 ಸ್ಥಾನ ಗೆದ್ದಿತ್ತು. 2021ರಲ್ಲಿ ಶೂನ್ಯ ಸಂಪಾದಿಸಿತ್ತು. ಇದೀಗ ಬಿಜೆಪಿ ರಾಜ್ಯಾಧ್ಯಕ್ಷ ರಾಜೀವ್ ಚಂದ್ರಶೇಖರ್ ನೇತೃತ್ವದಲ್ಲಿ ಅವರು ಸೇರಿ ಮೂವರು ಗೆದ್ದಿದ್ದಾರೆ. ತನ್ಮೂಲಕ ಭವಿಷ್ಯದಲ್ಲಿ ಬಂಗಾಳ ರೀತಿ ಕೇರಳದಲ್ಲೂ ಫಲಿತಾಂಶ ತರುವ ಸುಳಿವು ಕೊಟ್ಟಿದ್ದಾರೆ.

ವಿಜಯದ ಹಿಂದಿದೆ 17 ವರ್ಷದ ರಹಸ್ಯ!

ತಮಿಳುನಾಡಿನಲ್ಲಿ ವಿಜಯ್ ಸಾಧಿಸಿದ ಗೆಲುವು ಏಕಾಏಕಿ ಸಿಕ್ಕಿದ್ದಲ್ಲ. 17 ವರ್ಷಗಳಿಂದ ಹಾಕಿದ ಶ್ರಮಕ್ಕೆ ಫಲ ಸಿಕ್ಕಿದೆ. ವಿಜಯ್ ಅವರು 2009ರಿಂದಲೇ ಆರಂಭಿಸಿದ ಚಟುವಟಿಕೆ ಈಗ ಅವರನ್ನು ಸಿಎಂ ಸ್ಥಾನಕ್ಕೆ ತಂದು ನಿಲ್ಲಿಸಿದೆ. ವಿವರ ↘ 7

3 ಸಿಎಂಗಳ ಸೋಲು

ಪಂಚ ರಾಜ್ಯ ಚುನಾವಣೆಯಲ್ಲಿ ಬಂಗಾಳದ ಮಮತಾ, ತಮಿಳುನಾಡಿನ ಸ್ಟಾಲಿನ್, ಕೇರಳದ ಪಿಣರಾಯಿ ಅಧಿಕಾರ ಕಳೆದು ಕೊಂಡಿದ್ದಾರೆ.

ವಿಜಿ ಜತೆ ಹೋಗೋಣ ಎಂದಿದ್ದ ರಾಗಾ, ಬೇಡ ಎಂದಿದ್ದ ಖರ್ಗೆ, ಚಿದು!

ವಿಧಾನಸಭೆ ಚುನಾವಣೆಗೂ ಮುನ್ನ ನಟ ವಿಜಯ್ ಪಕ್ಷದ ಜತೆ ಮೈತ್ರಿ ಮಾಡಿಕೊಳ್ಳಲು ರಾಹುಲ್ ಬಯಸಿದ್ದರು. ಆದರೆ ಹಳೆಯ ಮಿತ್ರನಾಗಿರುವ ಡಿಎಂಕೆ ಜತೆಯೇ ಇರೋಣ ಎಂದು ಖರ್ಗೆ ಹಾಗೂ ಚಿದಂಬರಂ ಹೇಳಿದ್ದರು. ಅದು ಈಗ ಮುಳುವಾಗಿದೆ.

ವಿಶೇಷ ಪುಟಗಳು 5, 6, 7, 8

ಉಪಸಮರ | ದಾವಣಗೆರೆಯಲ್ಲಿ ಶಾಮನೂರು ಶಿವಶಂಕರಪ್ಪ, ಬಾಗಲಕೋಟೆಯಲ್ಲಿ ಎಚ್.ವೈ. ಮೇಟಿ ನಿಧನದಿಂದ ತೆರವಾಗಿದ್ದ ಸ್ಥಾನಕ್ಕೆ ನಡೆದಿದ್ದ ಉಪಚುನಾವಣೆ ಫಲಿತಾಂಶ ಪ್ರಕಟ | ಆಡಳಿತಾರೂಢ ಪಕ್ಷಕ್ಕೆ ಗೆಲುವು

ದಾವಣಗೆರೆ, ಬಾಗಲಕೋಟೆ ಎರಡೂ ಕ್ಷೇತ್ರದಲ್ಲಿ ಕಾಂಗ್ರೆಸ್ ಜಯಭೇರಿ

ಮುಸ್ಲಿಂ ಒಳ ಹೊಡೆತವಿದ್ದರೂ ಶಾಮನೂರು ಮೊಮ್ಮಗ ಜಯ

ಬಿಜೆಪಿಯ ವಿರುದ್ಧ ಸಮರ್ಥ್‌ಗೆ 5708 ಮತದ ಗೆಲುವು

• **ಕನ್ನಡಪ್ರಭ ವಾರ್ತೆ** ದಾವಣಗೆರೆ

ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಕಾಂಗ್ರೆಸ್‌ನ ಸಮರ್ಥ ಎಂ.ಶಾಮನೂರು, ತಮ್ಮ ಸಮೀಪದ ಪ್ರತಿಸ್ಪರ್ಧಿ ಬಿಜೆಪಿಯ ಶ್ರೀನಿವಾಸ ಟಿ.ದಾಸಕರಿಯಪ್ಪ ವಿರುದ್ಧ 5708 ಮತಗಳ ಅಂತರದಲ್ಲಿ ಜಯ ಸಾಧಿಸಿದ್ದಾರೆ.

ಸಮರ್ಥ 69578 ಮತ ಪಡೆದರೆ, ಬಿಜೆಪಿಯ ದಾಸಕರಿಯಪ್ಪ 63,870 ಮತಗ ಳನ್ನು ಪಡೆದರು. ಉಳಿದಂತೆ ಎಸ್‌ಡಿಪಿಐ ಅಭ್ಯರ್ಥಿ ಅಫ್ಸರ್‌ಕೊಡ್ಲಿಪೇಟೆ 18,975 ಮತ ಪಡೆದು, ತೃತೀಯ ಸ್ಥಾನ ಪಡೆದಿದ್ದಾರೆ. ↘ 14





ಸಮರ್ಥ್ ಶಾಮನೂರು	ಶ್ರೀನಿವಾಸ ದಾಸಕರಿಯಪ್ಪ
69578	63870
ಗೆಲುವು	ಸೋಲು

ನಿರೀಕ್ಷೆಯಂತೆಯೇ ಕಾಂಗ್ರೆಸ್‌ನ ಮೇಟಿ ಪುತ್ರಗೆ ಸುಲಭ ಜಯ

ಉಮೇಶ್ ಮೇಟಿಗೆ 22332 ಮತಗಳಿಂದ ವಿಜಯ

• **ಕನ್ನಡಪ್ರಭ ವಾರ್ತೆ** ಬಾಗಲಕೋಟೆ

ಬಾಗಲಕೋಟೆ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಯ ಫಲಿತಾಂಶ ಪ್ರಕಟವಾಗಿದ್ದು, ಕಾಂಗ್ರೆಸ್ ಅಭ್ಯರ್ಥಿ ಉಮೇಶ ಮೇಟಿ, ತಮ್ಮ ಸಮೀಪದ ಪ್ರತಿಸ್ಪರ್ಧಿ ಬಿಜೆಪಿಯ ಡಾ. ವೀರಣ್ಣ ಚರಂತಿಮಠ ವಿರುದ್ಧ 22,332 ಮತಗಳ ಅಂತರದಿಂದ ಗೆಲುವು ಸಾಧಿಸಿದ್ದಾರೆ.

ಉಮೇಶ ಮೇಟಿ 98,919 ಮತ ಪಡೆದು ಗೆಲುವು ಸಾಧಿಸಿದರೆ, ಬಿಜೆಪಿಯ ವೀರಣ್ಣ ಚರಂತಿಮಠ 76,587 ಮತ ಪಡೆದು ಪರಾಜಯ ಹೊಂದಿದ್ದಾರೆ. ↘ 14





ಉಮೇಶ ಮೇಟಿ	ವೀರಣ್ಣ ಚರಂತಿಮಠ
98919	76587
ಗೆಲುವು	ಸೋಲು

2 ಕ್ಷೇತ್ರದಲ್ಲಿ ಗೆದ್ದರೂ ಕೈಗೆ ಎಚ್ಚರಿಕೆ ಕರೆಗಂಟೆ!

- ಆಡಳಿತ ವಿರೋಧಿ ಅಲೆ ಇಲ್ಲ ಎಂಬ ಸಂದೇಶ ರವಾನಿಸುವಲ್ಲಿ 2 ಕ್ಷೇತ್ರಗಳ ಗೆಲುವು ಯಶಸ್ವಿ
- ಸರ್ಕಾರದ ಗ್ಯಾರಂಟಿ ಯೋಜನೆಗಳು ಜನರಿಗೆ ತಲುಪಿವೆ, ನೆರವಾಗಿವೆ ಎಂದು ಪಕ್ಷಕ್ಕೆ ವಿಶ್ವಾಸ
- ಆದರೆ ಅನುಕಂಪದ ಅಲೆ, ಸರ್ಕಾರದ ಬಲ ಇದ್ದರೂ ದಾವಣಗೆರೆಯಲ್ಲಿ ಮತ ಇಳಿಕೆ
- ದಾವಣಗೆರೇಲಿ ಅಂತರ ಇಳಿಕೆ, ಅಲ್ಪಸಂಖ್ಯಾತರ ಮತ ಚದುರಿದ್ದು ಪಕ್ಷಕ್ಕೆ ಕಳವಳಕಾರಿ
- ಇದರಿಂದ ಪಕ್ಷದ ನಾಯಕತ್ವಕ್ಕೆ ಆತ್ಮವಿಮರ್ಶೆ ಮಾಡಬೇಕಾದ ಸಂದೇಶ ರವಾನೆ
- ಆದರೆ ಫಲಿತಾಂಶ ರಾಜಕೀಯ ಬೆಳವಣಿಗೆಗೆ ಮುನ್ನುಡಿ ಬರೆಯುವಷ್ಟು ಪ್ರಭಾವ ಹೊಂದಿಲ್ಲ

ಬಿಕ್ಕಟ್ಟು ಇತ್ಯರ್ಥ ಆದ್ರೂ ಬಿಜೆಪಿಗೆ ಗೆಲುವು ಸಿಗ್ಲಿಲ್ಲ

- 2 ಕ್ಷೇತ್ರಗಳ ಪೈಕಿ ಬಾಗಲಕೋಟೆಗಿಂತ ದಾವಣಗೆರೆ ಗೆಲ್ಲುವ ಸಾಧ್ಯತೆ ಬಗ್ಗೆ ಬಿಜೆಪಿಗೆ ವಿಶ್ವಾಸ
- ಕಾಂಗ್ರೆಸ್‌ನ ಆಂತರಿಕ ಬಿಕ್ಕಟ್ಟು ಪಕ್ಷಕ್ಕೆ ನೆರವಾಗಬಹುದೆಂಬುದು ಬಿಜೆಪಿಗರ ಲೆಕ್ಕಾಚಾರವಾಗಿತ್ತು
- ಹೀಗಾಗಿ ಭಿನ್ನಾಭಿಪ್ರಾಯ ಮರೆತು ಎರಡು ಕಡೆ ಪಕ್ಷದ ನಾಯಕರು ಒಟ್ಟಾಗಿ ಕೆಲಸ ಮಾಡಿದ್ದರು
- ಆದರೆ ನಾಯಕರ ಶ್ರಮ ಕಾಂಗ್ರೆಸ್‌ಗೆ ಸುಲಭ ಗೆಲುವು ತಪ್ಪಿಸಿತು. ಪಕ್ಷಕ್ಕೆ ಗೆಲುವು ತರಲಿಲ್ಲ
- ಈ ಹಿಂದಿನ ಸುರಪುರ, ಶಿಗ್ಗಾವಿ, ಸಂಡೂರು ಉಪಚುನಾವಣೆಯಲ್ಲೂ ಬಿಜೆಪಿಗೆ ಜಯವಿಲ್ಲ
- ಚನ್ನಪಟ್ಟಣದಲ್ಲಿ ಮಿತ್ರ ಪಕ್ಷ ಜೆಡಿಎಸ್ ಕಣಕ್ಕೆ ಇಳಿಸಿದ್ದರೂ ಅಲ್ಲಿ ಕಾಂಗ್ರೆಸ್ ಗೆಲುವು ಸಾಧಿಸಿತ್ತು

ಕನ್ನಡಪ್ರಭ
ಮಂಗಳವಾರ 5.05.2026

ಗರಿಷ್ಠ 39°c | ಕನಿಷ್ಠ 28°c

ಸುದ್ದಿ ಸಿಂಚನ

ಭಿಕ್ಷೆ ಬೇಡಿದಾಕೆ ಎಸ್ಸೆಸ್ಸೆಲ್ಸೀಲಿ ಸಾಧನೆ: ಡಿಸಿಯಿಂದ ಸನ್ಮಾನ

ಕಲಬುರಗಿ: ಭಿಕ್ಷೆ ಬೇಡಿಕೊಂಡು ಜೀವನ ಸಾಗಿಸುತ್ತಾ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಉತ್ತಮ ಅಂಕ ಗಳಿಸಿದ ಆಳಂದ ತಾಲೂಕಿನ ಮಾದನಹಿಪ್ಪರಗಾ ಸರ್ಕಾರಿ ಶಾಲೆಯ ವಿದ್ಯಾರ್ಥಿನಿ ಸುಜಾತಾ ಭೀಮಶಾ ಗೊಲ್ಲರ್‌ಅವರನ್ನು ಜಿಲ್ಲಾಧಿಕಾರಿ ಫೌಜಿಯಾ ತರನ್ನುಮ್ ಅವರು ಸನ್ಮಾನಿಸಿ ಶುಭ ಕೋರಿದರು. ಆಳಂದ ತಾಲೂಕಿನ ಮಾದನ ಹಿಪ್ಪರಗಾ ಸರ್ಕಾರಿ ಪಬ್ಲಿಕ್ ಶಾಲೆಯ 10ನೇ ತರಗತಿ ವಿದ್ಯಾರ್ಥಿನಿಯಾಗಿರುವ ಸುಜಾತಾ ಇವರು ತನ್ನ ಪೋಷಕರಿಗೆ ನೆರವಾಗಲು ಪಾತ್ರೆ ತೊಳೆದು, ಭಿಕ್ಷೆ ಬೇಡಿ 625 ಅಂಕಗಳಲ್ಲಿ 529 ಅಂಕಗಳನ್ನು ಪಡೆದು ಶೇ.84.64 ಫಲಿತಾಂಶ ಪಡೆದು ಗಮನ ಸೆಳೆದಿದ್ದಳು. ಸಂಕಷ್ಟಕರ ಪರಿಸ್ಥಿತಿಯಲ್ಲಿಯೇ ಅವರು ಸಾಧಿಸಿದ ಈ ಯಶಸ್ಸು ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದೆ ಎಂದು ಕನ್ನಡಪ್ರಭ ಏ. 26ರ ಸಂಚಿಕೆಯಲ್ಲಿ ಇವಳ ಬಗ್ಗೆ ವಿಸ್ತೃತ ವರದಿ ಕೂಡಾ ಮಾಡಿತ್ತು. ಈ ವಿದ್ಯಾರ್ಥಿನಿಯ ಈ ಸಾಧನೆಯನ್ನು ಗಮನಿಸಿದ ಜಿಲ್ಲಾಧಿಕಾರಿ ಫೌಜಿಯಾ ತರನ್ನುಮ್ ಅವರು, ಸುಜಾತಾ ಅವರನ್ನು ತಮ್ಮ ಕಚೇರಿಗೆ ಕರೆಯಿಸಿಕೊಂಡು ಸಿಹಿ ತಿನ್ನಿಸಿ ಸನ್ಮಾನಿಸಿ ಅವಳ ಮುಂದಿನ ಶೈಕ್ಷಣಿಕ ಸಾಧನೆಗೆ ಶುಭ ಕೋರಿದ್ದಾರೆ.

ಕಾಂಗ್ರೆಸ್ ಜಯಭೇರಿ: ಶಾಸಕ ಅಲ್ಲಮಪ್ರಭು ಹರ್ಷ

ಕಲಬುರಗಿ: ರಾಜ್ಯದಲ್ಲಿ ನಡೆದ ಬಾಗಲಕೋಟೆ ಹಾಗೂ ದಾವಣಗೆರೆ ವಿಧಾನಸಭಾ ಕ್ಷೇತ್ರಗಳ ಉಪ



ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳಿಬ್ಬರೂ ಜಯ ಗಳಿಸಿರೋದಕ್ಕೆ ಭಾರಿ ಸಂತಸ ಹೊರಹಾಕಿರುವ ಕಲಬುರಗಿ ದಕ್ಷಿಣ ಮತಕ್ಷೇತ್ರ ಶಾಸಕರಾದ ಅಲ್ಲಂಪ್ರಭು ಪಾಟೀಲರು, ರಾಜ್ಯ ಸರ್ಕಾರದ 3 ವರ್ಷದ ಸಾಧನೆಗಳಿಗೆ ಜನ ಬೆಂಬಲ ದೊರಕಿದೆ. ರಾಜ್ಯ ಸರ್ಕಾರ ತನ್ನ ಕಲ್ಯಾಣ ಯೋಜನೆಗಳಿಂದ 3 ವರ್ಷದ ಟೆಸ್ಟ್‌ನಲ್ಲಿ ಭಾರಿ ಅಂಕದೊಂದಿಗೆ ಪಾಸಾಗಿದೆ ಎಂದು ಹೇಳಿದ್ದಾರೆ. ಪತ್ರಿಕಾ ಹೇಳಿಕೆ ನೀಡಿರುವ ಅವರು, ಇದು ನಮ್ಮ ಸರ್ಕಾರದ ನುಡಿದಂತೆ ನಡೆಯುವ ಬದ್ಧತೆ ಮತ್ತು ಕಾಂಗ್ರೆಸ್ ಪಕ್ಷದ ಸೈದ್ಧಾಂತಿಕ ರಾಜಕೀಯಕ್ಕೆ ಸಂದ ಗೆಲುವು. ಈ ಗೆಲುವಿನ ಶ್ರೇಯಸ್ಸು ಮತದಾರರಿಗೆ ಸಲ್ಲುತ್ತದೆ. ಉಭಯ ಕ್ಷೇತ್ರಗಳಲ್ಲಿ ಹೋಗಿ ಪಕ್ಷದ ಅಭ್ಯರ್ಥಿಗಳಿಬ್ಬರ ಪರ ಪ್ರಚಾರ ಮಾಡಿರುವೆ. ಗೆಲುವು ಖುಷಿ ತಂದಿದೆ. ಯೋಜನೆಗಳಿಗೆ ಜನ ಬೆಬಂಲಿಸಿದ್ದಾರೆ. ಆ ಮೂಲಕ ವಿರೋಧ ಪಕ್ಷಗಳಿಗೆ ತಕ್ಕ ಸಂದೇಶ ರವಾನಿಸಿದ್ದಾರೆಂದು ಹೇಳಿದ್ದಾರೆ.

ಪದಾಧಿಕಾರಿಗಳ ಆಯ್ಕೆ

ಚಿತ್ತಾಪುರ: ಸಮಗ್ರ ಕರ್ನಾಟಕ ಉಪಾಧ್ಯಾಯರ ಪ್ರಗತಿಪರ ಸಂಘದ ನೂತನ ಪದಾಧಿಕಾರಿಗಳನ್ನು ನೇಮಕ ಮಾಡಿದ್ದು, ತಕ್ಷಣದಿಂದ ತಮಗೆ ವಹಿಸಿದ ಹುದ್ದೆಗಳಲ್ಲಿ ಸಕ್ರಿಯ ವಾಗಿ ತೊಡಗಿಸಿಕೊಂಡು ಸಂಘದ ಕಾರ್ಯಚಟುವಟಿಕೆ ಗಳಲ್ಲಿ ತೊಡಗಿ ಸಂಘದ ಬಲವರ್ಧನೆಗೆ ಶ್ರಮಿಸಬೇಕು ಎಂದು ಸಮಗ್ರ ಕರ್ನಾಟಕ ಉಪಾಧ್ಯಾ ಯರ ಪ್ರಗತಿಪರ ಸಂಘದ ಸಂಸ್ಥಾಪಕ ರಾಜ್ಯಾಧ್ಯಕ್ಷ ಗುರು ಪಾದ ಕೊಗನೂರ ತಿಳಿಸಿದ್ದಾರೆ. ರಾಜ್ಯ ಪ್ರಧಾನ ಕಾರ್ಯದರ್ಶಿ ಯನ್ನಾಗಿ ವೆಂಕಟರೆಡ್ಡಿ ಕರಡ್ಡಿ, ರಾಜ್ಯ ಕೋಶಾಧ್ಯಕ್ಷರನ್ನಾಗಿ ಶಾಕಿರ್‌ಹುಸೇನ್ ಕುಪನೂರ, ರಾಜ್ಯ ಉಪಾಧ್ಯಕ್ಷರನ್ನಾಗಿ ಕಲ್ಯಾಣರಾವ ಬಿರಾದಾರ, ರಾಜ್ಯ ಸಹ ಕಾರ್ಯದರ್ಶಿ ಯಾಗಿ ಮಹ್ಮದ್ ಈಶುಪ್, ರಾಜ್ಯ ಸಂಘಟನಾ ಕಾರ್ಯದರ್ಶಿಯನ್ನಾಗಿ ಮೌಲಾನ ಸಾಬ ಮುಖಂದಾರ, ಕಾಳಗಿ ತಾಲೂಕು ಘಟಕ ಅಧ್ಯಕ್ಷರಾಗಿ ಜಗನಾಥ ಬಿಜಾಪುರ, ಸದಾನಂದ ಪಾಟೀಲ್, ಮಹಿಳಾ ಸಾಹಿತ್ಯ ವೇದಿಕೆ ರಾಜ್ಯ ಅಧ್ಯಕ್ಷರಾಗಿ ಸುರೇಖಾ ಜೇವರ್ಗಿ, ರಾಜ್ಯ ಉಪಾಧ್ಯ ಕ್ಷರ ನ್ನಾಗಿ ಶ್ರೀದೇವಿ ರೆಡ್ಡಿ ಅವರನ್ನು ನೇಮಕ ಮಾಡಲಾಗಿದೆ ಎಂದು ತಿಳಿಸಿದ್ದಾರೆ.



ಭಿಕ್ಷೆ ಬೇಡಿಕೊಂಡು ಜೀವನ ಸಾಗಿಸುತ್ತಾ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಉತ್ತಮ ಅಂಕ ಗಳಿಸಿದ ಆಳಂದ ತಾಲೂಕಿನ ಮಾದನಹಿಪ್ಪರಗಾ ಸರ್ಕಾರಿ ಶಾಲೆಯ ವಿದ್ಯಾರ್ಥಿನಿ ಸುಜಾತಾ ಭೀಮಶಾ ಗೊಲ್ಲರ್ ಅವರನ್ನು ಜಿಲ್ಲಾಧಿಕಾರಿ ಫೌಜಿಯಾ ತರನ್ನುಮ್ ಅವರು ಸನ್ಮಾನಿಸಿ ಶುಭ ಕೋರಿದರು.



ದಾವಣಗೆರೆ ಮತ್ತು ಬಾಗಲಕೋಟೆ ಉಪಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಭರ್ಜರಿ ಜಯ ಸಾಧಿಸಿರುವ ಹಿನ್ನೆಲೆಯಲ್ಲಿ ಕಲಬುರಗಿಯಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಪಟಾಕಿ ಸಿಡಿಸಿ ಸಿಹಿ ಹಂಚಿ ವಿಜಯೋತ್ಸವ ಆಚರಿಸಿದರು. ಜಿಲ್ಲಾ ಅಧ್ಯಕ್ಷ ಜಗದೇವ ಗುತ್ತೇದಾರ ಮತ್ತು ಶಾಸಕರಾದ ಅಲ್ಲಂಪ್ರಭು ಪಾಟೀಲ್ ಅವರ ನೇತೃತ್ವದಲ್ಲಿ ಕಾಂಗ್ರೆಸ್ ಕಚೇರಿ ಬಳಿ ಕಾರ್ಯಕರ್ತರು ಸಂಭ್ರಮಾಚರಣೆ ನಡೆಸಿದರು.



ಯಲ್ಲಮ್ಮ ದೇವಿ ಜಾತ್ರೆ: ಉಚಿತ ಆರೋಗ್ಯ ಶಿಬಿರ

ಕರಜಗಿ: ಮಣ್ಣೂರ ಗ್ರಾಮದಲ್ಲಿ ಯಲ್ಲಮ್ಮ ದೇವಿ ಜಾತ್ರೆ ಅಂಗವಾಗಿ ತಾಲೂಕು ಪ್ರಾಥಮಿಕ ಆರೋಗ್ಯ ಕೇಂದ್ರ ಅಫಜಲಪುರ ಹಾಗೂ ಮಣ್ಣೂರ ಪ್ರಾಥಮಿಕ ಆರೋಗ್ಯ ಕೇಂದ್ರದ ವತಿಯಿಂದ ಸಮುದಾಯ ಆಧಾರಿತ ಆರೋಗ್ಯ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿತ್ತು. ಮಣ್ಣೂರ ಪ್ರಾಥಮಿಕ ಆರೋಗ್ಯ ಕೇಂದ್ರದ ಮುಖ್ಯ ವೈದ್ಯಾಧಿಕಾರಿ ಡಾ.ಸಂಜೀವಿನಿ ಜಾಧವ ಆರೋಗ್ಯ ತಪಾಸಣಾ ಶಿಬಿರ ಉದ್ಘಾಟಿಸಿದರು. ಆರೋಗ್ಯ ನಿರೀಕ್ಷಣಾಧಿಕಾರಿ ವಿಠ್ಠಲ ಬಡಿಗೇರ, ಸಿಎಚ್‌ಒ ಪ್ರಕಾಶ ಬಿರಾದಾರ, ಹಣಮಂತ ಅಲ್ಲಾಪೂರ, ಶ್ರೀಶೈಲ ಕಲಶೆಟ್ಟಿ, ಐಸಿಟಿಸಿ ಆಪ್ತ ಸಮಾಲೋಚಕ ರವಿಕುಮಾರ ಭುರಲಿ, ಪ್ರಯೋಗ ಶಾಲಾ ತಂತ್ರಜ್ಞ ಗೌತಮ ಮೈಸಲಗಿ, ಮೊಬೈಲ್ ಮೆಡಿಕಲ್ ಯೂನಿಟ್‌ನ ಶಿವರಾಜ, ಎಸ್.ವಾರಿಕ್, ನಾಜ್ಮೀನ್ ಸಾತ್ಕೇಡ, ಜ್ಯೋತಿ ಹಾಲು ಇದ್ದರು.

ಕಲಬುರಗಿ ಟ್ರಾಫಿಕ್‌ಗೆ ಎಐ ಕ್ಯಾಮೆರಾ ಮೂಗುದಾರ

ಪೊಲೀಸ್ ಇಲಾಖೆಯಿಂದ ಇಂಟಲಿಜಂಟ್ ಟ್ರಾಫಿಕ್ ಮ್ಯಾನೇಜ್ಮೆಂಟ್ ಸಿಸ್ಟಂ | 58 ಸ್ಥಳಗಳಲ್ಲಿ 180 ಎಐ ತಂತ್ರಜ್ಞಾನ ಆಧಾರಿತ ಕ್ಯಾಮೆರಾ

• **ಶೇಷಮೂರ್ತಿ ಅವಧಾನಿ**
ಕನ್ನಡಪ್ರಭ ವಾರ್ತೆ ಕಲಬುರಗಿ

ಕಲಬುರಗಿ ಮಹಾ ನಗರದ ಸಂಚಾರ ನಿಯಮ ಉಲ್ಲಂಘಿಸುವವರೇ ಇನ್ಮುಂದೆ ಹುಶಾರಾಗಿರಿ, ಹೆಲ್ಮೆಟ್ ಇಲ್ದೆ ಬಕ್ಕತಲೆಯಲ್ಲಿ ಬೈಕ್ ಸವಾರಿ ಮಾಡಿದ್ದಕ್ಕೋ, ಸೀಟ್ ಬೆಲ್ಟ್ ಹಾಕಿಲ್ಲವೆಂದೇ ಸಿಗ್ನಲ್ ಜಂಪ್, ತ್ರಿಬ್ಬಲ್ ರೈಡ್‌ನಲ್ಲಿದ್ದೀರಿ ಎಂದು ಕಲಬುರಗಿ ಪೊಲೀಸ್ರು ರಸ್ತೆ, ವೃತ್ತಗಳಲ್ಲೆಲ್ಲಾ ತಳಾಯಿಸಿ ಇನ್ಮುಂದೆ ನಿಮಗೆ ಫೈನ್ ಹಾಕೋದಿಲ್ಲ!

ಅರೇ, ಇದೊಳ್ಳೆ ಕಥೆಯಾಯ್ತು, ಫೈನ್ ಹಾಕೋದೇ ಇಲ್ಲವೆಂದ ಮೇಲೆ ಒಳ್ಳೆಯದ್ದೆ ಆಯ್ತಲ್ಲ! ಎಂದು ನೀವು ಖುಷಿಪಟ್ರೆ ಅದು ಮೂರ್ಖತನ, ತಂತ್ರಜ್ಞಾನ ಆಧಾರದಲ್ಲಿ ಸೈಲಂಟ್ ಆಗಿ ಕೆಲಸ ಮಾಡಲು ಮುಂದಾಗಿರುವ ಪೊಲೀಸರು ರೂಲ್ ಬ್ರೇಕರ್ಸ್‌ಅನ್ನು ಗುರುತಿಸಿ ಎಐ ಕ್ಯಾಮೆರಾ ಆಧಾರಿತ ದಂಡಾಸ್ತ್ರ ಪ್ರಯೋಗಕ್ಕೆ ಅಣಿಯಾಗಿದ್ದಾರೆ.

ಏಕೆಂದ್ರೆ ಜನ ಹಾಗೂ ವಾಹನ ದಟ್ಟಣೆ ಹೆಚ್ಚುತ್ತಿರುವ ಕಲಬುರಗಿ ಮಹಾ ನಗರದಲ್ಲಿನ ಸಂಚಾರ ವ್ಯವಸ್ಥೆ ಮೇಲೆ ಹದ್ದಿನ ಕಣ್ಣಿಡಲು, ಸಂಚಾರ ನಿಯಮಗಳನ್ನು ಉಲ್ಲಂಘನೆ ಮಾಡೋರನ್ನು ಮಟ್ಟ ಹಾಕಲು ಇಂಟಲಿಜಂಟ್ ಟ್ರಾಫಿಕ್ ಮ್ಯಾನೇಜ್ಮೆಂಟ್ ಸಿಸ್ಟಂ (ಐಟಿಎಂಎಸ್) ಅನುಷ್ಠಾನಕ್ಕೆ ಬಂದಿದೆ.

ಇದೇ ಮೇ ತಿಂಗಳ 1 ರಿಂದಲೇ ಈ ಸ್ಮಾರ್ಟ್ ಟ್ರಾಫಿಕ್ ನಿರ್ವಹಣಾ ವ್ಯವಸ್ಥೆ ಮಹಾನಗರದಲ್ಲಿ ಜಾರಿಗೆ ಬಂದಿರೋದರಿಂದ ಪೊಲೀಸರು ರಸೀದಿ ಹಿಡಿದೋ, ಬ್ಲಾಕ್ ಬೆರ್ರಿ ಯಂತ್ರ ಹಿಡಿದೋ ದಂಡ ಹಾಕಲು ನಿಲ್ಲೋದನ್ನು ಬಿಟ್ಟು ರೂಲ್ ಬ್ರೇಕರ್ಸ್‌ನ್ನು ಪತ್ತೆ ಹಚ್ಚಲು ಇನ್ನೂ ಸ್ಮಾರ್ಟ್ ದಾರಿ ಹುಡುಕಿದ್ದಾರೆ.

ಎಐ ತಂತ್ರಜ್ಞಾನ ಆಧಾರಿತ ಕ್ಯಾಮೆರಾ ಜಾಲ ನಗರದಾದ್ಯಂತ ಅಳವಡಿಸಿ ಸಂಚಾರ ನಿಯಮಗಳನ್ನು ಉಲ್ಲಂಘಿಸುವವರ ವಿರುದ್ಧ ದಂಡಾಸ್ತ್ರ ಪ್ರಯೋಗಕ್ಕೆ ಮುಂದಾಗಿದ್ದಾರೆ. ಇದೊಂಥರಾ ತಂತ್ರಜ್ಞಾನ ಆಧಾರಿತ ಹಾಗೂ ಪೊಲೀಸ್, ವಾಹನ ಚಾಲಕರು ಪರಸ್ಪರ ಮುಖಾ ಮುಖಿಯಾಗದೆ ಸಂಚಾರ ನಿಯಮ ಉಲ್ಲಂಘನೆ ಪತ್ತೆ ಹಚ್ಚಿ ದಂಡ ಪ್ರಯೋಗ ಮಾಡುವ ವ್ಯವಸ್ಥೆ ಎಂದು ಹೇಳಬಹುದಾಗಿದೆ.

ಐಟಿಎಂಎಸ್‌ಗೆ ಇ ಚಲನ್ ಮುನ್ನುಡಿ: ಕಲಬುರಗಿ ನಗರ ದಿನದಿಂದ ದಿನಕ್ಕೆ ನಾಗಾಲೋಟದಲ್ಲಿ ಬೆಳೆಯುತ್ತಿದೆ. ಜೊತೆಗೆ ವಾಹನ ದಟ್ಟಣೆಯೂ ಹೆಚ್ಚುತ್ತಿದೆ. ಇದನ್ನರಿತೇ ಪೊಲೀಸರು ಕಳೆದ 2025ರ ಜ. 22ರಿಂದಲೇ ನಗರದಲ್ಲಿ ಇ ಚಲನ್ ವ್ಯವಸ್ಥೆ ಜಾರಿಗೆ ತಂದು ಐಟಿಎಂಎಸ್‌ಗೆ ಮುನ್ನುಡಿ ಬರೆದಿದ್ದರು.

ಜ. 22 ರಿಂದ ಇಲ್ಲಿಯವರೆಗೂ ಕ್ಯಾಮೆರಾ ಮೂಲಕ ಹೆಲ್ಮೆಟ್ ಧರಿಸದ್ದಕ್ಕೆ- 10, 235, ಚಾಲನೆ ಸಮಯದಲ್ಲಿ ಸಮವಸ್ತ್ರ ಧರಿಸದ್ದಕ್ಕೆ 5003, , ಟ್ರಾಫಿಕ್ ಜಾಮ್‌ಗೆ ಕಾಣರಾಗಿದ್ದಕ್ಕೆ 4, 053, ಚಾಲನೆ ಸಂದರ್ಭದಲ್ಲಿ ಮೊಬೈಲ್ ಬಳಸಿದ್ದಕ್ಕೆ 3, 046, ಸಿಗ್ನಲ್ ಜಂಪ್ 2,466, ಬೈಕ್‌ಗಳ ಮೇಲೆ ಟ್ರಿಪಲ್ ರೈಡಿಂಗ್- 3526, ನೋ ಪಾರ್ಕಿಗ್‌ನಲ್ಲಿ ವಾಹನ ನಿಲುಗಡೆ ಮಾಡಿದ್ದಕ್ಕೆ 10, 235 ಪ್ರಕರಣ ಪತ್ತೆ ದಂಡ ವಿಧಿಸಿದ್ದರು. ಈ ಪೈಕಿ 12, 305 ಪ್ರಕರಣಗಳಲ್ಲಿ 67. 28 ಲಕ್ಷ ರು. ದಂಡ ವಸೂಲಿಯಾಗಿದ್ದು, ಇನ್ನುಳಿದ 36, 846 ಪ್ರಕರಣಗಳಲ್ಲಿ 2. 38 ಕೋಟಿ ರು. ದಂಡ ವಸೂಲಿ ಬಾಕಿ ಇದೆ.



ಕಲಬುರಗಿ ನಗರದ ಹೃದಯ ಭಾಗದಲ್ಲಿರುವ ಸದಾಕಾಲ ಜನ, ವಾಹನ ದಟ್ಟಣೆಯ ಪ್ರಮುಖವಾಗಿರುವಂತಹ ಸರ್ದಾರ್ ವಲ್ಲಭಭಾಯಿ ಪಟೇಲ್ ವೃತ್ತ.



ಕಲಬುರಗಿಯ ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ ಈಗಾಗಲೇ ಇ ಚಲನ್‌ನಿಂದ ನಾವು ನಿಮಗೆ ಜಾಗೃತಿ ಮಾಡಿದ್ದೇವೆ. ಇನ್ಮುಂದೆ ತಂತ್ರಜ್ಞಾನ ಆಧಾರಿತ ಕ್ಯಾಮೆರಾ ಕಾವಲಲ್ಲಿ ಇಡೀ ನಗರದ ಸಂಚಾರ ವ್ಯವಸ್ಥೆ ಇದೆ. ಸಂಚಾರ ನಿಯಮಗಳನ್ನು ಉಲ್ಲಂಘಿಸಿದರೆ ಕ್ಯಾಮೆರಾಗಳು ನೀಡುವ ಮಾಹಿತಿಯಿಂದ ಸ್ವಯಂಚಾಲಿತ ಚಲನ್ ಬರಲಿದೆ. ದಂಡ ಕಟ್ಟುವ ಬದಲು ಜಾಗ್ರತರಾಗಿರಿ, ಸಂಚಾರ ನಿಯಮ ಪಾಲಿಸಿ.

• **ಡಾ. ಶರಣಪ್ಪ ಎಸ್. ಢಗೆ** ನಗರ ಪೊಲೀಸ್ ಆಯುಕ್ತರು, ಕಲಬುರಗಿ

ಐಟಿಎಂಎಸ್‌ನಿಂದಿವೆ ಇವೆಲ್ಲ ಲಾಭ

1) ಎಐ ಆಧಾರಿತ ಪಾದಚಾರಿ ವ್ಯವಸ್ಥೆಯೂ ಇದ್ದು, ಜನರು ಜಿಬ್ರಾ ಕ್ರಾಸಿಂಗ್‌ನಲ್ಲಿರು ವಾಗ ಕ್ಯಾಮೆರಾಗಳು ಎಚ್ಚರ ನೀಡುತ್ತವೆ.
2) ಕ್ರಾಸ್‌ವಾಕ್‌ಗೆ ಪಾದಚಾರಿ ಬಂದಾಗ ಎಐ ದೃಷ್ಟಿ ಮಾಡ್ಯಾಡ್ಯೂಲ್ ಅದನ್ನು ಪತ್ತೆ ಹಚ್ಚಿ ಚಾಲಕರಿಗೆ ಎಚ್ಚರಿಸುತ್ತದೆ
3) ವಾಹನ ವೇಗದಲ್ಲಿ ಬರುತ್ತಿದ್ದರೆ ಧ್ವನಿ, ಸಂಕೇತದ ಮೂಲಕ ಪಾದಚಾರಿಗೂ ಎಚ್ಚರ ನೀಡಲಾಗುತ್ತದೆ.
4) ಸ್ವಯಂಚಾಲಿತ ಚಲನ್ ಉತ್ಪಾದನೆ ಸಾಮರ್ಥ್ಯವಿದೆ
5) ಮಾನವ ಪಾತ್ರ ಇಲ್ಲದ, ಸ್ವಯಂಚಾಲಿತ ಹಸ್ತಕ್ಷೇಪಕ್ಕೆ ಅವಕಾಶವಿಲ್ಲದಂತೆ ಕೆಲಸ
6) ಡೇಟಾ ಆಧಾರಿತ ನಿರ್ಧಾರ, ಸುಗಮ ಸಂಚಾರಕ್ಕೆ ಅನುಕೂಲ

ಪೊಲೀಸರಿಗಿವೆ ಇವೆಲ್ಲ ಅನುಕೂಲ

1) ತ್ವರಿತವಾಗಿ ಗುರುತಿಸುವಿಕೆ
2) ಡಾಟಾ ಬೇಸ್‌ನಿಂದ ಮುಖ ಹೊಂದಾಣಿಕೆ
3) ನೈಜ ಸಮಯ ಕಣ್ಗಾವಲು (Real&time Surveillance)
4) ಕಾಣೆಯಾದ ವ್ಯಕ್ತಿ, ಮಕ್ಕಳ ಟ್ರ್ಯಾಕಿಂಗ್
5) ತನಿಖೆ ದಕ್ಷತೆ, ಗುಣಮಟ್ಟದಲ್ಲಿ ಹೆಚ್ಚಳ

2ನೇ ದಿನವೇ 30 ಸಾವಿರ ಕೇಸ್ ಪತ್ತೆ!


ಕಲಬುರಗಿಯಲ್ಲಿ ಸಂಚಾರ ನಿಯಮಗಳ ಉಲ್ಲಂಘನೆ ಅದೆಷ್ಟಿದೆ ಎಂದರೆ ಐಟಿಎಂಎಸ್ ಜಾರಿಯಾದ ಮಾರನೆ ದಿನವೇ ಅಂದರೆ ಮೇ. 2ರ ಒಂದೇ ದಿನ ಸೀಟ್ ಬೆಲ್ಟ್ ಹಾಕದ 6, 323, ಚಾಲನೆಯಲ್ಲಿ ಮೊಬೈಲ್ ಬಳಕೆಯ 11, ಹೆಲ್ಮೆಟ್ ಧರಿಸದ 25, 526 ಸೇರಿದಂತೆ ವಿವಿದ 30 ಸಾವಿರ ಪ್ರಕರಣ ಎಐ ಕ್ಯಾಮೆರಾ ಜಾಲ ಗುರುತಿಸಿದೆ.

ಗಾಂಧಿ ಕುಟುಂಬ ಜಿಲ್ಲೆಗೆ ಏನು ಮಾಡಿದೆ: ಪಾಟೀಲ್

ಕೆಎಂಎಫ್ ಅಂಗಳದಲ್ಲಿ ನೆಹರು, ಇಂದಿರಾ, ರಾಜೀವ್‌ಗಾಂಧಿ ಮೂರ್ತಿ ಸ್ಥಾಪನೆಗೆ ವಿರೋಧ

• **ಕನ್ನಡಪ್ರಭ ವಾರ್ತೆ** ಕಲಬುರಗಿ

ನಗರದ ಗಂಜ್ ಪ್ರದೇಶದಲ್ಲಿ ಮಹಾನಗರ ಪಾಲಿಕೆ, ಕೆಎಂಎಫ್‌ಗೆ ಸಂಬಂಧಿಸಿದ ಸ್ಥಳಗಳಲ್ಲಿ ಮಾಜಿ ಪ್ರಧಾನಿಗಳಾದ ಜವಾಹರಲಾಲ್ ನೆಹರು, ಇಂದಿರಾಗಾಂಧಿ, ರಾಜೀವ್‌ಗಾಂಧಿ ಪ್ರತಿಮೆಗಳನ್ನು ಸ್ಥಾಪಿಸಲು ಹೊರಟಿರೋದು ತೀವ್ರ ವಿರೋಧಕ್ಕೆ ಗುರಿಯಾಗಿದೆ.



ಎಂಎಸ್ ಪಾಟೀಲ್

ಕಲ್ಯಾಣ ಕರ್ನಾಟಕ ಪ್ರತ್ಯೇಕ ರಾಜ್ಯ ಹೋರಾಟ ಸಮಿತಿ ಅಧ್ಯಕ್ಷ ಎಂ.ಎಸ್.ಪಾಟೀಲ ನರಿಬೋಳ, ಲಕ್ಷ್ಮೀಕಾಂತ ಸ್ವಾದಿ, ಗ್ರಾಮೀಣ ಅಭಿವೃದ್ಧಿ ಹೋರಾಟ ಸಮಿತಿ ಜಿಲ್ಲಾ ಅಧ್ಯಕ್ಷ ಶ್ರವಣಕುಮಾರ ನಾಯಕ್, ಶ್ರೀ ರಾಮ ಸೇನೆ ಜಿಲ್ಲಾ ಅಧ್ಯಕ್ಷ ಮಹೇಶ ಕೆಂಭಾವಿ ಇದನ್ನು ಕಟುವಾಗಿ ಖಂಡಿಸಿದ್ದಾರೆ.

ವಿಚಿತ್ರ ಅಂದರೆ ದೇಶದ ಘಟಾನುಘಟಿ ಮಾಜಿ ಪ್ರಧಾನಿಗಳನ್ನು ಕಡೆಗಣಿಸಿ ಒಂದೇ ಕುಟುಂಬದ ಮೂವರು ಪ್ರಧಾನಿಗಳ ಪ್ರತಿಮೆ ಸ್ಥಾಪನೆಗೆ ಎನ್ ಒಸಿಯನ್ನು ಪಡೆಯದೆ ಅಡಿಗಲ್ಲು ಹಾಕದೆ ಕದ್ದುಮುಚ್ಚಿ ಸದ್ದಿಲ್ಲದೆ ಕಾಮಗಾರಿ ಪ್ರಾರಂಭಿಸಿರೋದು ಅನುಮಾನಕ್ಕೆ ಎಡೆಮಾಡಿದೆ ಎಂದು ನರಿಬೋಳ ಹೇಳಿದ್ದಾರೆ.

ಕಲಬುರಗಿ ಮಹಾನಗರದಲ್ಲಿ ಪ್ರತಿಮೆಗಳನ್ನು ಸ್ಥಾಪಿಸುವುದೇ ಆಗಿದ್ದರೆ, ಜೈ ಜವಾನ್ ಜೈ ಕಿಸಾನ್ ಘೋಷಣೆಯಿಂದ ಅನ್ನದಾತನಿಗೆ ಗೌರವ ತಂದ ಮಾಜಿ ಪ್ರಧಾನಿ ಲಾಲ್ ಬಹದ್ದೂರ್‌ಶಾಸ್ತ್ರಿ ಪ್ರತಿಮೆ ಎಪಿಎಂಸಿಯಲ್ಲಿ ಸ್ಥಾಪಿಸಲಿ ಎಂದು ಆಗ್ರಹಿಸಿದ್ದಾರೆ. ಇಲ್ಲಿನ ಕೆಎಂಎಫ್ ಅಂಗಳದಲ್ಲಿ ಸ್ಥಾಪಿಸಲು ಹೊರಟಿರುವ ಮಾಜಿ ಪ್ರಧಾನಿ ರಾಜೀವ್ ಗಾಂಧಿ ಪುತ್ಥಳಿ ಬಗ್ಗೆಯೂ ಪಾಟೀಲ್ ಕಿಡಿ ಕಾರಿದ್ದಾರೆ. ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ತರುವಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಆಗಿನ ಪ್ರಭಾವಿ ಲಿಂಗಾಯತ ಮುಖಂಡರಲ್ಲೊಬ್ಬರಾಗಿದ್ದ ಮಾಜಿ ಮುಖ್ಯಮಂತ್ರಿ ವೀರೇಂದ್ರ ಪಾಟೀಲರನ್ನು ಅವಮಾನಕರ ರೀತಿಯಲ್ಲಿ ವಿಮಾನ ನಿಲ್ದಾಣದಲ್ಲೇ ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಸಿದ್ದ ಮಾಜಿ ಪ್ರಧಾನಿ ರಾಜೀವ್ ಗಾಂಧಿ ಪ್ರತಿಮೆ ಸ್ಥಾಪನೆ ಮಾಡೋದನ್ನು ಕೈಬಿಟ್ಟು, ಮಾಜಿ ರಾಷ್ಟ್ರಪತಿ ಡಾ.ಅಬ್ದುಲ್ ಕಲಾಂ ಪ್ರತಿಮೆ ಕೆಎಂಎಫ್‌ನಲ್ಲಿ ಕೂಡಿಸಲಿ, ಮಹಾನಗರ ಪಾಲಿಕೆಯಲ್ಲಿ ಇಂದಿರಾಗಾಂಧಿ ಪ್ರತಿಮೆಗೆ ಬದಲಾಗಿ ನಮ್ಮ ನೆರೆಯ ರಾಜ್ಯದವರಾದ ಪಿ. ವಿ. ನರಸಿಂಹರಾವ್ ಪ್ರತಿಮೆ ಸ್ಥಾಪಿಸಲಿ ಎಂದು ಆಗ್ರಹಿಸಿದ್ದಾರೆ.

ದೇಶದ ಎಲ್ಲಾ ಪ್ರಧಾನಿಗಳ ಹಾಗೂ ಕಲ್ಯಾಣ ಕರ್ನಾಟಕ ಪ್ರದೇಶ ವಿಮೋಚನೆಗಾಗಿ ಶ್ರಮಿಸಿದ ಮಹಾನುಭಾವರ, ಕಲಬುರ್ಗಿ ಜಿಲ್ಲೆಯಿಂದ ಮುಖ್ಯಮಂತ್ರಿಗಳಾಗಿದ್ದಂತಹವರ ಪ್ರತಿಮೆಗಳನ್ನು ಸ್ಥಾಪಿಸಲಿ. ಅದೆಲ್ಲವನ್ನು ಬಿಟ್ಟು ಒಂದೇ ಕುಟುಂಬದ ರಾಜಕಾರಣಿಗಳ ಪ್ರತಿಮೆ ಸ್ಥಾಪಿಸುವುದಕ್ಕೆ ಮುಂದಾದರೆ ಉಗ್ರ ಹೋರಾಟ ಅನಿವಾರ್ಯವಾಗುತ್ತದೆ ಎಂದು ಕಲ್ಯಾಣ ಕರ್ನಾಟಕ ಹೋರಾಟ ಸಮಿತಿಯ ಪರವಾಗಿ ಎಂಎಸ್ ಪಾಟೀಲ್ ಎಚ್ಚರಿಸಿದ್ದಾರೆ.

ಗಾಂಧಿ ಕುಟುಂಬ ಕಲಬುರಗಿಗೆ ಏನು ಮಾಡಿದೆ? ಏಕಾಏಕಿ ಈ ಪರಿಯಲ್ಲಿ ಇವರೆಲ್ಲರ ಪುತ್ಥಳಿ ಇಲ್ಲಿ ಯಾಕೆ ಬೇಕು, ಯಾರೋ ಇನ್ಯಾರನ್ನೋ ಮೆಚ್ಚಿಸಲು ಇವೆಲ್ಲ ಮಾಡುತ್ತ ಹೊರಟರೆ ಸುಮ್ಮನಿರಲಾಗದು. ಸಾರ್ವಜನಿಕರನ್ನು ಜಾಗೃತಗೊಳಿಸಿ, ಉಗ್ರ ಹೋರಾಟ ಸಂಘಟಿಸಲಾಗುತ್ತದೆ ಎಂದು ಪಾಟೀಲ್ ಹೇಳಿದ್ದಾರೆ.



ಕಲಬುರಗಿಯ ಕೆಎಂಎಫ್ ಅಂಗಳದಲ್ಲಿ ಪುತ್ಥಳಿ ಸ್ಥಾಪನೆಗಾಗಿ ನಡೆದಿರುವ ಕಾಮಗಾರಿ ನೋಟ.

ಬಿಜೆಪಿ ಗೆಲುವು: ಗುತ್ತೇದಾರ ಹರ್ಷ

ಆಳಂದ: ಪಂಚ ರಾಜ್ಯಗಳ ಚುನಾವಣೆಯಲ್ಲಿ ಭಾರತೀಯ ಜನತಾ ಪಕ್ಷಕ್ಕೆ ಮತದಾರರು ಅಭೂತಪೂರ್ವ ಬೆಂಬಲ ನೀಡಿರುವುದಕ್ಕೆ ಆಳಂದ ಮಾಜಿ ಶಾಸಕ ಸುಭಾಷ್ ಆರ್ ಗುತ್ತೇದಾರ ಹರ್ಷ ವ್ಯಕ್ತಪಡಿಸಿದ್ದಾರೆ. ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ದೇಶದಲ್ಲಿ ಪ್ರಧಾನಿ ನರೇಂದ್ರ ಮೋದಿ ಮತ್ತು ಅವರ ಸರ್ಕಾರದ ಬಗ್ಗೆ ಜನ ಉತ್ತಮ ಅಭಿಪ್ರಾಯ ಹೊಂದಿದ್ದಾರೆ ಎನ್ನುವುದಕ್ಕೆ ಈ ಫಲಿತಾಂಶವೇ ಸಾಕ್ಷಿಯಾಗಿದೆ. ಅಲ್ಲದೇ ಜನ ಯಾವತ್ತೂ ಅಭಿವೃದ್ಧಿ ರಾಜಕಾರಣವನ್ನು ಬಯಸುತ್ತಾರೆ ಎನ್ನುವುದು ಇದರಿಂದ ಸಾಬೀತಾಗಿದೆ ಎಂದು ಹೇಳಿದ್ದಾರೆ. ಪಶ್ಚಿಮ ಬಂಗಾಳದಲ್ಲಿ ಟಿಎಂಸಿಯ ದುರಾಡಳಿತ ಕೊನೆಗೊಂಡಿದೆ. ಅಲ್ಲಿ ಬಿಜೆಪಿ ಅಭೂತಪೂರ್ವ ಯಶಸ್ಸು ಕಂಡಿದೆ. ಅಸ್ಸಾಂನಲ್ಲಿ ಎಲ್ಲರ ಲೆಕ್ಕಾಚಾರ ತಲೆ ಕೆಳಗೆ ಮಾಡಿ ಸತತ ಎರಡನೇ ಬಾರಿ ಅಧಿಕಾರ ಹಿಡಿಯುವ ಮೂಲಕ ಬಿಜೆಪಿ ಜನರ ವಿಶ್ವಾಸ ವೃದ್ಧಿಸಿಕೊಂಡಿದೆ. ಮತದಾರರು ಪ್ರತಿಪಕ್ಷಗಳ ತುಷ್ಟೀಕರಣ ರಾಜಕಾರಣಕ್ಕಿಂತ ಬಿಜೆಪಿಯ ಅಭಿವೃದ್ಧಿ ರಾಜಕಾರಣದಲ್ಲಿ ಹೆಚ್ಚು ನಂಬಿಕೆ ಇಟ್ಟಿರುವುದು ಸ್ಪಷ್ಟವಾಗಿದೆ ಎಂದು ಹೇಳಿದ್ದಾರೆ. ಉಪ ಚುನಾವಣೆಯ ಸೋಲಿನ ಕೋರ್‌ಕಮಿಟಿ ಸಭೆಯಲ್ಲಿ ಚರ್ಚಿಸಲಾಗುವುದು ಎಂದಿದ್ದಾರೆ.



ಮುಕ್ತ ಪತ್ರಿಕೋದ್ಯಮಕ್ಕೆ ಬೆಂಬಲ ಅಗತ್ಯ: ಚಿಂತಕ ಎಚ್.ಬಿ.ಪಾಟೀಲ

ಅಂತಾರಾಷ್ಟ್ರೀಯ ಪತ್ರಿಕಾ ಸ್ವಾತಂತ್ರ್ಯ ದಿನಾಚರಣೆ



ಬಸವೇಶ್ವರ ಸಮಾಜ ಸೇವಾ ಬಳಗದ ವತಿಯಿಂದ ಜರುಗಿದ ಅಂತಾರಾಷ್ಟ್ರೀಯ ಪತ್ರಿಕಾ ಸ್ವಾತಂತ್ರ ದಿನಾಚರಣೆ ಕಾರ್ಯಕ್ರಮವನ್ನು ಚಿಂತಕ ಎಚ್.ಬಿ.ಪಾಟೀಲ ಉದ್ಘಾಟಿಸಿದರು.

ಕಲಬುರಗಿ: ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗಗಳ ಚಟುವಟಿಕೆಗಳ ಬಗ್ಗೆ ನಿಗಾ ವಹಿಸಿ, ದೇಶದ ಸಮಸ್ಯೆಗಳ ಬಗ್ಗೆ ಮೇಲಿಂದ ಮೇಲೆ ಬೆಳಕು ಚೆಲ್ಲಿ, ಅದಕ್ಕೆ ಪರಿಹಾರವನ್ನು ಹುಡುಕುವಂತೆ ಮಾಡಿ ಸ್ವಸ್ಥ, ಸದೃಢ ರಾಷ್ಟ್ರ ನಿರ್ಮಾಣಕ್ಕೆ 'ಮಾಧ್ಯಮ ರಂಗ' ತನ್ನದೇ ಆದ ಅದ್ವಿತೀಯ ಕೊಡುಗೆಯನ್ನು ನೀಡುತ್ತಿದೆ. ಸಮಾಜಕ್ಕೆ ಸ್ವತಂತ್ರ, ನಿರ್ಭೀತ, ನ್ಯಾಯಯುತ ಪತ್ರಿಕೋದ್ಯಮ ಅಗತ್ಯ. ಪತ್ರಿಕೋದ್ಯಮವು ಮುಕ್ತವಾಗಿ ಕಾರ್ಯನಿರ್ವಹಿಸಲು ಬೆಂಬಲ ನೀಡುವುದು ಅವಶ್ಯಕವಾಗಿದೆ ಎಂದು ಉಪನ್ಯಾಸಕ, ಚಿಂತಕ ಎಚ್.ಬಿ.ಪಾಟೀಲ ಅಭಿಮತ ವ್ಯಕ್ತಪಡಿಸಿದರು.

ನಗರದ ಖಾದ್ರಿ ಚೌಕ್‌ನಲ್ಲಿನ ಸಕ್ಸಸ್ ಕಂಪ್ಯೂಟರ್ ತರಬೇತಿ ಕೇಂದ್ರದಲ್ಲಿ ಬಸವೇಶ್ವರ ಸಮಾಜ ಸೇವಾ ಬಳಗದ ವತಿಯಿಂದ ಜರುಗಿದ ಅಂತಾರಾಷ್ಟ್ರೀಯ ಪತ್ರಿಕಾ ಸ್ವಾತಂತ್ರ ದಿನಾಚರಣೆಯನ್ನು ಉದ್ಘಾಟಿಸಿ ಮಾತನಾಡಿದರು.

ರಾಷ್ಟ್ರದ ಹಿತ ಬಂದಾಗ, ನ್ಯಾಯವನ್ನು ಒದಗಿಸಿಕೊಡಲು ಪತ್ರಕರ್ತರಿಗೆ ಧೈರ್ಯ, ನಿರ್ಭೀತಿಯಿಂದ ಬರೆಯಲು ಪೂರಕವಾದ ವಾತಾವರಣ ಅಗತ್ಯ. ಸಮಾಜದ ಒಳಿತಿಗಾಗಿ ಹರಿತವಾದ ಬರವಣಿಗೆಯ ಮೂಲಕ ನ್ಯಾಯವನ್ನು ಒದಗಿಸಿಕೊಟ್ಟು, ಪ್ರಾಣತ್ಯಾಗ ಮಾಡಿದ ಪತ್ರಕರ್ತರನ್ನು ಮರೆಯುವಂತಿಲ್ಲ. ಸಮಾಜ ಎದುರಿಸುತ್ತಿರುವ ಜ್ವಲಂತ ಸಮಸ್ಯೆಗಳನ್ನು ಸರ್ಕಾರದ ಗಮನಕ್ಕೆ ತಂದು, ಸರ್ಕಾರದ ವಿವಿಧ ಯೋಜನೆಗಳನ್ನು ಜನರಿಗೆ ಮುಟ್ಟಿಸುವ ಕಾರ್ಯ ಮಾಡುವ ಮೂಲಕ, ಸಾಮಾಜಿಕ ನ್ಯಾಯವನ್ನು ಎತ್ತಿ ಹಿಡಿಯುವಲ್ಲಿ ಮಾಧ್ಯಮಗಳು ಮೊದಲಿನಿಂದಲೂ ಕಾರ್ಯನಿರ್ವಹಿಸುತ್ತಿವೆ. ಪತ್ರಿಕಾ ಧರ್ಮ ಕಾಪಾಡುವ, ಸಾಹಸಿ ಪತ್ರಕರ್ತರಿಗೆ ಬೆಂಬಲ ನೀಡುವುದು ಅಗತ್ಯವಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಸಂಸ್ಥೆಯ ಅಧ್ಯಕ್ಷ ಅಸ್ಲಾಂ ಶೇಖ್, ಶಿಕ್ಷಕಿಯರಾದ ಪೂಜಾ ಹೂಗಾರ, ಕಾವೇರಿ ಹೌದೆ, ಮುಸ್ಕಾನ್ ಶೇಖ್ ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಬೃಹತ್ ಬಹಿರಂಗ ಸಮಾರಂಭ | ಇಂದಿನಿಂದ ಮೂರು ದಿನಗಳ ಕಾಲ ಕಾರ್ಯಕ್ರಮ: ಶಿವಪುತ್ರ, ನಡಗೇರಿ, ಸೂರ್ಯಕಾಂತ ಸಾಲೇಗಾಂವ ಮಾಹಿತಿ

ಆಳಂದದಲ್ಲಿಂದು ಡಾ. ಅಂಬೇಡ್ಕರ್ ಜಯಂತಿಗೆ ಚಾಲನೆ

• **ಕನ್ನಡಪ್ರಭ ವಾರ್ತೆ** ಆಳಂದ

ಡಾ. ಬಿ.ಆರ್. ಅಂಬೇಡ್ಕರ್‌ಅವರ ಜಯಂತಿ ಅಂಗವಾಗಿ ಪಟ್ಟಣದಲ್ಲಿ ಮೇ 5ರಿಂದ ಮೂರು ದಿನಗಳ ಕಾಲ ವಿಶೇಷ ಹಾಗೂ ಅರ್ಥಪೂರ್ಣ ಉತ್ಸವವನ್ನು ಆಚರಿಸಲಾಗುತ್ತಿದೆ, ಹೆಚ್ಚಿನ ಸಂಖ್ಯೆಯಲ್ಲಿ ಜಿಲ್ಲೆಯ ಹಾಗೂ ತಾಲೂಕಿನ ಸಾರ್ವಜನಿಕರು ಪಾಲ್ಗೊಳ್ಳಬೇಕು ಎಂದು ಉತ್ಸವದ ಪ್ರಚಾರ ಸಮಿತಿ ಅಧ್ಯಕ್ಷ ಶಿವಪುತ್ರ ನಡಗೇರಿ ಮತ್ತು ಅಧ್ಯಕ್ಷ ಸೂರ್ಯಕಾಂತ ಸಾಲೇಗಾಂವ ಹೇಳಿದರು.

ಪಟ್ಟಣದಲ್ಲಿ ಈ ಕುರಿತು ಕಾರ್ಯಕ್ರಮದ ಪ್ರಚಾರದ ವಾಲ್‌ಪೋಸ್ಟ್ ಬಿಡುಗಡೆಗೊಳಿಸಿ ಮಾತನಾಡಿದ ಅವರು, ಪ್ರಥಮ ಬಾರಿಗೆ ಸ್ಥಳೀಯ ಭೀಮನಗರದ ತಾಲೂಕು ಮಟ್ಟದ ಸಮಿತಿಯ ಆಶ್ರಯದಲ್ಲಿ ಈ ಉತ್ಸವವನ್ನು ಹಮ್ಮಿಕೊಳ್ಳಲಾಗಿದೆ ಎಂದು ಹೇಳಿದರು.

ಮೇ 5ರಂದು ಸಂಜೆ 7:00ಗಂಟೆಗೆ ಪಟ್ಟಣದ ಭೀಮನಗರದಲ್ಲಿ ಬಾಬಾ ಸಾಹೇಬ್ ಡಾ.ಬಿ.ಆರ್.ಅಂಬೇಡ್ಕರ್‌ಅವರ ಜೀವನ ಮತ್ತು ಸಂದೇಶ ಕುರಿತಾದ ನಾಟಕ ಪ್ರದರ್ಶನ ನಡೆಯುವುದು. ಮೇ 6ರಂದು ಸಂಜೆ 5:00 ಗಂಟೆಗೆ ಪಟ್ಟಣದ ಶ್ರೀರಾಮ ಮಾರುಕಟ್ಟೆಯಲ್ಲಿ ಬೃಹತ್ ಬಹಿರಂಗ ಸಮಾರಂಭ ನಡೆಯಲಿದೆ. ಸಾನ್ನಿಧ್ಯವನ್ನು ಮೈಸೂರು ಉರಿಲಿಂಗ ಪೆದ್ದಿ ಮಠದ ಶ್ರೀ ಜ್ಞಾನ ಪ್ರಕಾಶ ಸ್ವಾಮೀಜಿ, ಅಣದೂರ ಬುದ್ಧ ವಿಹಾರದ ಬಂತೇ ವರಜ್ಯೋತಿ ಥೆರೋ ನೇತೃತ್ವ ವಹಿಸುವರು. ನಿರಗುಡಿಯ ಹವಾ ಮಲ್ಲಯ್ಯಾ ಮುತ್ತ್ಯಾ, ಶಾಸಕ ಬಿ.ಆರ್. ಪಾಟೀಲ, ಮಾಜಿ ಶಾಸಕ ಸುಭಾಷ ಗುತ್ತೇದಾರ ಆಗಮಿಸುವರು.

ಉದ್ಘಾಟನೆಯನ್ನು ಮಾಜಿ ಸಚಿವ ಎನ್. ಮಹೇಶ ನೆರವೇರಿಸುವರು. ಅಧ್ಯಕ್ಷತೆ ಸಮಿತಿ ಗೌರವ ಅಧ್ಯಕ್ಷ ಪಾಂಡುರಂಗ ಮೊದಲೆ, ಉದ್ಯಮಿ ಸಿ.ಕೆ.ಪಾಟೀಲ ವಹಿಸುವರು. ಜೆಡಿ(ಎಸ್) ಜಿಲ್ಲಾಧ್ಯಕ್ಷೆ ಮಹೇಶ್ವರಿ ಎಸ್. ವಾಲಿ, ಜಿಪಂ ಮಾಜಿ ಸದಸ್ಯ ಹರ್ಷಾನಂದ ಗುತ್ತೇದಾರ, ಕೆಎಂಎಫ್ ಅಧ್ಯಕ್ಷ ಆರ್.ಕೆ. ಪಾಟೀಲ, ರಾಜಕುಮಾರ ಎಚ್. ಕಪನೂರ, ದಲಿತ ಸೇನೆ ರಾಜ್ಯಾಧ್ಯಕ್ಷ ಹಣಮಂತ ಯಳಸಂಗಿ ಆಗಮಿಸುವರು. ರಾಜ್ಯಸಭಾ ಸದಸ್ಯೆ ಜ್ಯೋತಿ ವಾಘ್ಮೋರೆ, ಸೇರಿದಂತೆ ಅನೇಕ ಅಧಿಕಾರಿಗಳು, ಧಾರ್ಮಿಕ ಮುಖಂಡರು ಭಾಗವಹಿಸಲಿದ್ದಾರೆ ಎಂದರು.

ಮೇ 7ರಂದು ಬುದ್ಧ, ಬಸವ ಮತ್ತು ಡಾ. ಬಿ.ಆರ್. ಅಂಬೇಡ್ಕರ್‌ಅವರ ಭಾವಚಿತ್ರಗಳೊಂದಿಗೆ ಪಟ್ಟಣದ ಪ್ರಮುಖ ರಸ್ತೆಗಳಲ್ಲಿ ದಿನವಿಡೀ ಭವ್ಯ ಮೆರವಣಿಗೆ ಹಮ್ಮಿಕೊಳ್ಳಲಾಗಿದೆ. ಈ ಮುನ್ನದಿನವಾದ ಮೇ 6ರಂದು ನಡೆಯುವ ಭಾರಿ ಬಹಿರಂಗ ಸಮಾರಂಭಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು ಪಾಲ್ಗೊಂಡು ಯಶಸ್ವಿಗೊಳಿಸಬೇಕು ಎಂದು ಅವರು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಉಪಾಧ್ಯಕ್ಷ ಗಂಗಾರಾಮ ಮುದಗಲೆ, ನಾಗರಾಜ ದೇವನೂರ, ಲಕ್ಷ್ಮಣ ಝುಳಕಿಕರ್, ದಯಾನಂದ ಸಾಲೇಗಾಂವ, ಮುತ್ತಣ್ಣಾ ಜಂಗಲೆ, ಮತ್ತಿತರರು ಇದ್ದರು.



ಡಾ. ಬಿ.ಆರ್. ಅಂಬೇಡ್ಕರ್‌ಜಯಂತಿ ಹಾಗೂ ಉತ್ಸವದ ವಾಲ್‌ಪೋಸ್ಟ್‌ರನ್ನು ಶಿವಪುತ್ರ, ನಡಗೇರಿ ಮತ್ತು ಅಧ್ಯಕ್ಷ ಸೂರ್ಯಕಾಂತ ಸಾಲೇಗಾಂವ ಜಂಟಿಯಾಗಿ ಬಿಡುಗಡೆಗೊಳಿಸಿದರು.

ವಿಮೆ ಸೌಲಭ್ಯವನ್ನು ಉತ್ತಮ ಕಾರ್ಯಕ್ಕೆ ಬಳಸಿಕೊಳ್ಳಿ

ಅರುಣಕುಮಾರ ಪಾಟೀಲ | ಕೆಕೆಆರ್‌ಟಿಸಿ ಇಬ್ಬರು ಮೃತ ನೌಕರರ ಕುಟುಂಬಕ್ಕೆ ತಲಾ 1 ಕೋಟಿ ರು. ಪರಿಹಾರ ವಿತರಣೆ

• **ಕನ್ನಡಪ್ರಭ ವಾರ್ತೆ** ಕಲಬುರಗಿ

ಅಪಘಾತದಲ್ಲಿ ಮೃತಪಟ್ಟ ಕೆ.ಕೆ.ಆರ್.ಟಿ.ಸಿಯ ಕರ್ತವ್ಯ ನಿರತ ಹಾಗೂ ವೈಯಕ್ತಿಕ ಅಪಘಾತದಲ್ಲಿ ಮೃತಪಟ್ಟ ನೌಕರರ ಇಬ್ಬರು ಅವಲಂಬಿತರಿಗೆ ತಲಾ ₹1 ಕೋಟಿ ಪರಿಹಾರ ಚೆಕ್‌ಗಳನ್ನು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ ಅಧ್ಯಕ್ಷ ಅರುಣಕುಮಾರ ಎಂ.ವೈ. ಪಾಟೀಲ್ ವಿತರಿಸಿದರು.

ಸೋಮವಾರ ನಗರದ ಕೆ. ಕೆ.ಆರ್.ಟಿ.ಸಿ ನಿಗಮದ ಕೇಂದ್ರ ಕಚೇರಿಯಲ್ಲಿ ಸಭಾಂಗಣದಲ್ಲಿ ಸಂಸ್ಥೆಯು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಜೊತೆಗಿನ ಒಪ್ಪಂದದನ್ವಯ ಅಪಘಾತದಲ್ಲಿ ನಿಧನರಾದ ನಿಗಮದ ಕೊಪ್ಪಳ ವಿಭಾಗದ ಕುಕನೂರನಲ್ಲಿ ನಿರ್ವಾಹಕನಾಗಿ ಕಾರ್ಯನಿರ್ವಹಿಸುತ್ತಿದ್ದ ನೌಕರ ಉಮೇಶ ಮತ್ತು ಯಾದಗಿರಿ ವಿಭಾಗದ ಯಾದಗಿರಿಯಲ್ಲಿ ಚಾಲಕನಾಗಿ ಕಾರ್ಯನಿರ್ವಹಿಸುತ್ತಿದ್ದ ರವಿ ಅವರ ಕುಟುಂಬಸ್ಥರಾದ ಕ್ರಮವಾಗಿ ವಿಜಯಲಕ್ಷ್ಮಿ ಮತ್ತು ಪಾರ್ವತಿ ಅವರಿಗೆ ತಲಾ 1 ಕೋಟಿ ರು. ಗಳ ಪರಿಹಾರ ಮೊತ್ತ ವಿತರಣೆ ಮಾಡಲಾಯಿತು. ಇದಲ್ಲದೆ ಸಂಸ್ಥೆಯ ಆಂತರಿಕ ಗುಂಪು ವಿಮಾ ಯೋಜನೆ ಅಡಿಯಲ್ಲಿ ಮೃತಪಟ್ಟ 7 ಜನ ನೌಕರರ ಅವಲಂಬಿತರಿಗೂ ತಲಾ 10 ರಿಂದ 12.50 ಲಕ್ಷ ರು. ವರೆಗೆ ಪರಿಹಾರ ಮೊತ್ತ ವಿತರಣೆ ಮಾಡಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಅರುಣಕುಮಾರ ಪಾಟೀಲ ಅವರು, ಮೃತಪಟ್ಟವರ ಜೀವ ಅಮೂಲ್ಯವಾದದ್ದು. ಅದನ್ನು ಮರಳಿ ತರಲಾಗುವುದಿಲ್ಲ. ಆದರೆ, ಅವರ ಕುಟುಂಬದ ಆರ್ಥಿಕ ಸ್ವಾವಲಂಬನೆ ಹಾಗೂ ಮಕ್ಕಳ ವಿದ್ಯಾಭ್ಯಾಸಕಾಗಿ ನಿಗಮವು ರೂಪಿಸಿರುವ 1 ಕೋಟಿ ರು. ವಿಮೆ ಯೋಜನೆ ದೂರದೃಷ್ಟಿಯನ್ನು ಹೊಂದಿದೆ. ಅಪಘಾತದಲ್ಲಿ ಮೃತಪಟ್ಟ 2 ಕುಟುಂಬಕ್ಕೆ ಈ ವಿಮೆ ನೀಡಲಾಗಿದೆ ಎಂದರು.



ಕೆ.ಕೆ.ಆರ್.ಟಿ.ಸಿ ವ್ಯವಸ್ಥಾಪಕ ನಿರ್ದೇಶಕಿ ಡಾ. ಬಿ. ಸುಶೀಲಾ ಅವರು ಮಾತನಾಡಿ, ಅಪಘಾತದಲ್ಲಿ ಮೃತ ನೌಕರರ ಕುಟುಂಬಗಳಿಗೆ ಬ್ಯಾಂಕಿನೊಂದಿಗೆ ಮಾಡಿಕೊಂಡ ಒಪ್ಪಂದದಂತೆ ಇಂದಿಲ್ಲಿ ಆರ್ಥಿಕ ನೆರವನ್ನು ಒದಗಿಸಲಾಗಿದೆ. ನಿಗಮದಲ್ಲಿ ಸಿಬ್ಬಂದಿ ಕಷ್ಟಪಟ್ಟು ಕೆಲಸ ಮಾಡುತ್ತಾರೆ. ಅವರಿಗೆ ನೀಡಬೇಕಾದ ಎಲ್ಲ ಸೌಲಭ್ಯಗಳನ್ನು ಕಲ್ಪಿಸಿ ಕೊಡಬೇಕಾದ್ದು ಸಂಸ್ಥೆಯ ಜವಾಬ್ದಾರಿಯಾಗಿದ್ದು, ಅದನ್ನು ಕೆ.ಕೆ.ಆರ್.ಟಿ.ಸಿ ಸಮರ್ಥವಾಗಿ ಮಾಡುತ್ತಿದೆ. ಪರಿಹಾರ ಮೊತ್ತ ಪಡೆದ ಕುಟುಂಬಸ್ಥರು ಸರಿಯಾದ ರೀತಿಯಲ್ಲಿ ಬಳಸಿಕೊಳ್ಳಬೇಕು. ಮಕ್ಕಳ ವಿದ್ಯಾಭ್ಯಾಸಕ್ಕೆ ಹಣ ತೆಗೆದಿಡುವಂತೆಯೂ ಕುಟುಂಬಸ್ಥರಿಗೆ ಸಲಹೆ ನೀಡಿದರು. ಸಂಸ್ಥೆಯಲ್ಲಿ ಕಳೆದ 2022 ರಿಂದ 2026 ರವರೆಗೆ ಸೇವಾವಧಿಯಲ್ಲಿ ನಿಧನರಾದ ನೌಕರರ ಅವಲಂಬಿತರಿಗೆ ಆಂತರಿಕ ಗುಂಪು ವಿಮಾ ಯೋಜನೆಯಡಿ ಇದೂವರೆಗೆ ತಲಾ 10 ಲಕ್ಷ ರು. ಗಳಂತೆ 380 ಪ್ರಕರಣಗಳಲ್ಲಿ ಒಟ್ಟು ರು. 38 ಕೋಟಿ ರು. ಪರಿಹಾರ ನೀಡಲಾಗಿದೆ ಎಂದರು. ಎಸ್.ಬಿ.ಐ ಬ್ಯಾಂಕ್ ಪ್ರಾದೇಶಿಕ ವ್ಯವಸ್ಥಾಪಕ ಅನಿಲ ಬಿಹಾರಿ ಅವರು ಮಾತನಾಡಿ, ಅಪಘಾತಕ್ಕೊಳಗಾಗುವ ಸಿಬ್ಬಂದಿಗೆ ತುರ್ತು ನೆರವು ಒದಗಿಸುವ ಪ್ರಕ್ರಿಯೆಯನ್ನು ಬ್ಯಾಂಕ್‌ನಲ್ಲಿ ಸರಳೀಕರಿಸಲಾಗಿದೆ ಎಂದರು.

ಎಸ್.ಬಿ.ಐ ಬ್ಯಾಂಕ್ ಮುಖ್ಯ ವ್ಯವಸ್ಥಾಪಕ ರಾಹುಲ್ ಮಿತ್ತಲ್, ಎಸ್. ಬಿ.ಐ ಬ್ಯಾಂಕ್ ಮುಖ್ಯ ಪ್ರಬಂಧಕ ರಾಜೇಶ ಕುಮಾರ್ ನಾಯ್ಕ, ವಿಜಯನಗರ ಶಾಖಾ ಮುಖ್ಯಸ್ಥ ಶರಣಕುಮಾರ, ಮುಖ್ಯ ಲೇಖಾಧಿಕಾರಿ ಬಸವರಾಜ ಬೆಳಗಾವಿ, ಮುಖ್ಯ ಭದ್ರತಾ ಮತ್ತು ಕಾನೂನು ಅಧಿಕಾರಿ ಎಸ್.ಭಾವಿಕಟ್ಟಿ, ವಿಭಾಗದ ಕಾರ್ಮಿಕ ಕಲ್ಯಾಣಾಧಿಕಾರಿ ಮಹಿಪಾಲ ಬೇಗಾರ, ಮುಖ್ಯ ತಾಂತ್ರಿಕ ಶಿಲ್ಪಿ ಸಂತೋಷ ಗೋಗೇರಿ ಉಪಸ್ಥಿತರಿದ್ದರು.

ಬಿಜೆಪಿ ಗೆಲುವಿಗೆ ಯಾದಗಿರಿಯಲ್ಲಿ ವಿಜಯೋತ್ಸವ

ದೀದಿ ಹೋದ್ರು, ದುರ್ಗಾ ಬಂದರು ಎಂಬ ಘೋಷಣೆಯೊಂದಿಗೆ ಸಂಭ್ರಮಾಚರಣೆ

• **ಕನ್ನಡಪ್ರಭ ವಾರ್ತೆ** ಯಾದಗಿರಿ

ಪಶ್ಚಿಮ ಬಂಗಾಳ, ಪುದುಚೇರಿ ಹಾಗೂ ಅಸ್ಸಾಂನಲ್ಲಿ ಬಿಜೆಪಿ ಅಭೂತಪೂರ್ವ ಜಯ ಗಳಿಸಿದ ಹಿನ್ನೆಲೆ, ಜಿಲ್ಲಾ ಬಿಜೆಪಿಯಿಂದ ಸಂಭ್ರಮಾಚರಣೆ ಮಾಡಲಾಯಿತು. ಪಶ್ಚಿಮ ಬಂಗಾಳದಲ್ಲಿ ಪಡೆದ ಜಯಕ್ಕಾಗಿ, ದೀದಿ ಹೋದ್ರು, ದುರ್ಗಾ ಬಂದರು ಎಂಬ ಘೋಷಣೆಯೊಂದಿಗೆ ಸಂಭ್ರಮಾಚರಣೆ ನಡೆಸಿದರು.

ನಗರದ ನೇತಾಜಿ ಸುಭಾಷ್ಚಂದ್ರ ಭೋಸ್ ವೃತ್ತದಲ್ಲಿ ಬಿಜೆಪಿ ಕಾರ್ಯಕರ್ತರು ಪಟಾಕಿ ಸಿಡಿಸಿ, ಸಿಹಿ ಹಂಚಿದರು. ಈ ವೇಳೆ, ಬಿಜೆಪಿ ಪಕ್ಷಕ್ಕೆ ಹಾಗೂ ಪ್ರಧಾನ ಮಂತ್ರಿ ನರೇಂದ್ರ ಮೋದಿ ಮತ್ತು ಅಮಿತ್ ಶಾ ಅವರಿಗೆ ಜಯಕಾರ ಹಾಕಿದರು. ಈ ವೇಳೆ ಮಾತನಾಡಿದ ಮುಖಂಡರು ನಮ್ಮ ದೇಶದಲ್ಲಿ ನಡೆದ ಪಂಚರಾಜ್ಯಗಳ ಚುನಾವಣೆಯಲ್ಲಿ ಮತದಾರರು ಸ್ಪಷ್ಟವಾಗಿ, ಮೋದಿ ಹಾಗೂ ಭಾರತೀಯ ಜನತಾ ಪಕ್ಷದ ಪರವಾಗಿ ನಿಲುವನ್ನು ವ್ಯಕ್ತಪಡಿಸುವುದನ್ನು ಫಲಿತಾಂಶದ ಮೂಲಕ ನೋಡುತ್ತಿದ್ದೇವೆ ಎಂದಿದ್ದಾರೆ.

ಐದು ರಾಜ್ಯಗಳಲ್ಲಿ ನಡೆದ ಚುನಾವಣೆಯಲ್ಲಿ ಎನ್‌ಡಿಎ ನಾಲ್ಕು ರಾಜ್ಯಗಳಲ್ಲಿ ಸರ್ಕಾರ ರಚನೆ ಮಾಡಬಹುದಾಗಿದೆ. ಪಶ್ಚಿಮ ಬಂಗಾಳದಲ್ಲಿ ಸರ್ಕಾರ ರಚನೆ ಸ್ಪಷ್ಟವಾಗಿ ಕಾಣುತ್ತಿದೆ. ಅಸ್ಸಾಂನಲ್ಲಿ ಹ್ಯಾಟ್ರಿಕ್ ಜಯ ಸಾಧಿಸಿ ಮತ್ತೊಮ್ಮೆ ಸರ್ಕಾರ ರಚನೆ ಮಾಡುತ್ತಿದ್ದೇವೆ. ಪುದುಚೇರಿಯಲ್ಲಿ ಸಹ ಎರಡನೇ ಬಾರಿ ಸರ್ಕಾರ ರಚನೆ ಮಾಡುತ್ತಿದ್ದೇವೆ. ತಮಿಳುನಾಡಿನಲ್ಲಿಯೂ ಎನ್‌ಡಿಎ ಬೆಂಬಲದಿಂದ ಸರ್ಕಾರ ರಚನೆ ಮಾಡುವ ವಿಶ್ವಾಸವಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ರಾಜ್ಯ ಕಾರ್ಯಕಾರಿಣಿ ಸದಸ್ಯ ಮಹೇಶರಡ್ಡಿ ಮುದ್ನಾಳ, ಹಿರಿಯ ಮುಖಂಡೆ ನಾಗರತ್ನ ಕುಪ್ಪಿ, ಅಲೆಮಾರಿ ಅರೆ ಅಲೆಮಾರಿ ನಿಗಮದ ಮಾಜಿ ಅಧ್ಯಕ್ಷ ದೇವಿಂದ್ರನಾಥ ನಾದ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪರುಶುರಾಮ ಕುರುಕುಂದಿ, ವೆಂಕಟರೆಡ್ಡಿ ಅಬ್ಬೆತುಮಕೂರು, ನಗರ ಮಂಡಲ ಅಧ್ಯಕ್ಷ ಲಿಂಗಪ್ಪ ಹತ್ತಿಮನಿ, ನಗರಸಭೆ ಮಾಜಿ ಅಧ್ಯಕ್ಷ ವಿಲಾಸ್ ಪಾಟೀಲ್, ಯುಡಾ ಮಾಜಿ ಅಧ್ಯಕ್ಷ ರುದ್ರುಗೌಡ ಪಾಟೀಲ್, ಡಾ.ಶರಣರಡ್ಡಿ ಕೋಡ್ಲಾ, ಶ್ರೀದೇವಿ ಶೆಟ್ಟಿಹಳ್ಳಿ, ರಮಾದೇವಿ ಕಾವಲಿ, ಸ್ವಾಮಿದೇವ ದಾಸನಕೇರಿ, ರಮೇಶ್ ದೊಡ್ಡಮನಿ, ರಾಜುಸ್ವಾಮಿ ಅನಂಪಲೀ, ಅಪ್ಪಣ್ಣ ಜೈನ್, ಮಂಜುನಾಥ ಜಡಿ, ಗೋವಿಂದಪ್ಪ ಖಾನಾಪುರ, ಚನ್ನವಿರಯ್ಯ ಸ್ವಾಮಿ, ಲಕ್ಷ್ಮೀಪುತ್ರ ಮಾಲಿಪಾಟೀಲ, ಮೌನೇಶ ಬೆಳಿಗೇರಾ, ದೇವಿಂದ್ರಪ್ಪ ಯರಗೋಳ, ಮಹದೇವಪ್ಪ ಗಣಪುರ, ಸಾಬು ಬಗಲಿ, ಮಲ್ಲುಸ್ವಾಮಿ ಗುರುಸುಣಗಿ, ಶಿವರಾಜ ಗುತ್ತೇದಾರ್, ಸಾಬು ಯಡ್ಡಳ್ಳಿ ಸೇರಿದಂತೆ ಅನೇಕ ಕಾರ್ಯಕರ್ತರು ಉಪಸ್ಥಿತರಿದ್ದರು.



ಪಶ್ಚಿಮ ಬಂಗಾಳ, ಪುದುಚೇರಿ ಹಾಗೂ ಅಸ್ಸಾಂನಲ್ಲಿ ಬಿಜೆಪಿ ಅಭೂತಪೂರ್ವ ಜಯ ಗಳಿಸಿದ ಹಿನ್ನೆಲೆ, ಯಾದಗಿರಿ ಜಿಲ್ಲಾ ಬಿಜೆಪಿಯಿಂದ ಸಂಭ್ರಮಾಚರಣೆ ಮಾಡಲಾಯಿತು.

ಕಲಬುರಗಿಯಲ್ಲಿ ಬಿಜೆಪಿಯಿಂದ ವಿಜಯೋತ್ಸವ



ಕಲಬುರಗಿ: ಪಂಚ ರಾಜ್ಯಗಳಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಭಾರತೀಯ ಜನತಾ ಪಾರ್ಟಿಯು ಅಭೂತಪೂರ್ವ ಗೆಲುವು ಸಾಧಿಸಿರುವ ಹಿನ್ನೆಲೆಯಲ್ಲಿ ಕಲಬುರಗಿಯ ಸರ್ದಾರ್ ಪಟೇಲ್ ಪ್ರತಿಮೆ ಬಳಿ ಕಲಬುರಗಿ ಜಿಲ್ಲಾ ಬಿಜೆಪಿ ವತಿಯಿಂದ ಪಟಾಕಿ ಸಿಡಿಸಿ, ಸಿಹಿ ಮತ್ತು ಚುಡಾ ಹಂಚಿ ವಿಜಯೋತ್ಸವವನ್ನು ಆಚರಿಸಲಾಯಿತು.

ಬಿಜೆಪಿ ರಾಜ್ಯ ಕಾರ್ಯದರ್ಶಿ ಶಾಸಕ ಬಸವರಾಜ್ ಮತ್ತಿಮೂಡ, ಜಿಲ್ಲಾಧ್ಯಕ್ಷ ಅಶೋಕ್ ಬಗಲಿ, ವಿಧಾನಪರಿಷತ್ ಮಾಜಿ ಸದಸ್ಯ ಅಮರನಾಥ್ ಪಾಟೀಲ್, ಜಿಪಂ ಮಾಜಿ ಅಧ್ಯಕ್ಷ ಅಂಬಾರಾಯ ಅಷ್ಟಗಿ, ಮುಖಂಡರಾದ ಸಿದ್ದಾಜಿ ಪಾಟೀಲ್, ದಯಾಘನ್ ಧಾರವಾಡಕರ್, ಶಿವಯೋಗಿ ನಾಗನಳ್ಳಿ, ಶಿವ ಅಷ್ಠಗಿ, ಪಾಲಿಕೆ ಸದಸ್ಯರಾದ ಶಂಭುಲಿಂಗ ಬಳಬಟ್ಟಿ, ಸಚಿನ್ ಕಡಗಂಚಿ, ಮಲ್ಲು ಉದನೂರ್, ಲಿಂಗರಾಜ ಬಿರಾದಾರ, ಉಮೇಶ್ ಪಾಟೀಲ್ ಡಾ. ಸುಧಾ ಹಾಲಕಾಯಿ, ಧರ್ಮಣ್ಣ ಇಟಗಾ, ಶರಣಪ್ಪ ತಳವಾರ್, ವಿದ್ಯಾಸಾಗರ್‌ಕುಲಕರ್ಣಿ ಅವಿನಾಶ್ ಕುಲಕರ್ಣಿ, ಸವಿತಾ ಪಾಟೀಲ್, ಶೋಭಾ ಬಾಗೇವಾಡಿ, ಸುನಂದಾ ಪಾಟೀಲ್, ಸಪ್ನಾ ಮಂಗಲಗಿ, ಗಿರಿರಾಜ್ ಯಳಮೇಲಿ, ಯುವ ಮೋರ್ಚಾ ಜಿಲ್ಲಾ ಅಧ್ಯಕ್ಷ ಮಹೇಶ್ ಚವಾಣ್, ಗೋಪಾಲಕೃಷ್ಣ ಸರಡಗಿ ಬಾಬುರಾವ್ ಹಾಗರಗುಂಡಗಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಜೀತು ಮುಂಡಾ ಪ್ರಕರಣ: ಅಧಿಕಾರಿಗಳ ವಜಾಕ್ಕೆ ಆಗ್ರಹ

• **ಕನ್ನಡಪ್ರಭ ವಾರ್ತೆ** ಸಿಂಧನೂರು

ಒಡಿಶಾದ ಬುಡಕಟ್ಟು ಸಮುದಾಯದ ಜೀತು ಮುಂಡಾ ಅವರ ಮೇಲೆ ಸರ್ಕಾರಿ ಬ್ಯಾಂಕ್ ಅಧಿಕಾರಿಗಳ ಅಮಾನವೀಯ ವರ್ತನೆ ಖಂಡಿಸಿ, ಈ ಪ್ರಕರಣವನ್ನು ನ್ಯಾಯಾಂಗ ತನಿಖೆಗೊಳ ಪಡಿಸಿ, ತಪ್ಪಿತಸ್ಥ ಬ್ಯಾಂಕ್ ಅಧಿಕಾರಿಗಳನ್ನು ಹುದ್ದೆಯಿಂದ ವಜಾಗೊಳಿಸುವಂತೆ ಆಗ್ರಹಿಸಿ, ತಹಸೀಲ್ದಾರ್‌ಅವರ ಮೂಲಕ ಸಿಪಿಐ (ಎಂಎಲ್) ಲಿಬರೇಶನ್ ಪಕ್ಷದ ವತಿಯಿಂದ ರಾಷ್ಟ್ರಪತಿಗೆ ಮನವಿ ರವಾನಿಸಲಾಯಿತು.

ಸಹೋದರಿ ಕರ್ಲಾ ಮುಂಡಾ ಅವರು ಮೃತಪಡುವುದಕ್ಕೂ ಮುನ್ನ ಒಡಿಶಾದ ಗ್ರಾಮೀಣ ಬ್ಯಾಂಕ್‌ನಲ್ಲಿ ಠೇವಣಿ ಇಟ್ಟಿದ್ದ 20 ಸಾವಿರ ರೂಪಾಯಿಯನ್ನು ವಾಪಸ್ ನೀಡುವಂತೆ ಜೀತು ಮುಂಡಾ ಅವರು ಹತ್ತಾರು ಬಾರಿ ಬ್ಯಾಂಕ್ ಅಲೆದಾಡಿದರೂ ಬ್ಯಾಂಕ್ ಅಧಿಕಾರಿಗಳು ದಾಖಲೆ ನೀಡುವಂತೆ ಸತಾಯಿಸಿದ್ದಾರೆ. ರೋಸಿಹೋದ ಜೀತು ಮುಂಡಾ ಅವರು ಸಮಾಧಿ ಅಗೆದು ಕೊಳೆತ ಸ್ಥಿತಿಯಲ್ಲಿದ್ದ ಸೋದರಿಯ ಶವವನ್ನು ಚೀಲದಲ್ಲಿ ಕಟ್ಟಿಕೊಂಡು ಬ್ಯಾಂಕ್‌ಗೆ ಬಂದಿದ್ದಾರೆ.

ಈ ಘಟನೆಗೆ ಬ್ಯಾಂಕ್ ಅಧಿಕಾರಿಗಳ ಅಮಾನವೀಯ ವರ್ತನೆಯೇ ಕಾರಣವಾಗಿದೆ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು. ಸಿಪಿಐ (ಎಂಎಲ್) ಲಿಬರೇಶನ್ ತಾಲ್ಲೂಕು ಕಾರ್ಯದರ್ಶಿ ಬಸವರಾಜ ಬೆಳಗುರ್ಕಿ ಮಾತನಾಡಿ, ಬ್ಯಾಂಕ್‌ಗಳಲ್ಲಿ ಬಡವರು, ಆದಿವಾಸಿಗಳು, ಶೋಷಿತ ಸಮುದಾಯಗಳಿಗೆ ಸಾಲ ನೀಡುವುದಿರಲಿ, ಠೇವಣಿಯಿಟ್ಟ ಹಣವನ್ನು ವಾಪಸ್ ನೀಡಲು ನೀಡಲು ಸತಾಯಿಸಲಾಗುತ್ತಿದೆ ಎಂದು ಆರೋಪಿಸಿದರು. ಪಕ್ಷದ ಮುಖಂಡರಾದ ರಾಘವೇಂದ್ರ ಉಪ್ಪಳ, ಭಗತ್ ಸಿಂಗ್ ಆಟೋ ಚಾಲಕರ ಸಂಘದ ಅಧ್ಯಕ್ಷ ಬಸವರಾಜ ಕೊಂಡೆ, ತುಸಳಪ್ಪ ದಡೇಸುಗೂರು, ಹನುಮಂತ ಟೈಲರ್, ರಾಮಣ್ಣ, ಮಂಜುನಾಥ ಇದ್ದರು.



ಸಿಂಧನೂರಿನ ತಹಸೀಲ್ದಾರ್ ಕಚೇರಿಯ ಶಿರಸ್ತೇದಾರ್ ವಾಣಿ ಅವರಿಗೆ ಸಿಪಿಐಎಂಎಲ್ ಲಿಬರೇಷನ್ ಪಾರ್ಟಿ ವತಿಯಿಂದ ಮನವಿಪತ್ರ ಸಲ್ಲಿಸಲಾಯಿತು.

ತವರಿನ ಸ್ಪರ್ಶ ನೀಡುವ ಹಾರಕೂಡ ಮಠ: ಬೆಲ್ದಾಳ ಶರಣರು

ಬಸವಕಲ್ಯಾಣ: ಸರ್ವ ಸಮುದಾಯದ ಭಕ್ತರಿಗೆ ಸಮನ್ವಯ ತೊಟ್ಟಿಲಿನಂತಿರುವ ಹಾರಕೂಡ ಮಠ ಎಲ್ಲರಿಗೂ ತವರಿನ ಸ್ಪರ್ಶ ನೀಡುವ ಅದ್ಭುತ ವಾತ್ಸಲ್ಯದ ತಾಣವಾಗಿದೆ ಎಂದು ಡಾ.ಸಿದ್ದರಾಮ ಬೆಲ್ದಾಳ ಶರಣರು ನುಡಿದರು.

ಕರ್ನಾಟಕ ಸರ್ಕಾರದಿಂದ ರಾಷ್ಟ್ರೀಯ ಬಸವ ಪುರಸ್ಕಾರ ಪಡೆದ ಡಾ.ಸಿದ್ದರಾಮ ಬೆಲ್ದಾಳ ಶರಣರು ತಾಲೂಕಿನ ಹಾರಕೂಡ ಮಠದೊಡೆಯರಾದ ಡಾ. ಚನ್ನವೀರ ಶಿವಾಚಾರ್ಯರಿಂದ ಗೌರವ ಸತ್ಕಾರ ಸ್ವೀಕರಿಸಿ ಮಾತನಾಡಿದ ಶರಣರು, ನನ್ನ ಆಧ್ಯಾತ್ಮ ಪಯಣದ ಪ್ರಥಮದಲ್ಲಿ ಯೋಗ ಸಾಧನೆಗಾಗಿ ಪ್ರೇರಣೆ ನೀಡಿದವರು ಹಾರಕೂಡದ ಲಿಂಗೈಕ್ಯ ಚೆನ್ನಬಸವ ಶಿವಯೋಗಿಗಳು, ಅವರ ಪ್ರಸಾದ ವಾಣಿಯಿಂದ ಅದ್ಭುತ ಪವಾಡಗಳೇ ನಡೆದಿವೆ. ಅವರ ಸರಳ ಮತ್ತು ಜೀವನ ಪಥ ಇಂದಿನ ಸಂತ ವರ್ಗಕ್ಕೆ ಮಾದರಿಯಾಗಿದೆ. ಇಂದಿನ ಪೀಠಾಧಿಪತಿಗಳಾದ ಡಾ.ಚನ್ನವೀರ ಶಿವಾಚಾರ್ಯರು ಬಸವ ಚಿಂತನೆ ಮತ್ತು ಶರಣ ಸಂಸ್ಕೃತಿಗೆ ನೀಡಿರುವ ಕೊಡುಗೆ ಅನನ್ಯ. ಹಾರಕೂಡ ಶ್ರೀಗಳಿಂದ ಸತ್ಕಾರ ಪಡೆದಿರುವುದು ನನಗೆ ತುಂಬಾ ಖುಷಿಯಾಗಿದ್ದು, ತವರಿನ ಸಂಭ್ರಮ ಅನುಭವಿಸಿದ್ದಂತಾಗಿದೆ ಎಂದು ನುಡಿದರು.



ಹಾರಕೂಡ ಮಠದ ಪೀಠಾಧಿಪತಿಗಳಾದ ಡಾ. ಚನ್ನವೀರ ಶಿವಾಚಾರ್ಯರು ಸಾನ್ನಿಧ್ಯ ವಹಿಸಿದ್ದರು. ಸಂಗಣ್ಣ ಪಾಟೀಲ, ರಾಜಶೇಖರ ಹೊಗತಾಪುರೆ, ವಿಜಯಕುಮಾರ ಸಂಗೋಳಗೆ ಉಪಸ್ಥಿತರಿದ್ದರು. ಮಲ್ಲಿನಾಥ ಹಿರೇಮಠ ಹಾರಕೂಡ ಸ್ವಾಗತಿಸಿದರು. ಕಾರ್ತಿಕ ಸ್ವಾಮಿ ಯಲದಗುಂಡಿ, ಶರಣಪ್ಪ ಜಮಾದಾರ ಸಂಗೀತ ಸೇವೆ ಸಲ್ಲಿಸಿದರು. ಅಂಬಾರಾಯ ಉಗಾಜಿ ನಿರೂಪಣೆ ಮಾಡಿದರು.

ಸುದ್ದಿ ಸಿಂಚನ

ಮೋದೀಜಿ ನಾಯಕತ್ವಕ್ಕೆ ಬಲ: ಕರಣ ಸುಬೇದಾರ



ಕಲಬುರಗಿ: ಪಶ್ಚಿಮ ಬಂಗಾಳ, ಅಸ್ಸಾಂ, ಪುದುಚೇರಿಯಲ್ಲಿ ಬಿಜೆಪಿ ಗೆಲುವು ನರೇಂದ್ರ ಮೋದೀಜಿ ಅವರ ನಾಯಕತ್ವಕ್ಕೆ ದೊಡ್ಡ ಶಕ್ತಿಯನ್ನು ತುಂಬಿದಂತಾಗಿದೆ. ನಮ್ಮ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನಬೀನ್ಜೀ ಅವರ ಮೊದಲ ಚುನಾವಣೆ ಇದಾಗಿದೆ. ಬಹು ದೊಡ್ಡ ಸಂದೇಶವನ್ನು ನೀಡಿದೆ ಎಂದು ಶಹಾಪೂರ ಮತಕ್ಷೇತ್ರದ ಬಿಜೆಪಿ ಮುಖಂಡ ಕರಣ ಸುಬೇದಾರ ಅವರು ವಿಶ್ಲೇಷಿಸಿದರು. ಈ ಕುರಿತು ಪತ್ರಿಕಾ ಪ್ರಕಟಣೆ ಹೊರಡಿಸಿದ ಅವರು, ಇಡೀ ದೇಶದಲ್ಲಿ ಅಮಿತ್ ಶಾ ಜೀ ಅವರು ಚುನಾವಣಾ ಚಾಣಕ್ಯ ಎಂದು ಪ್ರತಿಯೊಬ್ಬರು ಮಾತನಾಡುತ್ತಿದ್ದಾರೆ. ಅಮಿತ್ ಶಾ ಜೀ ಅವರ ತಂತ್ರಗಾರಿಕೆಯೂ ಈ ಗೆಲುವಿನ ಹಿಂದಿದೆ ಎಂದರು. ಪಶ್ಚಿಮ ಬಂಗಾಳದ ಗೆಲುವಿಗಾಗಿ ಅಲ್ಲಿನ ಕಾರ್ಯಕರ್ತರಿಗೆ ನಾವು ಸಲಾಂ ಹೇಳಬೇಕಿದೆ. 3 ರಾಜ್ಯಗಳ ಕಾರ್ಯಕರ್ತರಿಗೆ ಅಭಿನಂದನೆ ತಿಳಿಸುವುದಾಗಿ ಹೇಳಿದರು.

ಬಂಗಾಳದ ವಿಜಯದಲ್ಲಿ ಕನ್ನಡಿಗರ ಪಾತ್ರ ಅನನ್ಯ: ಡಾ. ಶರಣಭೂಪಾಲರೆಡ್ಡಿ

ಯಾದಗಿರಿ: ಪಶ್ಚಿಮ ಬಂಗಾಳ, ಪುದುಚೇರಿ ಹಾಗೂ ಅಸ್ಸಾಂ ವಿಧಾನಸಭಾ ಚುನಾವಣೆಗಳಲ್ಲಿ ಭಾರತೀಯ ಜನತಾ ಪಕ್ಷವು ಅಭೂತಪೂರ್ವ ಗೆಲುವು ಸಾಧಿಸಿರುವುದು ಅತ್ಯಂತ ಸಂತಸದ ವಿಷಯವಾಗಿದೆ. ಅದರಲ್ಲೂ, ಬಂಗಾಳದ ಕಠಿಣ ಚುನಾವಣಾ



ಹೋರಾಟದಲ್ಲಿ ನಮ್ಮ ಕರ್ನಾಟಕದ ವಿಧಾನ ಪರಿಷತ್ ಸದಸ್ಯರಾದ ಸಿ. ಟಿ. ರವಿ ಹಾಗೂ ಕಲಬುರಗಿ ವಿಭಾಗದ ನಿಕಟಪೂರ್ವ ಸಂಘಟನಾ ಪ್ರಧಾನ ಕಾರ್ಯದರ್ಶಿಗಳಾದ ಅರುಣ್ ಬಿನ್ನಡಿ ಅವರ ಪ್ರಯತ್ನ ಶ್ಲಾಘನೀಯ ಎಂದು ಬಿಜೆಪಿ ಮಾಜಿ ಜಿಲ್ಲಾಧ್ಯಕ್ಷ ಡಾ. ಶರಣಭೂಪಾಲರೆಡ್ಡಿ ನಾಯ್ಕಲ್ ತಿಳಿಸಿದ್ದಾರೆ. ಈ ಕುರಿತು, ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಸಿ. ಟಿ. ರವಿ ಹಾಗೂ ಬಿನ್ನಡಿ ಅವರು ಕಳೆದ ಹಲವು ತಿಂಗಳು ಗಳಿಂದ ಬಂಗಾಳದಲ್ಲಿ ನಿರಂತರ ಪ್ರವಾಸ ಮಾಡಿ, ಚುನಾವಣಾ ತಂತ್ರಗಾರಿಕೆಯನ್ನು ರೂಪಿಸಿ ಯಶಸ್ವಿಯಾ ಗಿದ್ದಾರೆ. ಇವರ ಶ್ರಮಕ್ಕೆ ಇಂದು ವಿಜಯದ ಪುರಸ್ಕಾರ ದೊರೆತಿದೆ. ಈ ಐತಿಹಾಸಿಕ ವಿಜಯಕ್ಕೆ ಕಾರಣರಾದ ಪಕ್ಷದ ಅಭ್ಯರ್ಥಿಗಳಿಗೆ ಹಾಗೂ ರಾಷ್ಟ್ರೀಯ ಹಿತಾಸಕ್ತಿ ಯನ್ನು ಗಮನದಲ್ಲಿಟ್ಟುಕೊಂಡು ಮತ ಚಲಾ ಯಿಸಿದ ಮತದಾರ ಪ್ರಭುಗಳಿಗೆ ಅಭಿನಂದನೆ ಸಲ್ಲಿಸುವುದಾಗಿ ಹೇಳಿದರು. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ನೀವು ನಮಗೆ ಮತ ನೀಡಿ, ನಾವು ನಿಮಗೆ ಸ್ವಾತಂತ್ರ್ಯ ತಂದು ಕೊಡುತ್ತೇವೆ ಎಂದ ಕರೆಗೆ ಜನತೆ ಅಭೂತಪೂರ್ವ ಬೆಂಬಲ ಸೂಚಿಸಿದ್ದಾರೆ. ಕೇಂದ್ರ ಗೃಹ ಸಚಿವರಾದ ಅಮಿತ್ ಶಾ ಅವರ 'ಬಂಗಾಳ ಗೆದ್ದೇ ಸಿದ್ಧ' ಎನ್ನುವ ಶಪಥ ಹಾಗೂ ರಾಷ್ಟ್ರೀಯ ಸಂಘಟನಾ ಪ್ರ ಧಾನ ಕಾರ್ಯದರ್ಶಿಗಳಾದ ಬಿ. ಎಲ್. ಸಂತೋಷ್ ಅ ವರ 'ಬಂಗಾಳದ ಗೆಲುವು ಅಧಿಕಾರಕ್ಕಲ್ಲ, ನಮ್ಮ ನಾಗರಿಕತೆಯ ರಕ್ಷಣೆಗಾಗಿ' ಎಂಬ ಘರ್ಜನೆ ಇಂದು ಸಾಕಾರಗೊಂಡಿದೆ. ಈ ಗೆಲುವಿನ ಹಿಂದಿನ ಶಕ್ತಿಯಾದ ಹಗಲಿರುಳು ಶ್ರಮಿಸಿದ ಪಕ್ಷದ ಲಕ್ಷಾಂತರ ಕಾರ್ಯ ಕರ್ತರಿಗೆ ನಾನು ಅಭಿನಂದನೆ ಸಲ್ಲಿಸುವುದಾಗಿ ತಿಳಿಸಿದ್ದಾರೆ.

ಎನ್‌ಎಚ್‌ಎಂ: ಗುತ್ತಿಗೆ ಆಧಾರದ ಸಿಬ್ಬಂದಿಗಳ ನೇಮಕಾತಿಗೆ ಅರ್ಜಿ

ಯಾದಗಿರಿ: ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ಖಾಲಿಯಿರುವ ಗುತ್ತಿಗೆ ಆಧಾರದ ಸಿಬ್ಬಂದಿಗಳ ನೇಮಕಾತಿಗೆ ಅರ್ಜಿ ಆಹ್ವಾನಿಸಲಾಗಿದೆ ಎಂದು ಯಾದಗಿರಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಅವರು ತಿಳಿಸಿದ್ದಾರೆ. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಯಾದಗಿರಿ ಜಿಲ್ಲೆಯ ವ್ಯಾಪ್ತಿಯ ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ಖಾಲಿ ಇರುವ ವಿವಿಧ ಹುದ್ದೆಗಳನ್ನು ರಾಷ್ಟ್ರೀಯ ಆರೋಗ್ಯ ಅಭಿಯಾನದ ನಿಯಮಾನುಸಾರ ಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಲಾಗುತ್ತಿದ್ದು, ಅರ್ಹ ಅಭ್ಯರ್ಥಿ ಗಳು ಆನ್‌ಲೈನ್ yadgiri.nic.in ನಲ್ಲಿ ಮೇ 20ರ ಒಳಗೆ ಅರ್ಜಿ ಸಲ್ಲಿಸಬೇಕು. ಅರ್ಹ ಅಭ್ಯರ್ಥಿಗಳು ನೇಮಕಾತಿ ಸಂಬಂಧಪಟ್ಟಂತೆ ವೆಬ್‌ಸೈಟ್ zpyadgiri.karnataka.gov.in ನಲ್ಲಿ ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಗೃಹಭಾಗ್ಯ ಯೋಜನೆಯಲ್ಲಿ ಅಕ್ರಮದ ವಾಸನೆ?

81.10 ಕೋಟಿ ರು. ಅನುದಾನದಲ್ಲಿ ಭ್ರಷ್ಟಾಚಾರ | ಮನೆಗಳನ್ನೇ ನೀಡದೆ ಅಧಿಕಾರಿಗಳಿಂದ ವಂಚನೆ: ಪ್ರದೀಪ ಅಣಬಿ ಆರೋಪ

• **ಕನ್ನಡಪ್ರಭ ವಾರ್ತೆ** ಯಾದಗಿರಿ

ಕಲ್ಯಾಣ ಕರ್ನಾಟಕ ಭಾಗದ ಆರು ಜಿಲ್ಲೆಗಳ ವ್ಯಾಪ್ತಿಯಲ್ಲಿ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಿಗಾಗಿ ಜಾರಿಗೆ ತಂದ 'ಗೃಹಭಾಗ್ಯ ಯೋಜನೆ'ಯಡಿ 2022ರಲ್ಲಿ ಬಿಡುಗಡೆಗೊಂಡ ₹81.10 ಕೋಟಿ ಅನುದಾನದಲ್ಲಿ ಭ್ರಷ್ಟಾಚಾರ ನಡೆದಿದೆ ಎಂದು ಆರೋಪಿಸಿರುವ ಶಹಾಪುರದ ಸರ್. ಎಂ. ವಿಶ್ವೇಶ್ವರಯ್ಯ ಕಟ್ಟಡ ಕಾರ್ಮಿಕರ ಸಂಘದ ಅಧ್ಯಕ್ಷರಾದ ಪ್ರದೀಪ ಅಣಬಿ, ಈ ಕುರಿತು ತನಿಖೆ ನಡೆಸಬೇಕು ಎಂದು ಆಗ್ರಹಿಸಿ, ಶಹಾಪುರ ತಹಸೀಲ್ದಾರರಿಗೆ ಮನವಿ ಸಲ್ಲಿಸಿದರು.

ಬೀದರ್, ಕಲಬುರಗಿ, ಯಾದಗಿರಿ, ವಿಜಯನಗರ, ಬಳ್ಳಾರಿ ಮತ್ತು ರಾಯಚೂರು ಜಿಲ್ಲೆಗಳ ಒಟ್ಟು 4055 ಅರ್ಹ ನೋಂದಾಯಿತ ಕಟ್ಟಡ ಕಾರ್ಮಿಕರಿಗೆ ಮನೆ ನಿರ್ಮಾಣದ ಉದ್ದೇಶದಿಂದ ಈ ಅನುದಾನವನ್ನು ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ ಮೂಲಕ ಬಿಡುಗಡೆ ಮಾಡಿ, ಜಿಲ್ಲಾವಾರು ಪ್ರತ್ಯೇಕ ಚೆಕ್‌ಗಳ



ಗೃಹಭಾಗ್ಯ ಯೋಜನೆಯಡಿ ಭ್ರಷ್ಟಾಚಾರ ನಡೆದಿದೆ ಎಂದು ಆರೋಪಿಸಿರುವ ಶಹಾಪುರದ ಸರ್. ಎಂ. ವಿಶ್ವೇಶ್ವರಯ್ಯ ಕಟ್ಟಡ ಕಾರ್ಮಿಕರ ಸಂಘದ ಅಧ್ಯಕ್ಷರಾದ ಪ್ರದೀಪ ಅಣಬಿ, ಈ ಕುರಿತು ತನಿಖೆ ನಡೆಸಬೇಕು ಎಂದು ಆಗ್ರಹಿಸಿ, ಶಹಾಪುರ ತಹಸೀಲ್ದಾರರಿಗೆ ಮನವಿ ಸಲ್ಲಿಸಿದರು.

ಮೂಲಕ ಅನುದಾನ ಹಂಚಿಕೆ ಮಾಡಲಾಗಿತ್ತು.

ಆದರೆ, ವಾಸ್ತವಿಕ ಪರಿಸ್ಥಿತಿ ಪರಿಶೀಲಿಸಿದಾಗ, ಈ ಯೋಜನೆಯಡಿ ಯಾವುದೇ ಫಲಾನುಭವಿಗಳಿಗೆ ಮನೆಯೇ ಮಂಜೂರಾಗಿಲ್ಲ ಎಂಬ ಆಘಾತಕಾರಿ ಮಾಹಿತಿ ಹೊರಬಿದ್ದಿದೆ ಎಂದು ಆರೋಪಿಸಿರುವ ಪ್ರದೀಪ್, ಮಾಹಿತಿ ಹಕ್ಕು ಅಧಿನಿಯಮ ಮೂಲಕ ವಿವಿಧ ಜಿಲ್ಲಾ ಕಾರ್ಮಿಕ ಅಧಿಕಾರಿಗಳಿಂದ ಪಡೆದ ಮಾಹಿತಿಯ ಪ್ರಕಾರ, ಫಲಾನುಭವಿಗಳ ಆಯ್ಕೆ ಪ್ರಕ್ರಿಯೆಯೇ ನಡೆದಿಲ್ಲ ಎಂದು ಸ್ಪಷ್ಟಪಡಿಸಲಾಗಿದೆ. ಇದರಿಂದಾಗಿ ಅನುದಾನದ ಬಳಕೆಯ ಕುರಿತು ಗಂಭೀರ ಅನುಮಾನಗಳು ಮೂಡಿವೆ ಎಂದಿದ್ದಾರೆ.

ಒಟ್ಟು 4055 ಮನೆಗಳ ಪೈಕಿ ಸುಮಾರು 2910 ಮನೆಗಳಿಗೆ ಸಂಬಂಧಿಸಿದ ಮಾಹಿತಿ ಕೇಳಿದಾಗ ಸಮರ್ಪಕ ಉತ್ತರ ದೊರೆಯಲಿಲ್ಲ. ಸರ್. ಎಂ. ವಿಶ್ವೇಶ್ವರಯ್ಯ ಕಟ್ಟಡ ಕಾರ್ಮಿಕರ ಸಂಘದ ಅಧ್ಯಕ್ಷರಾದ ಪ್ರದೀಪ ಅಣಬಿ, 59 ಕೋಟಿ ರು. ಅನುದಾನ ಬಿಡುಗಡೆಗೊಂಡಿದೆ ಎಂದು ಮಾತ್ರ ತಿಳಿಸಲಾಗಿದೆ. ಉಳಿದ 1145 ಫಲಾನುಭವಿಗಳ ಕುರಿತು ಯಾವುದೇ ಸ್ಪಷ್ಟ ಮಾಹಿತಿ ನೀಡಲಾಗಿಲ್ಲ. ಇದು ಮತ್ತಷ್ಟು ಸಂಶಯಕ್ಕೆ ಕಾರಣವಾಗಿದೆ ಎಂದವರು ಶಂಕೆ ವ್ಯಕ್ತಪಡಿಸಿದ್ದಾರೆ.

ಇದೇ ವಿಷಯವಾಗಿ ಮುಖ್ಯಮಂತ್ರಿಗಳಿಗೆ ಕಾರ್ಮಿಕ ಸಚಿವರಿಗೆ, ವಸತಿ ಸಚಿವರಿಗೆ ಹಾಗೂ ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯ ಆಯುಕ್ತರು ಸೇರಿದಂತೆ ಹಲವು ಉನ್ನತ ಅಧಿಕಾರಿಗಳಿಗೆ ಮನವಿ ಸಲ್ಲಿಸಲ್ಪಟ್ಟಿದ್ದರೂ, ಇದುವರೆಗೆ ಯಾವುದೇ ಪರಿಣಾಮಕಾರಿ ಕ್ರಮ ಕೈಗೊಳ್ಳದಿರುವುದು ಜನರಲ್ಲಿ ಅಸಮಾಧಾನಕ್ಕೆ ಕಾರಣವಾಗಿದೆ. ಈ ಪ್ರಕರಣದಲ್ಲಿ ಉನ್ನತ ಮಟ್ಟದ ಸ್ವತಂತ್ರ ತನಿಖಾ ತಂಡವನ್ನು ರಚಿಸಿ, ಜಿಲ್ಲಾವಾರು ಅರ್ಜಿಗಳ ಪರಿಶೀಲನೆ, ಫಲಾನುಭವಿಗಳ ಸ್ಥಳ ಪರಿಶೀಲನೆ, ಬ್ಯಾಂಕ್ ವ್ಯವಹಾರಗಳ ಪರಿಶೀಲನೆ ಹಾಗೂ ದಾಖಲೆಗಳ ಸಮಗ್ರ ಪರಿಶೀಲನೆ ನಡೆಸಬೇಕು. ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಪ್ರದೀಪ್ ಆಗ್ರಹಿಸಿದ್ದಾರೆ.

ಈ ಸಂದರ್ಭದಲ್ಲಿ ಆಂಜನೇಯ ಅಣಬಿ, ಅಂಬ್ರೇಶ ಶಿರವಾಳ, ಭೋಜಪ್ಪ ಮುಂಡಾಸ, ಆಂಜನೇಯ ಇಬ್ರಾಹಿಂಪುರ, ಶರಣು ದಿಗ್ಗಿ, ಪ್ರಕಾಶ ದಿಗ್ಗಿ, ಮಲ್ಲಣ್ಣ ಮದ್ರಕಿ ಇನ್ನಿತರ ಸಂಘದ ಸದಸ್ಯರು ಹಾಜರಿದ್ದರು.

ಪ್ರತಿಭೆಗಳ ಸೇವೆ ಇಲ್ಲಿನ ಜನರಿಗೆ ಸಿಗಲಿ: ಖಾಸಾಶ್ರೀ

ಬಂಗಾರದ ಪದಕ ಸ್ವೀಕರಿಸಿದ ವೈದ್ಯ ವಿದ್ಯಾರ್ಥಿನಿ ಡಾ. ಶೈಲಶ್ರೀ ನಾಡಗೌಡ ಅವರ ಮನೆಗೆ ತೆರಳಿ ಸನ್ಮಾನ

• **ಕನ್ನಡಪ್ರಭ ವಾರ್ತೆ** ಯಾದಗಿರಿ

ಹಲವಾರು ವರ್ಷಗಳಿಂದ ವಿವಿಧ ಕ್ಷೇತ್ರಗಳಲ್ಲಿ ಇಲ್ಲಿನ ವಿದ್ಯಾರ್ಥಿಗಳು ಅಪಾರ ಸಾಧನೆ ಮಾಡಿ, ಎಲ್ಲರ ಗಮನ ಸೆಳೆದಿದ್ದಾರೆ. ಅವರ ಜ್ಞಾನ, ಪ್ರತಿಭೆ, ಸಾಮಾಜಿಕ ಸೇವೆ ಇಲ್ಲಿನ ಜನರಿಗೆ ಸಿಗುವುದು ಅವಶ್ಯಕವಾಗಿದೆ ಎಂದು ಗುರುಮಠಕಲ್ ಖಾಸಾ ಮಠದ ಪೀಠಾಧಿಪತಿ ಶಾಂತವೀರ ಮಹಾಸ್ವಾಮೀಜಿ ನುಡಿದರು.

ಗಡಿಭಾಗದ ಗುರುಮಠಕಲ್ ತಾಲೂಕಿನ ಯಲ್ಹೇರಿ ಗ್ರಾಮದ ಖ್ಯಾತ ವೈದ್ಯೆ ಡಾ. ನೀಲಮ್ಮ ಎಸ್. ರಡ್ಡಿ ಅವರ ದ್ವಿತೀಯ ಸುಪುತ್ರಿ ವೈದ್ಯ ವಿದ್ಯಾರ್ಥಿನಿ ಡಾ. ಶೈಲಶ್ರೀ ನಾಡಗೌಡ ಅವರು ಮಹಾರಾಷ್ಟ್ರದ ಸಾಂಗ್ಲಿಯ ಭಾರತಿ ವಿದ್ಯಾಪೀಠ ಕಾಲೇಜಿನಲ್ಲಿ ವೈದ್ಯಕೀಯ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞ ಸ್ನಾತಕೋತ್ತರ (ಪಿಜಿ) ಪರೀಕ್ಷೆಯಲ್ಲಿ ಪುಣೆ ವಿಶ್ವವಿದ್ಯಾನಿಲಯ ವ್ಯಾಪ್ತಿಯಲ್ಲಿಯೇ ಶೇ.79ರಷ್ಟು ಅಂಕಗಳನ್ನು ಪಡೆದು ಬಂಗಾರದ ಪದಕ ಸ್ವೀಕರಿಸಿದ ನಿಮಿತ್ತ ನಗರದ ಅವರ ನಿವಾಸಕ್ಕೆ ತೆರಳಿದ ಶ್ರೀಗಳು ಸಾಧಕಿಯನ್ನು ಸನ್ಮಾನಿಸಿ ಆಶೀರ್ವದಿಸಿ ಮಾತನಾಡಿದರು.

ನಾನು ಹಲವಾರು ವರ್ಷಗಳಿಂದ ಪ್ರಾಮಾಣಿಕವಾಗಿ ಆರೋಗ್ಯ ಇಲಾಖೆಯಲ್ಲಿ ವೈದ್ಯೆಯಾಗಿ ಕೆಲಸ ಮಾಡಿ, ನಿವೃತ್ತಿಯಾದ ಡಾ. ನೀಲಮ್ಮ ಎಸ್. ರಡ್ಡಿ ಅವರ ಕಾರ್ಯವೈಖರಿಯನ್ನು ಗಮನಿಸಿದ್ದೇನೆ, ಅವರು ಕೊರೋನಾ ವೈರಸ್ ದಾಳಿ ಸಂದರ್ಭದಲ್ಲಿ ತಮ್ಮ ಆರೋಗ್ಯ ಲೆಕ್ಕಿಸದೇ ಸಹಸ್ರಾರು ರೋಗಿಗಳಿಗೆ ಹಗಲೂ-ರಾತ್ರಿ ಅವರಿಗೆ ಚಿಕಿತ್ಸೆ ನೀಡಿ, ಹಲವಾರು ರೋಗಿಗಳ ಪ್ರಾಣ ಉಳಿಸಿದ್ದಾರೆ ಎಂದರು.

ಅವರು ಹಲವಾರು ಬಡ ಕುಟುಂಬಗಳಿಗೆ ಕೈಲಾದಷ್ಟು ಆರ್ಥಿಕ ಸಹಾಯ ಮಾಡುವ ಜೊತೆಗೆ ಸಾಮಾಜಿಕ ಕಾರ್ಯಗಳಿಗೆ ತಮ್ಮ ಸಮಯ, ತನು-ಮನ-ಧನ ಅರ್ಪಿಸುವ ಮೂಲಕ ಮಹಿಳೆಯರಲ್ಲಿ ವಿಶೇಷವಾಗಿ



ಯಾದಗಿರಿಯ ಖ್ಯಾತ ವೈದ್ಯೆ ಡಾ. ನೀಲಮ್ಮ ಎಸ್. ರಡ್ಡಿ ಅವರ ದ್ವಿತೀಯ ಸುಪುತ್ರಿ ವೈದ್ಯ ವಿದ್ಯಾರ್ಥಿನಿ ಡಾ. ಶೈಲಶ್ರೀ ನಾಡಗೌಡ ಅವರ ನಿವಾಸಕ್ಕೆ ಗುರುಮಠಕಲ್ ಖಾಸಾ ಮಠದ ಶಾಂತವೀರ ಮಹಾಸ್ವಾಮೀಜಿ ತೆರಳಿ ಸನ್ಮಾನಿಸಿದರು.

ಗುರುತಿಸಿಕೊಂಡಿದ್ದಾರೆ. ಅವರು ಮಾಡಿರುವ ಒಳ್ಳೆಯ ಕೆಲಸಗಳ ಪುಣ್ಯವೇ ಅವರ ಇಬ್ಬರು ಹೆಣ್ಣು ಮಕ್ಕಳು ಪರಿಶ್ರಮದಿಂದ ಓದಿ, ಉನ್ನತ ಗುರಿ ತಲುಪಿ ಸಾರ್ವಜನಿಕ ಸೇವೆಯಲ್ಲಿ ತೊಡಗಿರುವುದು ಸಂತಸದ ವಿಷಯ ಎಂದು ಶ್ಲಾಘಿಸಿದರು.

ಪ್ರಸಕ್ತ ದಿನಗಳಲ್ಲಿ ನಮ್ಮ ಜಿಲ್ಲೆಯ ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರದಲ್ಲಿ ಇನ್ನೂ ಬದಲಾವಣೆ ಸಾಧಿಸುವುದು ಅಗತ್ಯವಾಗಿದೆ, ಹೆಚ್ಚಾಗಿ ಇಲ್ಲಿನ ರೋಗಿಗಳು ಚಿಕಿತ್ಸೆಗಾಗಿ ಬೇರೆ ಕಡೆ ತೆರಳುವುದು ಸಾಮಾನ್ಯವಾಗಿದೆ, ವೈದ್ಯಕೀಯ ಕ್ಷೇತ್ರಗಳಲ್ಲಿ ಅಭ್ಯಾಸ ಮಾಡುವುದು ಎಲ್ಲರಿಗೂ ಸವಾಲಾಗಿದೆ, ಅಂದ ಮಾತ್ರಕ್ಕೆ ಹೆಚ್ಚಿನ ಹಣ ಗಳಿಸುವ ಉದ್ದೇಶದೊಂದಿಗೆ ಬೃಹತ್ ನಗರಗಳಿಗೆ ಪ್ರತಿಭೆಗಳು ಪಲಾಯನ ಮಾಡುವುದು ಸರಿಯಾದ ಕ್ರಮವಲ್ಲ, ಇದು ನನ್ನ ಅಭಿಪ್ರಾಯ, ನಿಮ್ಮ ಜ್ಞಾನ, ಅನುಭವ, ಸೇವೆ ಈ ಭಾಗದ ಜನರಿಗೆ ನೀಡಿದಾಗ ಮಾತ್ರ ನಿಮಗೆ ಆತ್ಮತೃಪ್ತಿ ಸಿಗುವ ಜೊತೆಗೆ ಗೌರವ ಕೂಡ ಹೆಚ್ಚಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ಈ ಸಂದರ್ಭದಲ್ಲಿ ಶ್ರೀಗಳಿಂದ ಆಶೀರ್ವಾದ ಪಡೆದ ಡಾ. ಶೈಲಶ್ರೀ ನಾಡಗೌಡ, ನಾನು ನಮ್ಮ ತಾಯಿ, ಗುರು-ಹಿರಿಯರ ಆಶೀರ್ವಾದದಿಂದ ಈ ಸ್ಥಾನಕ್ಕೆ ಬಂದಿದ್ದೇನೆ, ನಿಮ್ಮೆಲ್ಲರ ಆಶಯದಂತೆ ನಾವೂ ಇಲ್ಲಿಯೇ ಬಡ ಜನರಿಗೆ ಗುಣಮಟ್ಟದ ವೈದ್ಯಕೀಯ ಸೇವೆ ನೀಡಲು ನಿರ್ಧರಿಸಿ ಕೆಲಸ ಆರಂಭಿಸಿದ್ದೇವೆ ಎಂದು ತಿಳಿಸಿದರು.

ಶ್ರೀಗಳ ಜೊತೆ ಪೂಜ್ಯಶ್ರೀ ಮಲ್ಲಿಕಾರ್ಜುನ ಸ್ವಾಮೀಜಿ ಜನವಾಡ ಬೆಳಗಾವಿ ಜಿಲ್ಲೆ, ಜಿ.ಪಂ ಮಾಜಿ ಸದಸ್ಯ ಶ್ರೀನಿವಾಸರಡ್ಡಿ ಪಾಟೀಲ್ ಚೆನ್ನೂರ, ವೈದ್ಯೆ ಡಾ. ನೀಲಮ್ಮ ಎಸ್. ರಡ್ಡಿ ಯಲ್ಹೇರಿ, ಸೋಮಶೇಖರ ಮಣ್ಣೂರ, ಡಾ. ಸುನೀಲ್ ಪಾಟೀಲ್, ಡಾ. ಭಾಗ್ಯಶ್ರೀ ಎಸ್. ಪಾಟೀಲ್, ನಿಜಗುಣಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಜನಪರ ಯೋಜನೆಗಳಿಗೆ ಸಂದ ಜಯ: ಚೆನ್ನಾರೆಡ್ಡಿ ಪಾಟೀಲ್

ಉಪಚುನಾವಣೆಯಲ್ಲಿ ಕಾಂಗ್ರೆಸ್ ಗೆಲುವು: ಹರ್ಷ

• **ಕನ್ನಡಪ್ರಭ ವಾರ್ತೆ** ಯಾದಗಿರಿ



ದಾವಣಗೆರೆ ದಕ್ಷಿಣ ಮತ್ತು ಬಾಗಲಕೋಟೆ ವಿಧಾನಸಭೆಯ ಉಪಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳು ಜಯಭೇರಿ ಬಾರಿಸಿದ್ದು, ಈ ಜಯವು ನಮ್ಮ ಸರ್ಕಾರದ ಜನಪರ ಯೋಜನೆಗಳಿಗೆ ಹಾಗೂ ಕಾರ್ಯಕರ್ತರ ಅವಿರತ ಶ್ರಮಕ್ಕೆ ಸಂದ ಜಯವಾಗಿದೆ ಎಂದು ಯಾದಗಿರಿ ಶಾಸಕ ಚೆನ್ನಾರೆಡ್ಡಿ ಪಾಟೀಲ್ ತುನ್ನೂರ ಹೇಳಿದ್ದಾರೆ.

ಈ ಕುರಿತು ಹೇಳಿಕೆ ನೀಡಿರುವ ಅವರು, ದಾವಣಗೆರೆ ದಕ್ಷಿಣದಿಂದ ಆಯ್ಕೆಯಾದ ಸಮರ್ಥ ಶಾಮನೂರ ಅವರ ಅಜ್ಜ ಶ್ಯಾಮನೂರ ಶಿವಶಂಕರಪ್ಪ ಅವರ ಸಿಂಹಾಸನವನ್ನು ಅಲಂಕರಿಸುವ ಮೂಲಕ ಅತ್ಯಂತ ಚಿಕ್ಕ ವಯಸ್ಸಿನ ಶಾಸಕರಾಗಿದ್ದಾರೆ. ಉಮೇಶ್ ಮೇಟಿ ಅವರು ಆಯ್ಕೆ ಆಗುವ ಮೂಲಕ ಅವರ ತಂದೆಯ ವರ್ಚಸ್ಸು, ಕಾಂಗ್ರೆಸ್ ಪಕ್ಷ ಕ್ಷೇತ್ರದಲ್ಲಿ ಇನ್ನಷ್ಟೂ ಗಟ್ಟಿಯಾಗಿದೆ ಎನ್ನುವುದು ಸಾಬೀತು ಮಾಡಿದ್ದಾರೆ ಎಂದಿದ್ದಾರೆ.

ಉಭಯ ಕ್ಷೇತ್ರದಲ್ಲಿ ಆ ಕುಟುಂಬ ಸದಸ್ಯರ ಒಮ್ಮತದ ಪ್ರಚಾರ, ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳಿಂದ ಆಕರ್ಷಿತರಾದ ಮಹಿಳಾ ಮತದಾರರ ಭಾರಿ ಬೆಂಬಲ ದೊರೆತಿದೆ. ಜೊತೆಗೆ ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರ ಜನಪರ ಕಾಳಜಿ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಕೆಪಿಸಿಸಿ ಅಧ್ಯಕ್ಷ ಡಿಕೆ ಶಿವಕುಮಾರ್ ಅವರ ಸಾರಥ್ಯವನ್ನು ಬೆಂಬಲಿಸಿದ್ದಾರೆ.

ಈ ಕ್ಷೇತ್ರಗಳಲ್ಲಿಯ ಭರ್ಜರಿ ಗೆಲುವಿನ ಯಶಸ್ಸು ರಾಜ್ಯ ಸರ್ಕಾರಕ್ಕೆ ಸಲ್ಲುತ್ತದೆ. ಆಡಳಿತ ಪಕ್ಷದ ವರ್ಚಸ್ಸು, ವ್ಯವಸ್ಥಿತ ರಾಜಕೀಯ ತಂತ್ರಗಾರಿಕೆ, ಗ್ಯಾರಂಟಿ ಯೋಜನೆಗಳು ಕೈ ಹಿಡಿದಿವೆ. ಮೂರು ವರ್ಷ ಕಳೆದರೂ ವಿಪಕ್ಷಗಳು ಎಷ್ಟೇ ಬೊಬ್ಬೆ ಹಾಕಿದರೂ ಜನರು ಪಕ್ಷವನ್ನು ಆಶೀರ್ವದಿಸಿದ್ದು, ಬಿಜೆಪಿ ಮತ್ತು ಜೆಡಿಎಸ್ ಮೈತ್ರಿಗೆ ಮುಖಭಂಗವಾಗಿದೆ ಎಂದಿದ್ದಾರೆ.

ಕರ್ನಾಟಕದಲ್ಲಿ ಗ್ಯಾರಂಟಿ ಯೋಜನೆಗಳು ನಮ್ಮ ಕೈ ಹಿಡಿದಿವೆ. ಜನರ ಕಷ್ಟಕ್ಕೆ ನಮ್ಮ ಸರ್ಕಾರ ಸ್ಪಂದಿಸಿದೆ. ಹೀಗಾಗಿ ಉಪ ಸಮರದಲ್ಲಿ ಉತ್ತಮ ಫಲಿತಾಂಶ ಬಂದಿದೆ. ಈ ಉಪ ಚುನಾವಣೆ ಫಲಿತಾಂಶ ಮುಂದಿನ 2028ರ ವಿಧಾನಸಭೆ ಫಲಿತಾಂಶಕ್ಕೆ ದಿಕ್ಸೂಚಿಯಾಗಿದ್ದು, ರಾಜ್ಯದಲ್ಲಿ ನಮ್ಮ ಸರ್ಕಾರ ಮತ್ತೆ ಅಧಿಕಾರಕ್ಕೆ ಬರುವಲ್ಲಿ ಸಂಶಯವಿಲ್ಲ ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ದೇಶದ ಪ್ರಗತಿಗೆ ಯುವಶಕ್ತಿಯ ಕೊಡುಗೆ ಅತ್ಯವಶ್ಯ

ಶರಣಪ್ಪ ಮಾನೇಗಾರ ಅಭಿಮತ | ಕಿಲ್ಲನಕೇರಾ ಪ್ರೀಮಿಯರ್‌ಲೀಗ್ ಕ್ರಿಕೆಟ್ ಪಂದ್ಯಾವಳಿಗೆ ಚಾಲನೆ

• **ಕನ್ನಡಪ್ರಭ ವಾರ್ತೆ** ಯಾದಗಿರಿ

ನಮ್ಮ ರಾಜ್ಯ, ರಾಷ್ಟ್ರದ ಪ್ರಗತಿಗೆ ಯುವ ಶಕ್ತಿಯ ಕೊಡುಗೆ ಅತ್ಯವಶ್ಯವಾಗಿದೆ ಎಂದು ಹಿಂದುಳಿದ ವರ್ಗಗಳ ಆಯೋಗದ ಮಾಜಿ ಸದಸ್ಯ ಹಾಗೂ ಕಾಂಗ್ರೆಸ್ ಮುಖಂಡರಾದ ಶರಣಪ್ಪ ಮಾನೇಗಾರ ಅವರು ತಿಳಿಸಿದರು.

ಯಾದಗಿರಿ ತಾಲೂಕಿನ ಕಿಲ್ಲನಕೇರಾ ಗ್ರಾಮದಲ್ಲಿ ಹಮ್ಮಿಕೊಂಡಿದ್ದ ಕಿಲ್ಲನಕೇರಾ ಪ್ರೀಮಿಯರ್‌ಲೀಗ್ ಸೀಸನ್ ನಾಲ್ಕರ ಕ್ರಿಕೆಟ್ ಪಂದ್ಯಾವಳಿಗೆ ಚಾಲನೆ ನೀಡಿ ಮಾತನಾಡಿ, ಯುವಕರು ಈ ರಾಷ್ಟ್ರದ ಸಂಪತ್ತು, ಅವರನ್ನು ಬೆನ್ನುತಟ್ಟಿ ಬೆಂಬಲಿಸಿ ಪ್ರೋತ್ಸಾಹಿಸುವುದು ನಮ್ಮ ಆದ್ಯ ಕರ್ತವ್ಯ, ಈ ನಿಟ್ಟಿನಲ್ಲಿ ಗುರುಮಠಕಲ್ ಮತಕ್ಷೇತ್ರದಲ್ಲಿ ಯುವಕರು ಮಾಡುವ ಪ್ರತಿಯೊಂದು ಸಮಾಜಮುಖಿ ಕೆಲಸ ಕಾರ್ಯಗಳಿಗೆ ಸಹಾಯ ಸಹಕಾರ ನೀಡುವುದಾಗಿ ಭರವಸೆ ನೀಡಿದರು.

ಕ್ರೀಡೆ ಮಾನವನ ದೈಹಿಕ ಮತ್ತು ಮಾನಸಿಕ ಆರೋಗ್ಯಕ್ಕೆ ತುಂಬಾ ಸಹಕಾರಿಯಾಗಿದೆ. ಕ್ರೀಡೆಯಲ್ಲಿ ಭಾಗವಹಿಸುವುದರಿಂದ ಪರಸ್ಪರ ಪರಿಚಯ ಪ್ರೀತಿ, ವಿಶ್ವಾಸ ಮತ್ತು ಸೌಹಾರ್ದತೆ ಬೆಳೆಯುತ್ತದೆ. ಈ ನಿಟ್ಟಿನಲ್ಲಿ ಕ್ರೀಡಾಪಟುಗಳು ಯಾವುದೇ ರೀತಿಯ ಅನವಶ್ಯಕ ಗೊಂದಲಗಳಿಗೆ ಅವಕಾಶ ನೀಡದೆ ಕ್ರೀಡಾ ನಿಯಮಗಳಿಗೆ ಬದ್ಧರಾಗಿರಬೇಕು ಎಂದು ಕಿವಿ ಮಾತು ಹೇಳಿದರು.

ಹಾರ ತುರಾಯಿಗೆ ಗುಡ್ ಬೈ: ಕಿಲ್ಲನಕೇರಾ ಗ್ರಾಮದಲ್ಲಿ



ಶುಕ್ರವಾರ ಆಯೋಜನೆ ಮಾಡಿದ್ದ ಕೆಪಿಎಲ್ ಸೀಸನ್ - 4ರ ಉದ್ಘಾಟನಾ ಕಾರ್ಯಕ್ರಮಕ್ಕೆ ಆಗಮಿಸಿದ್ದ ಗಣ್ಯರಿಗೆ ಹಾರ ತುರಾಯಿ ಬದಲಿಗೆ ಬಸವಣ್ಣನವರ ಪುಸ್ತಕ ಹಾಗೂ ಗುಲಾಬಿ ಹೂ ನೀಡಿ ಗೌರವಿಸಲಾಯಿತು. ಇದಲ್ಲದೆ ಹಾರ ತುರಾಯಿಗೆ ಖರ್ಚು ಮಾಡಬೇಕಿದ್ದ ಹಣವನ್ನು ಗ್ರಾಮದ ಅಶಕ್ತ ವ್ಯಕ್ತಿ ಖಾಸಿಂ ಅವರಿಗೆ ಆರ್ಥಿಕ ನೆರವು ನೀಡುವ ಮೂಲಕ ಸಾರ್ಥಕತೆ ಮೆರೆಯಲಾಯಿತು.

ಈ ಸಂದರ್ಭದಲ್ಲಿ ಕೆಪಿಸಿಸಿ ಸದಸ್ಯ ಚಂದ್ರಶೇಖರ ವಾರದ, ಮಾಜಿ ಬ್ಲಾಕ್ ಕಾಂಗ್ರೆಸ್ ವಿಶ್ವನಾಥ ನೀಲಹಳ್ಳಿ, ಅನಿಲಕುಮಾರ ಹೆಡಗಿಮದ್ರಾ, ಬಂದಪ್ಪಗೌಡ ಲಿಂಗೇರಿ, ವೀರಯ್ಯ ಸ್ವಾಮಿ ಹೀರೆನೂರ್, ಅಮೀನರೆಡ್ಡಿ ಗೌಡಗೇರಾ, ರಘುಪತಿ ಗೌಡಗೇರಾ, ವೆಂಕಟೇಶ ಕೂಡಲೂರು ವಿಜಯಮಲ್ಯ, ಕೋಲಿ ಸಮಾಜ ಸೈದಾಪೂರ ವಲಯ ಅಧ್ಯಕ್ಷ ರಮೇಶ ಭೀಮನಳ್ಳಿ, ರಾಮಣ್ಣ ಗೌಡಗೇರಾ, ಮರೆಪ್ಪ ಗೌಡಗೇರಾ, ಅಂಬಣ್ಣ ಗೌಡಗೇರಾ, ಮರೆಪ್ಪ ಗೌಡಗೇರಾ, ಸಾಹೇಬಗೌಡ ಗೌಡಗೇರಾ, ಜೈರಾಮ್ ಗೌಡಗೇರಾ ತಾಂಡ, ಹಣಮಂತ ದೊಡ್ಮನಿ, ದೇವಪ್ಪಗೌಡ, ಜಗದೀಶ ಸಜ್ಜನ್, ಈರಣ್ಣಗೌಡ ಯರಗೋಳ, ವಿರೇಶ ಸಜ್ಜನ್, ವಿಜಯ ಕಂದಳ್ಳಿ, ಆಂಜನೇಯ ರಾಂಪೂರ, ವೆಂಕಟೇಶ ಕೂಡಲೂರು, ಸಿದ್ದಪ್ಪಗೌಡ, ರಾಜುಗೌಡ, ವೆಂಕಟೇಶ ಯಾದವ್ ಬದ್ದೆಪಲ್ಲಿ, ವಿನಯ್, ಭೀಮರೆಡ್ಡಿ ಶೆಟ್ಟಿಗೇರಾ, ಮಲ್ಲಿಕಾರ್ಜುನ ಮಾಲಿ ಪಾಟೀಲ, ಅಬ್ದುಲ್ ಅತ್ತಾರ್, ಬನ್ನಪ್ಪ ಬಾವೂರ ಮಸಾಲಿ, ಶಿವಶರಣ ವಕೀಲರು ಯಾದಗಿರಿ, ವೆಂಕಟೇಶ ಅಗಸಿಮುಂದಲ್, ಭೀಮರಾಯ ಧೋತ್ರೆ, ಹುಸೇನ್ ಫೈಲ್, ಹಣಮಂತ ಬಾವೂರ ನೀಲಿ, ಬಸವರಾಜ ಗ್ಯಾರೇಜ್, ಪಿಲಿಂಗ ಅಂಬಿಗೇರ್ ಬಾವೂರ, ಪವನ ದಳಪತಿ, ಭೀಮರಾಯ ಟೆಂಗಿನಗಿಡ, ಯಂಕಪ್ಪ ಟ್ರ್ಯಾಕ್ಟರ್, ಬೀರಲಿಂಗಪ್ಪ ಕಿಲ್ಲನಕೇರಾ, ಸೈದಪ್ಪ ಬಾಂಬೆ ಗೌಡಗೇರಾ, ಉಮೇಶ ಧೋತ್ರೆ ಇದ್ದರು.

ಅಭಿವೃದ್ಧಿಯಿಂದ ಉಪ ಚುನಾವಣೇಲಿ ಜಯ

ಯಾದಗಿರಿ: ಬಾಗಲಕೋಟೆ ವಿಧಾನಸಭೆ ಕ್ಷೇತ್ರದ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಉಮೇಶ್ ಮೇಟಿ ಮತ್ತು ದಾವಣಗೆರೆ ದಕ್ಷಿಣ ಕ್ಷೇತ್ರದ ಅಭ್ಯರ್ಥಿ ಸಮರ್ಥ



ಶಾಮನೂರು ಅವರ ಗೆಲುವು ನಾಡಿನ ಅಭಿವೃದ್ಧಿಗೆ ದೊರೆತ ದೊಡ್ಡ ಜಯವಾಗಿದೆ ಎಂದು ಕೆಪಿಸಿಸಿ ಪ್ರಚಾರ ಸಮಿತಿ ರಾಜ್ಯ ಉಪಾಧ್ಯಕ್ಷ ಡಾ. ಭೀಮಣ್ಣ ಮೇಟಿ ಹೇಳಿದರು. ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಉತ್ತಮವಾಗಿ ಆಡಳಿತ ನೀಡುತ್ತಿರುವ ಪರಿಣಾಮವಾಗಿ ಮತ್ತೊಮ್ಮೆ ಮತದಾರರು ಆಶೀರ್ವಾದ ಮಾಡಿದ್ದಾರೆ.

ಬಾಗಲ ಕೋಟೆ ವಿಧಾನಸಭೆ ಕ್ಷೇತ್ರದ ಉಪ ಚುನಾವಣೆಯಲ್ಲಿ ನಾನು ಮೂರು ವಾರಗಳ ಕಾಲ ಪ್ರಚಾರ ಮಾಡಿದ್ದೇನೆ. ನನಗೆ ಕಮತಗಿ ಪಟ್ಟಣ ಪಂಚಾಯಿತಿ ಮತ್ತು ಬೇವೂರು ಜಿಲ್ಲಾ ಪಂಚಾಯಿತಿ ಜವಾಬ್ದಾರಿ ಕೊಟ್ಟಿದ್ದರು. ಸಚಿವ ಸತೀಶ್ ಜಾರಕಿಹೊಳಿ ಅವರ ನೇತೃತ್ವದಲ್ಲಿ ಚುನಾವಣೆಯಲ್ಲಿ ಗೆಲುವು ಸಾಧಿಸಿದ್ದೇವೆ ಎಂದು ತಿಳಿಸಿದರು. ಗ್ಯಾರಂಟಿ ಯೋಜನೆಗಳನ್ನು ನಾಡಿನಲ್ಲಿ ಸಮರ್ಥವಾಗಿ ಜಾರಿಗೊಳಿ ಸಲಾಗಿದೆ. ಸರ್ವ ಸಮುದಾಯದ ಹಿತವನ್ನು ರಾಜ್ಯ ಸರಕಾರ ಕಾಪಾಡುತ್ತಿದೆ. ಹೀಗಾಗಿಯೇ ಉಪ ಚುನಾ ವಣೆಯಲ್ಲಿ ಕಾಂಗ್ರೆಸ್ಸಿಗೆ ಸುಲಭವಾಗಿ ಗೆಲುವು ಸಿಕ್ಕಿದೆ ಎಂದು ಹೇಳಿದರು.

ಎಸ್ಸೆಸ್ಸೆಲ್ಸಿ, ಪಿಯುಸಿ ಸಾಧಕರಿಗೆ ಡಿಸಿ ಹರ್ಷಲ್ ಭೋಯರ್‌ರಿಂದ ಸನ್ಮಾನ

ವಿದ್ಯಾರ್ಥಿಗಳ ಈ ಸಾಧನೆ ಇತರರಿಗೆ ಮಾದರಿ: ಡಿಸಿ



ಯಾದಗಿರಿ ಜಿಲ್ಲಾಧಿಕಾರಿ ಕಚೇರಿಯಲ್ಲಿ ಎಸ್ಸೆಸ್ಸೆಲ್ಸಿ ಹಾಗೂ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಜಿಲ್ಲಾಧಿಕಾರಿ ಹರ್ಷಲ್ ಭೋಯರ್ ಸನ್ಮಾನಿಸಿದರು.

ಸುರಪುರ: 2026ನೇ ಸಾಲಿನ ಎಸ್ಸೆಸ್ಸೆಲ್ಸಿ ಮತ್ತು ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಗಳಲ್ಲಿ ಸುರಪುರದ ಶರಣಬಸವ ವಸತಿ ಸಾರ್ವಜನಿಕ ಶಾಲೆ ಹಾಗೂ ಸ್ವತಂತ್ರ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳು ಅಮೋಘ ಸಾಧನೆ ಮಾಡಿ ತಾಲೂಕಿನ ಪ್ರಥಮ ಸ್ಥಾನ ಪಡೆದು ಜಿಲ್ಲೆಗೆ ಕೀರ್ತಿ ತಂದಿದ್ದಕ್ಕಾಗಿ, ಜಿಲ್ಲಾಧಿಕಾರಿ ಹರ್ಷಲ್ ಭೋಯರ್‌ಅವರು ತಮ್ಮ ಕಚೇರಿಯಲ್ಲಿ ಸಾಧಕ ವಿದ್ಯಾರ್ಥಿಗಳನ್ನು ಸನ್ಮಾನಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ವಿದ್ಯಾರ್ಥಿಗಳ ಈ ಸಾಧನೆ ಇತರರಿಗೆ ಮಾದರಿಯಾಗಿದೆ. ಮುಂದಿನ ದಿನಗಳಲ್ಲಿ ಇನ್ನಷ್ಟು ಸಾಧನೆ ಮಾಡಿ ಸಮಾಜಕ್ಕೆ ಕೊಡುಗೆ ನೀಡುವಂತಾಗಲಿ ಎಂದು ಪ್ರೇರೇಪಿಸಿದರು. ಶಾಲೆಯ ಆಡಳಿತ ಮಂಡಳಿ, ಪ್ರಾಚಾರ್ಯರು ಹಾಗೂ ಶಿಕ್ಷಕ ವೃಂದ ವಿದ್ಯಾರ್ಥಿಗಳ ಸಾಧನೆಗೆ ಸಂತೋಷ ವ್ಯಕ್ತಪಡಿಸಿದ್ದಾರೆ.

ಎಸ್ಸೆಸ್ಸೆಲ್ಸಿ ವಿಭಾಗದಲ್ಲಿ ಸಮರ್ಥ ತಂದೆ ಮನೀಶ ಮತ್ತು ಮೋನಿಕಾ ತಂದೆ ಗಣೇಶ ತಾಲೂಕಿಗೆ ಪ್ರಥಮ ಸ್ಥಾನ ಪಡೆದಿದ್ದಾರೆ. ಪಿಯುಸಿ ವಿಜ್ಞಾನ ವಿಭಾಗದಲ್ಲಿ ಶ್ವೇತಾ ತಂದೆ ಹನುಮಂತ ಟಾಪರ್‌ಆಗಿ ಹೊರಹೊಮ್ಮಿದರೆ, ವಾಣಿಜ್ಯ ವಿಭಾಗದಲ್ಲಿ ಸೌಮ್ಯ ತಂದೆ ರಾಘವೇಂದ್ರ ಅತ್ಯುತ್ತಮ ಸಾಧನೆ ಮಾಡಿದ್ದಾರೆ.

ಈ ಸನ್ಮಾನ ಕಾರ್ಯಕ್ರಮದಲ್ಲಿ ಮಹಾವಿದ್ಯಾಲಯದ ಜಂಟಿ ಕಾರ್ಯದರ್ಶಿಗಳಾದ ದೊಡ್ಡಪ್ಪ ಎಸ್.ನಿಷ್ಠಿ ಮಾತನಾಡಿ, ವಿದ್ಯಾರ್ಥಿಗಳ ಪರಿಶ್ರಮ ಮತ್ತು ನಿಷ್ಠೆಯನ್ನು ಶ್ಲಾಘಿಸಿದರು. ಇದೇ ರೀತಿಯ ಶ್ರಮವನ್ನು ಮುಂದಿನ ಉನ್ನತ ವಿದ್ಯಾಭ್ಯಾಸದಲ್ಲೂ ಮುಂದುವರಿಸಬೇಕು ಎಂದು ಹಾರೈಸಿದರು.

ಈ ಸಂದರ್ಭದಲ್ಲಿ ವೀರಪ್ಪ ನಿಷ್ಠಿ ತಾಂತ್ರಿಕ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ.ಶರಣಬಸಪ್ಪಸಾಲಿ ಹಾಗೂ ವಿವಿಧ ವಿಭಾಗಗಳ ಪ್ರಾಚಾರ್ಯರಾದ ಪ್ರೊ.ನಾನಗೌಡ ದೇಸಾಯಿ, ಪ್ರೊ. ವಿವೇಕ ಗಂಜಿ, ಪ್ರೊ. ರೇವಪ್ಪ ಪಾಟೀಲ್ ಸೇರಿದಂತೆ ವಿದ್ಯಾರ್ಥಿಗಳ ಪೋಷಕರು ಉಪಸ್ಥಿತರಿದ್ದರು.

ಅಭಿನಂದನೆ | ಸುರಪುರ: ಒಟ್ಟು 320 ಮತದಾರರಲ್ಲಿ 283 ಮಂದಿ ಮತದಾನದಲ್ಲಿ ಭಾಗಿ | ಶೇ.88ಕ್ಕೂ ಅಧಿಕ ಮತದಾನ

ಶಿಕ್ಷಕರ ಸಂಘದ ಚುನಾವಣೆ: ಸೋಮರೆಡ್ಡಿ, ಚೆನ್ನಮ್ಮಗೆ ಗೆಲುವು

• **ಕನ್ನಡಪ್ರಭ ವಾರ್ತೆ** ಸುರಪುರ

ತಾಲೂಕಿನ ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ 2026-31ನೇ ಸಾಲಿನ ತಾಲೂಕು ಘಟಕದ ಕಾರ್ಯಕಾರಿ ಸಮಿತಿಗೆ ಮೇ 1 ಶುಕ್ರವಾರದಂದು ನಡೆದ ಚುನಾವಣೆಯಲ್ಲಿ ಸೋಮರೆಡ್ಡಿ ಮಂಗಿಹಾಳ ಮತ್ತು ಚೆನ್ನಮ್ಮ ದೇವಿಂದ್ರರಡ್ಡಿ ಅವರು ಗೆಲುವು ಸಾಧಿಸಿದ್ದಾರೆ.

ಚುನಾವಣೆಯು ಶಾಂತಿಯುತವಾಗಿ ನಡೆಯಿತು. ಬೆಳಿಗ್ಗೆ 8.30ಕ್ಕೆ ಆರಂಭವಾದ ಮತದಾನ ಪ್ರಕ್ರಿಯೆಯಲ್ಲಿ ತಾಲೂಕಿನ ವಿವಿಧ ಭಾಗಗಳಿಂದ ಆಗಮಿಸಿದ್ದ ಶಿಕ್ಷಕರು ಸಂಜೆ 4.30ರವರೆಗೆ ಮತ ಚಲಾಯಿಸಿದರು. ಒಟ್ಟು 320 ಮತದಾರರಲ್ಲಿ 283 ಮಂದಿ ಮತದಾನದಲ್ಲಿ ಭಾಗವಹಿಸಿದ್ದು, ಶೇ.88ಕ್ಕೂ ಅಧಿಕ ಮತದಾನ ದಾಖಲಾಗಿದೆ.

ಒಟ್ಟು 7 ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ, ಎರಡು ಗುಂಪುಗಳಿಂದ ಪುರುಷರ ವಿಭಾಗದ 5 ಸ್ಥಾನಗಳಿಗೆ 11 ಅಭ್ಯರ್ಥಿಗಳು ಮತ್ತು ಮಹಿಳಾ ವಿಭಾಗದ 2 ಸ್ಥಾನಗಳಿಗೆ 3 ಅಭ್ಯರ್ಥಿಗಳು ಸ್ಪರ್ಧಿಸಿದ್ದರು. ಅಂತಿಮವಾಗಿ ಎಲ್ಲಾ 7 ಸ್ಥಾನಗಳಿಗೆ ಅಭ್ಯರ್ಥಿಗಳು ಆಯ್ಕೆಯಾಗಿದ್ದಾರೆ. ಸಂಜೆ 6.30ಕ್ಕೆ ಆರಂಭವಾದ ಮತ ಎಣಿಕೆ ಪ್ರಕ್ರಿಯೆಯಲ್ಲಿ ಪುರುಷರ



ಸುರಪುರದ ತಾಲೂಕು ನೌಕರರ ಸಂಘದ ಕಚೇರಿಯಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಚುನಾವಣೆಯಲ್ಲಿ ವಿಜೇತರಾದ ಅಭ್ಯರ್ಥಿಗಳಿಗೆ ಪ್ರಮಾಣಪತ್ರ ನೀಡಿ ಗೌರವಿಸಲಾಯಿತು.

ವಿಭಾಗದಲ್ಲಿ ಸೋಮರೆಡ್ಡಿ ಮಂಗಿಹಾಳ 179 ಮತಗಳನ್ನು ಪಡೆದು ಅಗ್ರಸ್ಥಾನ ಪಡೆದರು.

ಇವರೊಂದಿಗೆ ಶರಣಬಸವ ಗೋನಾಲ್ 168, ದೇವರಾಜ್ ಪಾಟೀಲ್ 136, ಗೋವಿಂದಪ್ಪ ತನಿಕೇದಾರ 129 ಹಾಗೂ ಲಚಮಣ್ಣ ವನದುರ್ಗ 122 ಮತಗಳನ್ನು ಪಡೆದು ಆಯ್ಕೆಯಾದರು. ಮಹಿಳಾ ವಿಭಾಗದಲ್ಲಿ ಚೆನ್ನಮ್ಮ ದೇವಿಂದ್ರರಡ್ಡಿ ಅವರು 199 ಮತಗಳನ್ನು ಪಡೆದು ಭರ್ಜರಿ ಗೆಲುವು ಸಾಧಿಸಿದರೆ, ನೀಲಮ್ಮ ಬಸವರಾಜ್ ಅವರು 131 ಮತಗಳನ್ನು ಪಡೆದು ಜಯಗಳಿಸಿದ್ದಾರೆ. ಚುನಾವಣಾಧಿಕಾರಿ ಭೀಮರಾಯ ಎಚ್. ಗೋನಾಲ್ ಹಾಗೂ ಸಹಾಯಕ ಚುನಾವಣಾಧಿಕಾರಿ ಸಿದ್ದಣ್ಣ ಹೊಸಗೌಡ್ರು ಅವರು ಪ್ರಕ್ರಿಯೆಯನ್ನು ಸುಗಮವಾಗಿ ನಡೆಸಿದರು. ವಿಜೇತ ಅಭ್ಯರ್ಥಿಗಳಿಗೆ ಚುನಾವಣಾಧಿಕಾರಿಗಳು ಪ್ರಮಾಣ ಪತ್ರ ವಿತರಿಸಿ, ಅಭಿನಂದಿಸಿದರು.

ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ರಾಮಕೃಷ್ಣ ಕಲಬುರ್ಗಿ, ಮಹಾಂತೇಶ ಗೋನಾಲ ಸೇರಿದಂತೆ ಶಿಕ್ಷಕರು ಉಪಸ್ಥಿತರಿದ್ದರು.

ಹುಣಸಗಿ: ಶಿಕ್ಷಕರ ಸಂಘಕ್ಕೆ ಪದಾಧಿಕಾರಿಗಳ ಆಯ್ಕೆ



ಹುಣಸಗಿ: ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ಹುಣಸಗಿ ತಾಲೂಕು ಘಟಕ 2026-2031ನೇ ಸಾಲಿನ ತಾಲೂಕು ಕಾರ್ಯಕಾರಿ ಸಮಿತಿ ಚುನಾವಣೆ ಫಲಿತಾಂಶ ಘೋಷಣೆ ಆಗಿದ್ದು, ಮಹಿಳಾ ಪ್ರತಿನಿಧಿ -2, ಪುರುಷ ಪ್ರತಿನಿಧಿ -4 ಸೇರಿದಂತೆ ಒಟ್ಟು 6 ಸ್ಥಾನಗಳಿಗೆ ಚುನಾವಣೆ ನಡೆದಿದ್ದು, ಮಹಿಳಾ ಸ್ಥಾನಕ್ಕೆ ಅಕ್ಕಮಹಾದೇವಿ ಹಾದಿಮನಿ 157 ಮತಗಳ ಪಡೆದು ಪ್ರಥಮ ಸ್ಥಾನ, ಶೋಭಾ ನಾಯ್ಕೋಡಿ 122 ಮತಗಳನ್ನು ಪಡೆದು ದ್ವಿತೀಯ ಸ್ಥಾನದಲ್ಲಿ ಆಯ್ಕೆಯಾಗಿದ್ದಾರೆ. ಪುರುಷರಲ್ಲಿ ಗುರುನಾಥ ರಾಠೋಡ 139 ಮತಗಳು, ಹಾಜಿ ಮಲಂಗ್ 111 ಮತಗಳು, ಸುರೇಶ ಹಾದಿಮನಿ 100 ಮತಗಳು, ಪ್ರಕಾಶ ಬಡಿಗೇರ 91 ಮತಗಳನ್ನು ಪಡೆದು ಎಲ್ಲ ಅಭ್ಯರ್ಥಿಗಳು ಬಹುಮತದಿಂದ ಆಯ್ಕೆಯಾಗಿದ್ದಾರೆ.

ಪುರುಷ ಅಭ್ಯರ್ಥಿಗಳು 16, ಮಹಿಳಾ ಅಭ್ಯರ್ಥಿಗಳು 4 ಸೇರಿದಂತೆ ಒಟ್ಟು 20 ಅಭ್ಯರ್ಥಿಗಳು ಕಣದಲ್ಲಿದ್ದರು. ವಿಜೇತ ಅಭ್ಯರ್ಥಿಗಳಿಗೆ ಚುನಾವಣೆ ಅಧಿಕಾರಿ ಯಲ್ಲಪ್ಪ ಚಂದನಕೇರಿ ಉಪ ಚುನಾವಣೆ ಅಧಿಕಾರಿ ಬಸವರಾಜ ಕೋಳ್ಳೂರು ಪ್ರಮಾಣ ಪತ್ರ ವಿತರಿಸಿದರು.

ಈ ಸಂದರ್ಭದಲ್ಲಿ ಕೊಟ್ರೇಶ ಕೋಳೂರು, ಬಸವರಾಜ ತೆಗ್ಗೆಳ್ಳಿ, ನಾಗನಗೌಡ ಪಾಟೀಲ, ರವಿ ಕನಕರೆಡ್ಡಿ, ವೀರನಗೌಡ ಪಾಟೀಲ, ಗುರುನಾಥ ಹುಲಕಲ್, ಭೀಮಣ್ಣ ವಾಲ್ಮೀಕಿ, ಷಣ್ಮುಕಪ್ಪ ನುಚ್ಚಿ, ಕಾಂತೇಶ ಹಲಗಿಮನಿ, ಶಿವಾನಂದ ತೋಟದ, ನಿಂಗನಗೌಡ ಪಾಟೀಲ, ರಂಗಯ್ಯ ಗುತ್ತೇದಾರ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಸುದ್ದಿ ಸಿಂಚನ

ಜಿಟಿಟಿಸಿ ಪ್ರವೇಶಕ್ಕೆ ಅರ್ಜಿ

ಲಿಂಗಸುಗೂರು: ಇಲ್ಲಿನ ಕರಡಕಲ್ ರಸ್ತೆಯ ಬಳಿ ಸ್ಥಾಪಿತವಾಗಿರುವ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ (ಜಿಟಿಟಿಸಿ)ದ ವತಿಯಿಂದ 2026-27ನೇ ಸಾಲಿನಲ್ಲಿ ವಿವಿಧ ಕೋರ್ಸ್‌ಗಳ ಪ್ರವೇಶಕ್ಕಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಕರ್ನಾಟಕ ಸರ್ಕಾರದ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರದ ಸ್ವಾಯತ್ತ ಸಂಸ್ಥೆಯಾಗಿದ್ದು, ಈ ಭಾಗದಲ್ಲಿನ ಪ್ರತಿಷ್ಠಿತ ತಾಂತ್ರಿಕ ವಿದ್ಯಾಸಂಸ್ಥೆಗಳಲ್ಲಿ ಒಂದಾಗಿದೆ. ನಮ್ಮ ಸಂಸ್ಥೆಯಿಂದ ನಡೆಸಲ್ಪಡುವ ಡಿಪ್ಲೊಮಾ ಇನ್ ಟೂಲ್ ಅಂಡ್ ಡೈ ಮೇಕಿಂಗ್, ಡಿಪ್ಲೊಮಾ ಇನ್ ಆಟೊಮೇಷನ್ ಅಂಡ್ ರೊಬೊಟಿಕ್ಸ್, ಡಿಪ್ಲೊಮಾ ಇನ್ ಪ್ರಿಸಿಶನ್ ಮ್ಯಾನುಫ್ಯಾಕ್ಚರಿಂಗ್ 3+1ವರ್ಷದ ಕೋರ್ಸ್‌ಗಳ ಪ್ರವೇಶಾತಿಗಾಗಿ ಮೇ.15ರೊಳಗಾಗಿ ಜಿಟಿಟಿಸಿ ವೆಬ್‌ಸೈಟ್: https://gttc.karnataka.gov.in ನಲ್ಲಿ ಅಥವಾ ನೇರವಾಗಿ ಸಂಸ್ಥೆಗೆ ಅಗತ್ಯ ದಾಖಲಾತಿಗಳೊಂದಿಗೆ ಭೇಟಿ ನೀಡಿ ಅರ್ಜಿ ಯನ್ನು ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಮೊಬೈಲ್ ಸಂಖ್ಯೆ: 9902072101, 8762564872ಗೆ ಸಂಪರ್ಕ ಮಾಡಬಹುದಾಗಿದೆ ಎಂದು ಕಾಲೇಜಿನ ಪ್ರಾಂಶುಪಾಲರು ಪ್ರಕಟಣೆ ಯಲ್ಲಿ ತಿಳಿಸಿದ್ದಾರೆ.

ಕಸಾಪ ಸಂಸ್ಥಾಪನಾ ದಿನಾಚರಣೆ ಇಂದು

ಸಿಂಧನೂರು: ಕನ್ನಡ ಸಾಹಿತ್ಯ ಪರಿಷತ್ ತಾಲ್ಲೂಕು ಘಟಕದಿಂದ ಮಂಗಳವಾರ ಬೆಳಗ್ಗೆ 10 ಗಂಟೆಗೆ ನಗರದ ಸನ್‌ರೈಸ್ ಕಾಲೇಜಿನಲ್ಲಿ ಪರಿಷತ್ತಿನ 112ನೇ ಸಂಸ್ಥಾಪನಾ ದಿನಾಚರಣೆ, ಕನ್ನಡ ಪ್ರೌಢ ಶಾಲೆಯ ಎಸ್. ಎಸ್. ಎಲ್. ಸಿ. ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಆಯೋಜಿಸಲಾಗಿದೆ.ಇಲ್ಲಿನ ಎಪಿಎಂಸಿ ಮಾಜಿ ರಾಜ್ಯ ಉಪಾಧ್ಯಕ್ಷ ರಾಜಶೇಖರ ಪಾಟೀಲ್ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ನಿವೃತ್ತ ಪ್ರಾಚಾರ್ಯ ವೀರನಗೌಡ ಗುಮಗೇರಾ ಉಪನ್ಯಾಸ ನೀಡಲಿದ್ದಾರೆ. ಕಸಾಪ ಮಾಜಿ ಜಿಲ್ಲಾಧ್ಯಕ್ಷ ಎಸ್.ಶರಣೇಗೌಡ, ಸನ್ ರೈಸ್ ಸಮೂಹ ಸಂಸ್ಥೆಯ ಅಧ್ಯಕ್ಷ ಇರ್ಫಾನ್ ಕೆ., ಕಸಾಪ ಮಾಜಿ ತಾಲ್ಲೂಕು ಅಧ್ಯಕ್ಷರಾದ ಬೀರಪ್ಪ ಶಂಭೋಜಿ, ವೆಂಕನಗೌಡ ವಟಗಲ್, ಜಿಲ್ಲಾ ಪ್ರತಿನಿಧಿ ರಮಾದೇವಿ ಶಂಭೋಜಿ, ಮಾಜಿ ಅಧ್ಯಕ್ಷರಾದ ಸರಸ್ವತಿ ಪಾಟೀಲ್, ಪಂಪಯ್ಯಸ್ವಾಮಿ ಸಾಲಿಮಠ, ವನಸಿರಿ ಫೌಂಡೇಷನ್ ನ ಅಮರೇಗೌಡ ಮಲ್ಲಾಪುರ, ಕಾಂಗ್ರೆಸ್ ಮುಖಂಡ ಸೈಯದ್ ಹಾರೂನ್ ಪಾಷಾ ಜಾಹಗೀರ್‌ದಾರ್, ಲಕ್ಷ್ಮೀ ಪತ್ತಾರ್ ಭಾಗವಹಿಸಲಿದ್ದಾರೆ ಎಂದು ಕಸಾಪ ತಾಲೂಕು ಘಟಕದ ಅಧ್ಯಕ್ಷ ಹೆಚ್.ಎಫ್.ಮಸ್ಕಿ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಕವಿತಾಳದಲ್ಲಿ ವಿಜಯೋತ್ಸವ

ಕವಿತಾಳ : ಮೊದಲ ಬಾರಿಗೆ ಪಶ್ಚಿಮ ಬಂಗಾಳದಲ್ಲಿ ಮತದಾರರು ಕಮಲಕ್ಕೆ ಭರ್ಜರಿ ಮತ ನೀಡಿ ಜಯಭೇರಿ ಬಾರಿಸಿದ್ದಲ್ಲದೆ ಅಸ್ಸಾಂ, ಪುದುಚೇರಿಗಳಲ್ಲೂ ಬಿಜೆಪಿ ಅಧಿಕಾರದ ಚುಕ್ಕಾಣಿ ಹಿಡಿದ ಹಿನ್ನೆಲೆಯಲ್ಲಿ ಕವಿತಾಳ ಪಟ್ಟಣದ ಬಿಜೆಪಿ ಕಾರ್ಯಕರ್ತರು ಇಲ್ಲಿನ ಗ್ರಾಮ ದೇವತೆ ದ್ಯಾವಮ್ಮ ದೇವಿ ದೇವಸ್ಥಾನದ ಮುಂಭಾಗದಲ್ಲಿ ಪಟಾಕಿ ಸಿಡಿಸಿ ಸಂಭ್ರಮದ ವಿಜಯೋತ್ಸವ ಆಚರಿಸಿದರು. ಈ ವೇಳೆ ಮೋದಿ, ಅಮಿತ್ ಶಾ ಪರ ಘೋಷಣೆ ಕೂಗಿದರು ಪಟಾಕಿ ಸಿಡಿಸಿ ಪರಸ್ಪರ ಸಿಹಿತಿಂಡಿ ಅಂಚಿ ಸಂಭ್ರಮಿಸಿದರು. ಪಪಂ ಸದಸ್ಯ ರಾಘವೇಂದ್ರ ಶೆಟ್ಟಿ ಮಾತನಾಡಿ, ಪಶ್ಚಿಮ ಬಂಗಾಳದಲ್ಲಿ ವ್ಯಾಪಕ ಹಿಂದುತ್ವ ವಿರೋಧಿ ಆಡಳಿತ ವೈಖರಿಯಿಂದ ಬೇಸತ್ತ ಜನತೆ ಬಿಜೆಪಿ ಕೈಹಿಡಿದಿದ್ದಾರೆ ಈ ಮೂಲಕ ಹಿಂದುತ್ವದ ವಿರುದ್ಧ ಹೋಗುವವರಿಗೆ ಮತದಾರರು ಸ್ಪಷ್ಟವಾದ ಸಂದೇಶವನ್ನು ನೀಡಿದ್ದಾರೆ ಈ ಐತಿಹಾಸಿಕವಾದ ಜಯವನ್ನು ಗಳಿಸಿರುವುದರಿಂದ ಸಂಭ್ರಮ ಆಚರಿಸುತ್ತಿದ್ದೇವೆ ಎಂದರು. ಈ ಸಂದರ್ಭದಲ್ಲಿ ಕಾರ್ಯಕರ್ತರಾದ ಎಚ್ ಬಸವರಾಜ, ಅರುಣಕುಮಾರ, ನೀಲಕಂಠ, ಶಿವರಾಜ ಪಾಟೀಲ್ ಡೋಣಮರಡಿ, ಸತ್ಯಪ್ಪ, ಮೌನೇಶ್ ಪತ್ತಾರ್, ಶಂಕರ್, ಮಂಜುನಾಥ್ ಪತ್ತಾರ್, ವಿರೂಪಾಕ್ಷಪ್ಪ ಸಾಹುಕಾರ್, ಶೈಲೇಶ್ ದಾದ, ಮುಂತಾದವರು ಉಪಸ್ಥಿತರಿದ್ದರು.



ಕವಿತಾಳ ಇಲ್ಲಿನ ಗ್ರಾಮದೇವತೆ ದ್ಯಾವಮ್ಮ ದೇವಿ ದೇವಸ್ಥಾನದ ಮುಂಭಾಗದಲ್ಲಿ ಪಟಾಕಿ ಸಿಡಿಸಿ ಸಂಭ್ರಮದ ವಿಜಯೋತ್ಸವ ಆಚರಿಸಿದರು.

ಸುಸ್ಥಿರ ಘನತ್ಯಾಜ್ಯ ನಿರ್ವಹಣೆಗೆ ಮಾಸ್ಟರ್ ಪ್ಲಾನ್

ರಾಯಚೂರು ಪಾಲಿಕೆಯಿಂದ ಅಂತಾರಾಷ್ಟ್ರೀಯ ಗುಣಮಟ್ಟದಲ್ಲಿ ಕಸ ವಿಲೇವಾರಿ ಪ್ರಕ್ರಿಯೆ; ಆರ್‌ಆರ್‌ಆರ್ ಸೆಂಟರ್ ಆರಂಭ

ನಗರದಲ್ಲಿ ಮರು ಬಳಕೆಗೆ ಅವಕಾಶ | ತ್ಯಾಜ್ಯ ಸಂಸ್ಕರಣಾ ಘಟಕದ ಸ್ಥಾಪನೆ, ಭೂಗರ್ಭದಲ್ಲಿ ನಿಷ್ಕ್ರಿಯ ಕಸ ಹೂಳುವ ಪದ್ಧತಿ

• **ರಾಮಕೃಷ್ಣ ದಾಸರಿ**
ಕನ್ನಡಪ್ರಭ ವಾರ್ತೆ ರಾಯಚೂರು

ಹತ್ತಾರು ದಶಕಗಳಿಂದ ನಗರವನ್ನು ಕಾಡುತ್ತಿರುವ ಘನ-ತ್ಯಾಜ್ಯ ನಿರ್ವಹಣೆ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಮಹಾನಗರ ಪಾಲಿಕೆಯು ಮಾಸ್ಟರ್ ಪ್ಲಾನ್ ರೂಪಿಸಿ ಅನುಷ್ಠಾನಕ್ಕೆ ತರುತ್ತಿದೆ.ಅದಕ್ಕಾಗಿಅಂತಾರಾಷ್ಟ್ರೀಯಗುಣಮಟ್ಟದ ಪ್ರಕ್ರಿಯೇ ನಡೆಸಿ ಕಸ ವಿಲೇವಾರಿ ಪ್ರಕ್ರಿಯೇಯನ್ನು ಕೈಗೊಂಡಿದೆ.

ದೇಶದ ದೊಡ್ಡ ನಗರ, ಪಟ್ಟಣಗಳಲ್ಲಿ ಕಸ ಸಂಗ್ರಹ, ವಿಲೇವಾರಿ ಹಾಗೂ ನಿರ್ವಹಣೆ ಮತ್ತು ಮರು ಬಳಕೆಗೆ ಸಂಬಂಧಿಸಿದಂತೆ ಚಾಲ್ತಿಯಲ್ಲಿರುವ ಹಾಗೂ ಅತ್ಯಂತ ಯಶಸ್ಸು ಕಂಡಿರುವ ಎರಡು ಪ್ರಮುಖ ಪದ್ಧತಿಗಳನ್ನು ರಾಯಚೂರಿನಲ್ಲಿ ಜಾರಿಗೊಳಿಸಿದ್ದು, ಮೊದಲ ಹಂತವಾಗಿ ಆರ್ ಆರ್ ಆರ್ ಸೆಂಟರ್ ನ್ನು ಆರಂಭಿಸುವುದು ಎರಡನೇ ಹಂತವಾಗಿ ತ್ಯಾಜ್ಯ ಸಂಸ್ಕರಣಾ ಘಟಕ (ಎಂ ಆರ್ ಎಫ್) ಸ್ಥಾಪನೆ ಮಾಡುವುದರ ಮುಖಾಂತರ ಘನ-ತ್ಯಾಜ್ಯವನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಪಾಲಿಕೆ ಮುಂದಾಗಿದೆ.

ದೇಶದ ದೊಡ್ಡ ದೊಡ್ಡ ನಗರಗಳಲ್ಲಿ ಸುಸ್ಥಿರ ಘನ-ತ್ಯಾಜ್ಯ ನಿರ್ವಹಣೆಯಲ್ಲಿ ಮಹತ್ವದ ಪಾತ್ರವನ್ನು ನಿಭಾಯಿಸುತ್ತಿರುವ ಆರ್‌ಆರ್‌ಆರ್(ರೆಡ್ಯೂಸ್,ರೀ-ಯೂಸ್, ರೀ-ಸೈಕಲ್) ಸೆಂಟರ್ ಗಳನ್ನು ರಾಯಚೂರು ನಗರದಲ್ಲಿ ಸ್ಥಾಪನೆ ಮಾಡುಲು ಇಲ್ಲಿನ ಮಹಾನಗರ ಪಾಲಿಕೆಯು ಕ್ರಮ ವಹಿಸಿದೆ. ಇದರಿಂದಾಗಿ ನಿತ್ಯ ಸಂಗ್ರಹಗೊಳ್ಳುತ್ತಿರುವ ಘನ-ತ್ಯಾಜ್ಯದ ಸಂಗ್ರಹದ ಪ್ರಮಾಣ ವನ್ನು ಕಡಿಮೆಗೊಳಿಸುವುದರ ಜೊತೆಗೆ ಅಗತ್ಯವಾದ ವಸ್ತುಗಳನ್ನು ಮರಳಿ ಬಳಕೆ ಮಾಡುವುದು ಹಾಗೂ ಪುನರ್ ಉಪಯೋಗಿಸಿ ಕಸಮುಕ್ತ, ಸ್ವಚ್ಛ-ಸುಂದರ ಹಾಗೂ ಪರಿಸರ ಸ್ನೇಹಿ ನಗರವನ್ನಾಗಿಸಲು ಯೋಜನೆ ರೂಪಿಸಿದೆ.

ಏನಿದು ಟ್ರಿಪಲ್ ಆರ್? : ಸ್ವಚ್ಛ ಭಾರತ್ ಮಿಷನ್ 2.0 ರಡಿಯಲ್ಲಿ ದೇಶದಾದ್ಯಂತ ದೊಡ್ಡ ನಗರ, ಪಟ್ಟಣಗಳಲ್ಲಿ ಸುಸ್ಥಿರ ಘನ-ತ್ಯಾಜ್ಯ ನಿರ್ವಹಣೆಗಾಗಿ ಟ್ರಿಪ್ ಆರ್ ಸೆಂಟರ್ ಗಳನ್ನು ಆರಂಭಿಸಿ. ಆ ಕೇಂದ್ರಗಳಲ್ಲಿ ವೈಜ್ಞಾನಿಕ ಪದ್ಧತಿಯಡಿ ದೊಡ್ಡ ಡಬ್ಬಿಗಳ ನ್ನಿಟ್ಟಿರುತ್ತಾರೆ. ಅದರಲ್ಲಿ ಈಗಾಗಲೇ ಬಳಸಿದ ವಸ್ತುಗಳು, ಹಳೆಯ ಬಟ್ಟೆ, ಬೂಟುಗಳು, ಆಟಿಕೆ, ಪುಸ್ತಕಗಳು ಮತ್ತು ಕಾಟನ್ ಡಬ್ಬಿಗಳು, ಪ್ಲಾಸ್ಟಿಕ್ ಸೇರಿದಂತೆ ಅನಗತ್ಯವಾದ ಸಾಮಗ್ರಿಗಳನ್ನು ಜನರೇ ತಮ್ಮ ಸಮೀಪದ ಟ್ರಿಪಲ್ ಆರ್ ಸೆಂಟರ್ ಗಳಿಗೆ ತಂದು ನೀಡಿದ್ದಲ್ಲಿ ಅಗತ್ಯವಿರುವವರು ಬಂದು ಅವುಗಳನ್ನು ಪಡೆದು ಮರು ಬಳಕೆ ಮಾಡಿಕೊಳ್ಳಬಹುದಾಗಿದೆ. ಇದರಿಂದಾಗಿ ಘನ-ತ್ಯಾನ್ಯ ಸಂಗ್ರಹ ಪ್ರಮಾಣವು ಗಣನೀಯವಾಗಿ ಕಡಿಮೆಯಾಗುವುದರ ಜೊತೆಗೆ ಮಾರಕವಾದ ಪ್ಲಾಸ್ಟಿಕ್, ಕಸ ಭೂಮಿಗೆ ಸೇರದಂತೆ ಪರಿಸರವನ್ನು ಸಹ ಕಾಪಾಡಬಹುದಾಗಿದೆ.



ರಾಯಚೂರು ಮಹಾನಗರ ಪಾಲಿಕೆಯಿಂದ ಆರಂಭಿಸುತ್ತಿರುವ ಆರ್ ಆರ್ ಆರ್ ಸೆಂಟರ್‌ಗಳ ಎಐ ಚಿತ್ರ

ಎಲ್ಲೆಲ್ಲಿ ಸ್ಥಾಪನೆ ?: ಆರ್ ಆರ್ ಆರ್ ಸೆಂಟರ್‌ಗಳನ್ನು ಕಾರ್ಯಾರಂಭ ಮಾಡುವುದರ ಜೊತೆಗೆ ಯಾವ ರೀತಿಯಾಗಿ ಅವು ಗಳನ್ನು ನಿರ್ವಹಿಸಬೇಕು ಎನ್ನುವುದರ ಕುರಿತು ರಾಯಚೂರು ಮಹಾನಗರ ಪಾಲಿಕೆಯು ಆಳವಾದ ಅಧ್ಯಯನ ನಡೆಸಿ ಯೋಜನೆಯನ್ನು ರೂಪಿಸಿ ಕಾರ್ಯಗತಗೊಳಿಸಿದೆ. ಆರಂಭದಲ್ಲಿ ರಾಯಚೂರು ನಗರದ ವಾರ್ಡ್ ನಂ.5 ರ ವ್ಯಾಪ್ತಿಗೆ ಬರುವ ನಿಜಲಿಂಗಪ್ಪ ಕಾಲೋನಿಯಲ್ಲಿ ಅದೇ ರೀತಿ ವಾರ್ಡ್ ನಂ.26 ಗಂಜ್ ಏರಿಯಾದಲ್ಲಿ ಈ ಟ್ರಿಪಲ್ ಆರ್ ಸೆಂಟರ್ ಗಳನ್ನು ಸ್ಥಾಪಿಸಿದೆ. ಮುಂದಿನ ಮೂರು ತಿಂಗಳಲ್ಲಿ ನಗರದ ವ್ಯಾಪ್ತಿಯಲ್ಲಿರುವ ಹತ್ತು ಪ್ಯಾಕೇಜ್‌ಗಳಲ್ಲಿ ಪ್ರತಿ ಮೂರು ವಾರ್ಡ್ ಗಳಿಗೆ ಒಂದರಂತೆ ಈ ಆರ್ ಆರ್ ಆರ್ ಕೇಂದ್ರಗಳನ್ನು ಆರಂಭಿಸಲು ನೀಲನಕ್ಷೆಯನ್ನು ರೂಪಿಸಿಕೊಂಡಿದೆ. ತ್ಯಾಜ್ಯವನ್ನು ಸಂಗ್ರಹಿಸಲು ಹಸಿರು ದಳ ಎನ್ನುವ ಸಂಸ್ಥೆಯಿಂದ ಸರ್ವೆ ಮಾಡಿಸಿದ್ದು ಅದಕ್ಕಾಗಿ ಸುಮಾರು 80 ಜನ ಚಿಂದಿ ಆಯುವವರನ್ನು ಗುರುತಿಸಲಾಗಿದೆ. ಇವರುಗಳು ತ್ಯಾಜ್ಯವನ್ನು ಉಚಿತವಾಗಿ ತೆಗೆದುಕೊಂಡು ಹೋಗಲು ಅನುಕೂಲ ಮಾಡಿಕೊಟ್ಟಿದ್ದು, ಇದರಿಂದ ಯಕ್ಲಾಸಪುರದಲ್ಲಿರುವ ಘನ-ತ್ಯಾಜ್ಯ ಸಂಗ್ರಹ ಘಟಕಕ್ಕೆ ಕಸ ಬಾರದಂತೆ ನಿಯಂತ್ರಿಸಬಹುದಾಗಿದೆ.

ತ್ಯಾಜ್ಯ ಸಂಸ್ಕರಣಾ ಘಟಕ ಸ್ಥಾಪನೆ: ಇನ್ನು ಯಕ್ಲಾಸಪುರ ಡಪ್ ಯಾರ್ಡ್ ನ್ಲಲ್ಲಿ ತ್ಯಾಜ್ಯ ಸಂಸ್ಕರಣಾ ಘಟಕವನ್ನು (ಮೆಟೀರಿಯಲ್ಸ್ ರಿಕವರಿ ಫೆಸಿಲಿಟಿ-ಎಂ.ಆರ್. ಎಫ್) ಸ್ಥಾಪಿಸಲಾಗುತ್ತಿದೆ. ಕಳೆದ ಮೂರು ತಿಂಗಳ ಹಿಂದೆಯೇ ಸುಮಾರು 5.40 ಕೋಟಿ ರು. ವೆಚ್ಚದಲ್ಲಿ ಟೆಂಡರ್ ಮಾಡಿ,ಕೆಲಸವನ್ನು ಆರಂಭಿಸಿದ್ದು ಮುಂದಿನ ಮೂರ್ನಾಲ್ಕು ತಿಂಗಳಲ್ಲಿ ಕಾಮಗಾರಿ ಪೂರ್ಣಗೊಂಡು ಘಟಕ ಆರಂಭಗೊಳ್ಳಲಿದೆ. ಇದರ ಜೊತೆಗೆ ಬೆಳಗಾವಿ ಕಂಪನಿಗೆ ಸುಮಾರು 2.5 ಕೋಟಿ ರು.ವೆಚ್ಚದಲ್ಲಿ ಟೆಂಡರ್ ನೀಡಿದ್ದು, ಎರಡು ತಿಂಗಳಲ್ಲಿ ಯಂತ್ರಗಳನ್ನು ಅಳವಡಿಸಲಾಗುತ್ತಿದೆ. ಮುಖ್ಯವಾಗಿ ಸಪ್ಲೇಯರ್ ಇರುತ್ತದೆ, ಸಂಗ್ರಹಿಸಿದ ಕಸವನ್ನು ಸಾಲಾಗಿ ಚಲಿಸುವ ಉದ್ದನೆಯ ಯಾಂತ್ರಿಕ ಪಟ್ಟಿಗಳ (ಕನ್ವೇಯರ್ ಬೆಲ್ಟ್) ಮುಖಾಂತರ ವಿಂಗಡಿಸಿ, ಎರಡೂ ಬದಿಯಲ್ಲಿ ಚಿಂದಿ ಆಯುವವರ ನೆರವಿನಿಂದ ಅಗತ್ಯವಾದ ಪ್ಲಾಸ್ಟಿಕ್, ಕಾಗದ ಮತ್ತು ಲೋಹಗಳನ್ನು ಪ್ರತ್ಯೇಕಿಸು ವುದು, ನಂತರ ಸಂಕೋಚನೆ ಪ್ರಕ್ರಿಯೆಯಲ್ಲಿ ಪ್ರತ್ಯೇಕಿಸಿದ ನೈರ್ಮಲ್ಯವನ್ನು ದೊಡ್ಡ ಕಟ್ಟುಗಳಾಗಿ ಪರಿವರ್ತಿಸಿ ಮರುಬಳಕೆಗೆ ಕಳುಹಿಸಿಕೊಡುವ ಕಾರ್ಯವನ್ನು ಈ ಎಂಆರ್‌ಎಫ್ ಕೇಂದ್ರವು ಮಾಡುತ್ತದೆ.



> ಜಿಲ್ಲಾ ಕೇಂದ್ರವಾದ ರಾಯಚೂರು ನಗರದಲ್ಲಿ ಘನ-ತ್ಯಾಜ್ಯ ನಿರ್ವಹಣೆಗಾಗಿ ವೈಜ್ಞಾನಿಕ ಪದ್ಧತಿಯಡಿ ಯಲ್ಲಿ ಹಂತ ಹಂತವಾಗಿ ಯೋಜನೆಗಳನ್ನು ರೂಪಿಸಿ ಅನುಷ್ಠಾನಕ್ಕೆ ತರಲಾಗಿದೆ. ಅವುಗಳಲ್ಲಿ ಮುಖ್ಯವಾಗಿ ಆರ್‌ಆರ್‌ಆರ್ ಸೆಂಟರ್‌ಗಳು, ಎಂಆರ್ ಎಫ್ ಹಾಗೂ ಸ್‌ಎಲ್‌ಎಫ್ ನಿರ್ಮಾಣವು ಸೇರಿದ್ದು. ಬಹುತೇಕ ಕಾಮಗಾರಿಗಳು ಪೂರ್ಣಗೊಂಡಿವೆ. ಶೀಘ್ರದಲ್ಲಿಯೇ ಅಂತಾರಾಷ್ಟ್ರೀಯ ಗುಣಮಟ್ಟದಲ್ಲಿ ಕಸ ವಿಲೇವಾರಿ ಪ್ರಕ್ರಿಯೆಯನ್ನು ಆರಂಭಿಸಲಾಗುವುದು. ಈ ಮಾದರಿ ಯು ಯಶಸ್ವಿಯಾಗಿ ಮುನ್ನಡೆಯಲು ಎಲ್ಲರೂ ಜಾಗೃತಿಗೊಳ್ಳುವುದರ ಜೊತೆಗೆ ಸಹಕಾರವು ಅಗತ್ಯವಾಗಿ ಬೇಕಾಗಿದೆ.
>
> • **ಜುಬಿನ್ ಮೊಹಾಪಾತ್ರ**, ಆಯುಕ್ತರು, ರಾಯಚೂರು ಮಹಾನಗರ ಪಾಲಿಕೆ



ತ್ಯಾಜ್ಯ ಸಂಸ್ಕರಣಾ ಘಟಕ (ಮೆಟೀರಿಯಲ್ಸ್ ರಿಕವರಿ ಫೆಸಿಲಿಟಿ-ಎಂ.ಆರ್.ಎಫ್)ದ ಎಐ ಚಿತ್ರ

ಇದರಿಂದಾಗಿ ಶೇ.80 ರಷ್ಟು ಘನ-ತ್ಯಾಜ್ಯವನ್ನು ಮರು ಬಳಕೆ ಮಾಡಬಹುದಾಗಿದೆ. ಇನ್ನು ಉಳಿದಂತಹ ಹಸಿ ಕಸವನ್ನು ಗೊಬ್ಬರ ಮಾಡಿ ಪುನರ್ ಬಳಸಲಿದ್ದು, ನಿಷ್ಕ್ರಿಯ ಕಸವನ್ನು ನಿರ್ಮಾಣ ಮಾಡಿದ ಭೂ ಗರ್ಭದಲ್ಲಿ (ಸ್ಯಾನಿಟರಿ ಲ್ಯಾಂಡ್ ಫೀಲ್ -ಎಸ್‌ಎಲ್‌ಎಫ್ ಪ್ರಕ್ರಿಯೇ) ಹೂತು ಹಾಕಲಾಗುತ್ತಿದೆ. ಅದಕ್ಕಾಗಿ ಯಕ್ಲಾಸಪುರದಲ್ಲಿ ಸುಮಾರು 70 ಲಕ್ಷ ರು. ವೆಚ್ಚದಲ್ಲಿ ಎರಡು ಎಸ್‌ಎಲ್‌ಎಫ್‌ಗಳನ್ನು ಸಹ ನಿರ್ಮಿಸಲಾಗಿದೆ. ಹೀಗೆ, ಸ್ಥಳೀಯ ಮಹಾನಗರ ಪಾಲಿಕೆಯು ಘನ-ತ್ಯಾಜ್ಯದ ವಿಲೇವಾರಿ, ವಿಂಗಡಣೆ, ಮರುಬಳಕೆ, ಹೆಚ್ಚಿನ ಪ್ರಮಾಣದಲ್ಲಿ ಕಸ ಸಂಗ್ರಹವಾಗದಂತೆ ಮುನ್ನೆಚ್ಚರಿಕೆ ಹಾಗೂ ನೈರ್ಮಲ್ಯದಡಿ ನಿವಾಸಿಗಳ ಆರೋಗ್ಯ, ಪರಿಸರ ಸಂರಕ್ಷಣೆಯ ಸದುದ್ದೇಶವನ್ನು ಹೊಂದಿ ಅಂತರಾಷ್ಟ್ರೀಯ ಗುಣಮಟ್ಟದ ಸುಸ್ಥಿರ ತ್ಯಾಜ್ಯ ನಿರ್ವಹಣೆಗೆ ಮುಂದಾಗಿದ್ದು ಇದಕ್ಕೆ ಜನಪ್ರತಿನಿಧಿಗಳ, ಅಧಿಕಾರಿಗಳ, ಸಂಘ-ಸಂಸ್ಥೆಗಳ ಮುಖ್ಯವಾಗಿ ನಾಗರೀಕರ ಸಹಕಾರವನ್ನು ಪಾಲಿಕೆ ಕೋರುತ್ತಿದೆ.

ಕಾಂಗ್ರೆಸ್‌ನ ಗ್ಯಾರಂಟಿ ಯೋಜನೆಗಳಿಂದ ರಾಜ್ಯ ದಿವಾಳಿ

ರಸ್ತೆ ಕಾಮಗಾರಿಗಳಿಗೆ ಭೂಮಿ ಪೂಜೆ ನೆರವೇರಿಸಿ ಶಾಸಕ ಮಾನಪ್ಪ ವಜ್ಜಲ್ ರಾಜ್ಯ ಸರ್ಕಾರದ ವಿರುದ್ಧ ವಾಗ್ದಾಳಿ

• **ಕನ್ನಡಪ್ರಭ ವಾರ್ತೆ** ಹಟ್ಟಿಚಿನ್ನದಗಣಿ

ಕಾಂಗ್ರೆಸ್ ಸರ್ಕಾರದ ಗ್ಯಾರಂಟಿ ಯೋಜನೆಗಳಿಂದ ರಾಜ್ಯದ ಪ್ರತಿಯೊಬ್ಬ ವ್ಯಕ್ತಿಯ ಮೇಲೆ ₹1 ಲಕ್ಷ ಸಾಲ ಬೀಳುತ್ತದೆ. ನಾವು ಉಚಿತ ಯೋಜನೆಗಳನ್ನು ಪಡೆದು ನಮ್ಮ ಮಕ್ಕಳು ಮೊಮ್ಮಕ್ಕಳು ಸಾಲ ತೀರಿಸುವಂತೆ ಆಗುತ್ತದೆ. ಇತ್ತ ರಾಜ್ಯದ ಖಜಾನೆ ಬರಿದಾಗಿ ರಾಜ್ಯ ದಿವಾಳಿಯಾಗಿದೆ ಎಂದು ಶಾಸಕ ಮಾನಪ್ಪ ಡಿ. ವಜ್ಜಲ್ ವಾಗ್ದಾಳಿ ನಡೆಸಿದರು.

ಅವರು ಸಮೀಪದ ಬಂಡೇಬಾವಿ, ಮಾಚನೂರು ಹಾಗೂ ಯಲಗಟ್ಟಾ ಗ್ರಾಮದಲ್ಲಿ ರಸ್ತೆ ಕಾಮಗಾರಿಗಳಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿ, ಅಭಿವೃದ್ಧಿ ಕಾಮಗಾರಿಗಳಿಗೆ ರಾಜ್ಯ ಕಾಂಗ್ರೆಸ್ ಸರ್ಕಾರ ಬಿಜೆಪಿ ಶಾಸಕರಿಗೆ ಅನುದಾನ ನೀಡುತ್ತಿಲ್ಲ. ಪ್ರತಿಯೊಂದು ಅಭಿವೃದ್ಧಿ ಕಾಮಗಾರಿಗಳಿಗೆ ಅನುದಾನ ಪಡೆಯಲು ಸಿಎಂ, ಡಿಸಿಎಂ ಹಾಗೂ ಸಚಿವರ ಬಳಿ ಭಿಕ್ಷೆ ಬೇಡಿದರೂ ಕೂಡಾ ತಾತ್ಸಾರದಿಂದ ವರ್ತಿಸುತ್ತಿದೆ. ಕ್ಷೇತ್ರದಲ್ಲಿ ಅಭಿವೃದ್ಧಿ ಮರಿಚಿಕೆಯಾಗಿದೆ. ಸಾಲದ ಮೊತ್ತ ಏರಿಸಿರುವುದೇ ರಾಜ್ಯ ಸರ್ಕಾರದ ಸಾಧನೆಯಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.



ಹಟ್ಟಿಯಿಂದ ಬಂಡೇಬಾವಿ ಗ್ರಾಮದ ರಸ್ತೆಕಾಮಗಾರಿಗೆ ಶಾಸಕ ಮಾನಪ್ಪ ಡಿ.ವಜ್ಜಲ್ ಭೂಮಿ ಪೂಜೆ ಸಲ್ಲಿಸಿದರು.

ಯಲಗಟ್ಟಾದಿಮದ ಪೈದೊಡ್ಡಿ, ಗುರುಗುಂಟಾದಿಂದ ಗೌಡೂರು ರಸ್ತೆ, ಹಟ್ಟಿಯಿಂದ ಬಂಡೇಬಾವಿ ಗ್ರಾಮದ ವರೆಗೆ ಮುಖ್ಯಮಂತ್ರಿ ಗಳ ಮೂಲ ಸೌಕರ್ಯ ಅಭಿವೃದ್ಧಿ ಯೋಜನೆಯಡಿ ₹12.50 ಕೋಟಿ ವೆಚ್ಚದಲ್ಲಿ ರಸ್ತೆ ನಿರ್ಮಾಣ ಮಾಡಲು ಭೂಮಿ ಪೂಜೆ ನೆರವೇರಿಸಲಾಗಿದ್ದು, ಶೀಘ್ರದಲ್ಲಿಯೇ ಕಾಮಗಾರಿ ಮುಗಿಸಲು ಅಧಿಕಾರಿಗಳಿಗೆ ತಿಳಿಸಲಾಗಿದೆ ಎಂದರು. ಬಿಜೆಪಿ ಪ್ರಮುಖರಾದ ಗಿರಿಮಲ್ಲನಗೌಡ ಪಾಟೀಲ್ ಕರಡಕಲ್ ಮಾತನಾಡಿದರು. ಲೋಕೋಪಯೋಗಿ ಇಲಾಖೆ ಜೆಇ ಯಲಗೂರೇಶ್, ಹಸನ್ದೋಸ್ತ್, ಆರ್. ವೆಂಕಟೇಶ್ ಇದ್ದರು.

ಶಾಸಕ ಹಂಪನಗೌಡ ಬಾದರ್ಲಿಗೆ ಸಚಿವ ಸ್ಥಾನ ನೀಡಲು ಒತ್ತಾಯ

ಮಾದಿಗ ಕ್ಷೇಮಾಭಿವೃದ್ಧಿ ಸಂಘದಿಂದ ಸಿಎಂಗೆ ಮನವಿಗೆ ಚಿಂತನೆ



• **ಕನ್ನಡಪ್ರಭ ವಾರ್ತೆ** ಸಿಂಧನೂರು

ಸ್ಥಳೀಯ ಕ್ಷೇತ್ರದ ಶಾಸಕ ಹಂಪನಗೌಡ ಬಾದರ್ಲಿ ಅವರಿಗೆ ಹಿರಿತನದ ಆಧಾರದ ಮೇಲೆ ರಾಜ್ಯ ಸರ್ಕಾರ ಸಚಿವ ಸಂಪುಟ ದರ್ಜೆಯ ಸ್ಥಾನ ನೀಡಬೇಕು ಎಂದು ಮಾದಿಗ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಮರಿಯಪ್ಪ ಜಾಲಿಹಾಳ ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಐದು ಬಾರಿ ಶಾಸಕರಾಗಿರುವ ಹಂಪನಗೌಡ ಬಾದರ್ಲಿ, ರಾಯಚೂರು ಜಿಲ್ಲೆಯ ಹಿರಿಯ ಶಾಸಕರಾಗಿದ್ದು, ಇವರಿಗೆ ಸಚಿವ ಸಂಪುಟ ಪುನರ್‌ರಚನೆಯ ಸಂದರ್ಭದಲ್ಲಿ ಸಚಿವ ಸ್ಥಾನ ನೀಡಬೇಕು. ಮಾದಿಗ ಸಮುದಾಯದ ಹಿರಿಯ ಮುಖಂಡರ ನಿಯೋಗ ಬೆಂಗಳೂರಿಗೆ ತೆರಳಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಗಮನ ಸೆಳೆದು ಒತ್ತಾಯಿಸಲಾಗುವುದು ಎಂದು ಹೇಳಿದರು.

ಡಾ.ಬಿ.ಆರ್.ಅಂಬೇಡ್ಕರ್‌ಸೇವಾ ಸಮಿತಿ ಅಧ್ಯಕ್ಷ ಯಮನಪ್ಪ ಬಿಎಸ್‌ಎನ್‌ಎಲ್ ಮಾತನಾಡಿ, ಹಂಪನಗೌಡ ಬಾದರ್ಲಿ ಅವರು 1978ರಿಂದ ರಾಜಕೀಯಕ್ಕೆ ಪದಾರ್ಪಣೆ ಮಾಡಿದ್ದಾರೆ. ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾಗಿ ಲೋಕೋಪಯೋಗಿ ಉಪಸಮಿತಿ ಸದಸ್ಯರಾಗಿ, 1989 ರಲ್ಲಿ ಮೊದಲ ಬಾರಿಗೆ ಶಾಸಕರಾಗಿ, ಇಲ್ಲಿಯವರೆಗೆ 5 ಬಾರಿ ಶಾಸಕರಾಗಿ ಸಿಂಧನೂರು ತಾಲ್ಲೂಕಿನ ಸಮಗ್ರ ಅಭಿವೃದ್ಧಿಗೆ ಪ್ರಾಮಾಣಿಕವಾಗಿ ಶ್ರಮಿಸಿದ್ದಾರೆ. ಹೀಗಾಗಿ ಅವರಿಗೆ ಸಚಿವ ಸ್ಥಾನ ನೀಡಬೇಕು ಎಂದು ಮನವಿ ಮಾಡಿದರು.

ಈ ವೇಳೆ ಮಾದಿಗ ಸಮುದಾಯದ ಮುಖಂಡರಾದ ಆರ್.ಅಂಬ್ರೋಸ್, ಲಕ್ಷ್ಮಣ ಮೂಡಲಗಿರಿ ಕ್ಯಾಂಪ್, ರಾಮಣ್ಣ ಸಾಸಲಮರಿ, ಹನುಮಂತಪ್ಪ ರೈತನಗರ ಕ್ಯಾಂಪ್, ಹುಲುಗಪ್ಪ ಇದ್ದರು.

ಅಂಗನವಾಡಿ ಕಾರ್ಯಕರ್ತೆ, ಸಹಾಯಕಿ ಹುದ್ದೆಗೆ ಅರ್ಜಿ

• **ಕನ್ನಡಪ್ರಭ ವಾರ್ತೆ** ರಾಯಚೂರು

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ರಾಯಚೂರು ವತಿಯಿಂದ 2022-23, 2023-24, 2024-25 ಮತ್ತು 2025-26ನೇ ಸಾಲಿಗೆ ಅಂಗನವಾಡಿ ಕಂ ಕ್ರಷ್ಷಗಳನ್ನು ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ಪ್ರಾರಂಭಿಸಲು ಸೂಚಿಸಲಾಗಿದೆ. ಜಿಲ್ಲೆಗೆ ಒಟ್ಟು 60 ಕೇಂದ್ರಗಳು ಮಂಜೂರಾಗಿದ್ದು, ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.


ಅಂಗನವಾಡಿ ಕಂ ಕ್ರಷ್ ಕೇಂದ್ರಗಳ ಕಾರ್ಯಕರ್ತೆ ಗೌರವಧನ 5,500 ರು. ಮತ್ತು ಸಹಾಯಕಿ ಗೌರವಧನ 3,000 ರು. ನೀಡಲಾಗುವುದು. ಅಭರ್ಥಿಯು ಸ್ಥಳಿಯ ಅಂಗನವಾಡಿ ಕಂ ಕ್ರಷ್ ಕೇಂದ್ರದ ಸರ್ವೆ ವ್ಯಾಪ್ತಿಯಲ್ಲಿ ವಾಸವಾಗಿರಬೇಕು. ಅರ್ಜಿ ಸಲ್ಲಿಸುವ ಅಭ್ಯರ್ಥಿಯು ಸಂಬಂಧಪಟ್ಟ ಅಂಗನವಾಡಿ ಕೇಂದ್ರದ ವ್ಯಾಪ್ತಿಯಲ್ಲಿ ಅಂಗನವಾಡಿ ಕಾರ್ಯಕರ್ತೆಯಿಂದ ಸರ್ವೆ ವ್ಯಾಪ್ತಿಯಲ್ಲಿರುವ ಬಗ್ಗೆ ದೃಡೀಕರಣ ಪಡೆದು ಸಲ್ಲಿಸಬೇಕು. ಅಭ್ಯರ್ಥಿಯು ಮಹಿಳೆ ಆಗಿರಬೇಕು. ಕರ್ನಾಟಕ ರಾಜ್ಯ ಪದವಿ ಪೂರ್ವ ಶಿಕ್ಷಣ ಇಲಾಖೆಯಲ್ಲಿ ದ್ವಿತೀಯ ಪಿಯುಸಿಯಲ್ಲಿ ತೇರ್ಗಡೆ ಆಗಿರಬೇಕು. ಅಥವಾ ತತ್ಸಮಾನ ವಿದ್ಯಾರ್ಹತೆ ಹೊಂದಿರ ಬೇಕು. ಈ ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿ ಲಭ್ಯವಿಲ್ಲದೇ ಇದ್ದಲ್ಲಿ ಕರ್ನಾಟಕ ರಾಜ್ಯ ಪ್ರೌಢ ಶಿಕ್ಷಣ ಪರೀಕ್ಷ ಮಂಡಳಿ ನಡೆಸುವ 10ನೇ ತರಗತಿಯಲ್ಲಿ ತೇರ್ಗಡೆ ಆಗಿರುವವರನ್ನು ಅಥವಾ ತತ್ಸಮಾನ ವಿಧ್ಯಾರ್ಹತೆ ಹೊಂದಿರುವವರನ್ನು ಪರಿಗಣಿ ಸಬಹುದಾಗಿದೆ. ವಯೋಮಿತಿ ಅರ್ಜಿ ಸಲ್ಲಿಸಲು ನೇಮಕಾತಿ ಅಧಿಸೂಚನೆ ಹೊರಡೊಸಿದ ದಿನಾಂಕಕ್ಕೆ ಕನಿಷ್ಠ 18 ವರ್ಷ ಪೂರ್ಣಗೊಂಡಿರಬೇಕು. ಮತ್ತುಗರಿಷ್ಠ 35 ವರ್ಷ ಮೀರಿರಬಾರದು. ವಿಧವೆಯರು ಮತ್ತು ಅಂಗವಿಕಲರಿಗೆ 10 ವರ್ಷ ವಯೋಮಿತಿಯಲ್ಲಿ ರಿಯಾಯಿತಿ ಇರುತ್ತದೆ.

ಅಭ್ಯರ್ಥಿಯು 10ನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ಅಥವಾ ಕನ್ನಡವನ್ನು ಒಂದು ಭಾಷಾ ವಿಷಯವಾಗಿ ಓದಿರ ಬೇಕು. ಸರ್ಕಾರದಿಂದ ಮಾನ್ಯತೆ ಪಡೆದ ಸಂಸ್ಥೆಯಿಂದ 6 ತಿಂಗಳಿಂದ 6 ವರ್ಷದ ಮಕ್ಕಳ ಪೋಷಣೆ ಮತ್ತು ಶಿಕ್ಷಣಕ್ಕೆ ಸಂಬಂಧಿಸಿದಂತೆ ಕನಿಷ್ಠ 6 ತಿಂಗಳ ಅವಧಿಯ ವಿಷಯವನ್ನು ಅಥವಾ ತರಬೇತಿಯನ್ನು ಪಡೆದಿರಬೇಕು. ರಾಷ್ಟ್ರೀಯ ಶಿಶುಪಾಲನಾ ಕೇಂದ್ರದಲ್ಲಿ ಸೇವೆ ಸಲ್ಲಿಸಿರುವ ಶಿಕ್ಷಕಿ ಹಾಗೂ ಸಹಾಯಕಿ, ವಿಧವೆಯರು, ವಿಶೇಷಚೇತನರು (ಕನಿಷ್ಠ ಶೇಕಡಾ 40 ಗರಿಷ್ಠ ಶೇಕಡಾ 60 ರಷ್ಟು ವಿಕಲಚೇತನರನ್ನು ಮಾತ್ರ ಪರಿಗಣಿಸತಕ್ಕದ್ದು, ಇಲಾಖಾ ಸಂಸ್ಥೆಯ ನಿವಾಸಿಗಳು ಮೇ 18 ರವರೆಗೆ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು, ಸಿಂಧನೂರು, ತುರ್ವಿಹಾಳ, ಲಿಂಗಸುಗೂರು, ಮಾನ್ವಿ, ದೇವದುರ್ಗ, ಸಿರವಾರ, ಗಿಲ್ಲೇಸುಗೂರು, ಮತ್ತು ರಾಯಚೂರು ಇವರನ್ನು ಕಚೇರಿ ವೇಳೆಯಲ್ಲಿ ಸಂಪರ್ಕ ಮಾಡಬಹುದಾಗಿದೆ ಅಥವಾ ಮೊಬೈಲ್ ಸಂಖ್ಯೆ: 7619281523ಗೆ ಸಂಪರ್ಕ ಮಾಡಬಹುದಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಂಪ್ಯೂಟರ್ ಅಂಗಡಿಗಳ ಏಕಾಏಕಿ ತೆರವು ಕೂಡಲೇ ಕೈಬಿಡಲು ಆಗ್ರಹ

ಸಂಘಟನೆಯಿಂದ ಸಹಾಯಕ ಆಯುಕ್ತರಿಗೆ ಮನವಿ



ಲಿಂಗಸುಗೂರಲ್ಲಿ ಕಂಪ್ಯೂಟರ್‌ಅಂಗಡಿಗಳ ತೆರವು ಕೈಬಿಡಲು ಆಗ್ರಹಿಸಿ ಸಹಾಯಕ ಆಯುಕ್ತರ ಕಛೇರಿಯ ಅನುಪಮ ಸಿಂಗ್‌ಗೆ ಮನವಿ ಸಲ್ಲಿಸಿದರು.

• **ಕನ್ನಡಪ್ರಭ ವಾರ್ತೆ** ಲಿಂಗಸುಗೂರು

ಪುರಸಭೆ ವ್ಯಾಪ್ತಿಯಲ್ಲಿ ಪ್ರವಾಸಿ ಮಂದಿರ ಸುತ್ತಮುತಲ ರಸ್ತೆಗಳ ಪಕ್ಕದಲ್ಲಿ ವಿದ್ಯಾವಂತ ನಿರುದ್ಯೋಗಿಗಳು ಕಂಪ್ಯೂಟರ್‌ಅಂಗಡಿಗಳಿಂದ ಜೀವನ ಸಾಗಿಸುತ್ತಿದ್ದು, ಏಕಾಏಕಿಯಾಗಿ ಅಂಗಡಿಗಳನ್ನು ತೆರವುಗೊಳಿಸಲು ಪುರಸಭೆ ಮುಂದಾಗಿದ್ದು ಕೂಡಲೇ ತೆರವು ಕಾರ್ಯಾಚರಣೆ ದಯವಿಟ್ಟು ಕೈ ಬಿಡಬೇಕೆಂದು ಆಗ್ರಹಿಸಿ ಕಂಪ್ಯೂಟರ್‌ಅಂಗಡಿಗಳ ಸಂಘಟನೆಯಿಂದ ಸೋಮವಾರ ಸಹಾಯಕ ಆಯುಕ್ತರಿಗೆ ಮನವಿ ಸಲ್ಲಿಸಿದರು.

ಕಳೆದ 20 ರ್ಷಗಳಿಂದ ವಿದ್ಯಾವಂತ ನಿರುದ್ಯೋಗಿ ಯುವಕರು ಕಂಪ್ಯೂಟರ ಅಂಗಡಿಗಳನ್ನು ಇಟ್ಟು ಸರ್ಕಾರದ ಯೋಜನೆಗಳ ಬಗ್ಗೆ ಜನರಿಗೆ ಮಾಹಿತಿ ನೀಡುತ್ತಾ ಸೌಲತ್ತುಗಳನ್ನು ಕೊಡಿಸುತ್ತಾ ವ್ಯಾಪಾರ ಮಾಡಿ ಉಪಜೀವಿಸುತ್ತಿದ್ದೇವೆ. ನೂರಾರು ಬಡ ಕುಟುಂಬಗಳು ಕಂಪ್ಯೂಟರ್‌ಅಂಗಡಿಗಳನ್ನು ಅವಲಂಬಿಸಿ ಬದುಕುತ್ತಿವೆ. ಜೊತೆಗೆ ನಮ್ಮ ಅಂಗಡಿಗಳಿಗೆ ಬ್ಯಾಂಕು, ಖಾಸಗಿ ಲೇವಾದೇವಿ ಸಂಸ್ಥೆಗಳು ಹಣಕಾಸಿನ ನೆರವು ನೀಡಿವೆ ಈಗಾಗಲೆ ಬ್ಯಾಂಕುಗಳಿಂದ ಪಡೆದ ಸಾಲವನ್ನು ಮರುಪಾವತಿ ಮಾಡಲು ಮತ್ತು ಕುಟುಂಬಗಳ ನಿರ್ವಹಣೆ ಕಂಪ್ಯೂಟರ್‌ಅಂಗಡಿಗಳ ಮೂಲಕ ನಡೆಯುತ್ತಿವೆ. ಆದರೆ ಅಂಗಡಿಗಳಿಗೆ ನೀಡಿದ್ದ ವಿದ್ಯುತ್ ಸಂಪರ್ಕ ಕಡಿತ ಮಾಡಿ ಅಂಗಡಿಗಳ ತೆರವು ಮಾಡುವುದಾಗಿ ಪುರಸಭೆ ನೋಟೀಸ್ ನೀಡಿರುವುದು ಕಂಪ್ಯೂಟರ್‌ಅಂಗಡಿ ಗಳನ್ನು ಅವಲಂಬಿಸಿ ಬದುಕುವ ಬಡ ಕುಟುಂಬಗಳಿಗೆ ದಿಕ್ಕು ತೋಚದಂತ್ತಾಗಿದೆ. ಎಂದು ಅಳಲು ತೋಡಿಕೊಂಡರು.ಕೂಡಲೇ ಕಂಪ್ಯೂಟರ್‌ಅಂಗಡಿಗಳನ್ನು ತೆರವುಗೊಳಸುವುದನ್ನು ಕೈಬಿಟ್ಟು ಅಂಗಡಿ ಹಾಕಿಕೊಳ್ಳಲು ಪರ್ಯಾಯಾ ವ್ಯವಸ್ಥೆ ಕಲ್ಪಿಸಿ ಬಡ ಕಂಪ್ಯೂಟರ್‌ಅಂಗಡಿಕಾರರ ಹಿತ ಕಾಪಡಬೇಕೆಂದು ಮನವಿ ಮಾಡಿದರು. ಈ ವೇಳೆ ಬಸವರಾಜ್ ಗುಂಟಿ, ಪ್ರತಾಪ್ ಸಿಂಗ್, ವಿಜಯ್ ಸಿಂಗ್, ಕರಡಿ, ನವೀನ್ ಕುಮಾರ್, ಅಜರ್, ನವಾಬ್ ಮನಿಯಾರ್, ರಜಾಕ್,ಬೀದಿ ಬದಿ ವ್ಯಾಪಾರಸ್ಥರು ಇದ್ದರು.

ಅಭೂತಪೂರ್ವ | ಪಕ್ಷದ ಕಾರ್ಯಕರ್ತರಿಂದ ಪಟಾಕಿ ಸಿಡಿಸಿ, ಪರಸ್ಪರ ಸಿಹಿ ಹಂಚಿ ಸಂಭ್ರಮ, ಜಯಘೋಷ

3 ರಾಜ್ಯದಲ್ಲಿ ಜಯಭೇರಿ: ಬಿಜೆಪಿ ಪಾಳಯದಲ್ಲಿ ಸಂಭ್ರಮ



• **ಕನ್ನಡಪ್ರಭ ವಾರ್ತೆ** ರಾಯಚೂರು


ದೇಶದ ಐದು ರಾಜ್ಯಗಳಲ್ಲಿ ನಡೆದ ವಿಧಾನ ಸಭಾ ಚುನಾವಣೆಗಳ ಫಲಿತಾಂಶದಲ್ಲಿ 3 ರಾಜ್ಯದಲ್ಲಿ ಬಿಜೆಪಿ ಗೆಲುವು ಸಾಧಿಸಿದ ಹಿನ್ನೆಲೆಯಲ್ಲಿ ಬಿಜೆಪಿ ಜಿಲ್ಲಾ ಸಮಿತಿಯಿಂದ ಸೋಮವಾರ ಸಂಜೆ ಸಂಭ್ರಮ ಆಚರಿಸಲಾಯಿತು.

ಸ್ಥಳೀಯ ಡಾ.ಬಿ.ಆರ್.ಅಂಬೇಡ್ಕರ್ ವೃತ್ತದಲ್ಲಿ ಸೇರಿದ ಪಕ್ಷದ ಕಾರ್ಯಕರ್ತರು ಪಟಾಕಿ ಸಿಡಿಸಿ, ಪರಸ್ಪರ ಸಿಹಿಯನ್ನು ಹಂಚಿಕೊಂಡು ಜಯಕಾರ ಹಾಕಿ ವಿಜಯೋತ್ಸವ ಆಚರಿಸಿದರು. ಈ ವೇಳೆ ಮಾತನಾಡಿದ ಮುಖಂಡರು, ಪಶ್ಚಿಮ ಬಂಗಾಳದಲ್ಲಿ ಇದೇ ಮೊದಲಬಾರಿಗೆ ಬಿಜೆಪಿ ಭರ್ಜರಿ ಗೆಲುವು ಸಾಧಿಸಿದೆ. ಅಷ್ಟೇ ಅಲ್ಲದೇ ಅಸ್ಸಾಂ, ಪುದುಚೇರಿಗಳಲ್ಲೂ ಪಕ್ಷ ಅಧಿಕಾರದ ಚುಕ್ಕಾಣಿ ಹಿಡಿದಿದೆ ದೇಶದ ಬಹುತೇಕ ಎಲ್ಲ ರಾಜ್ಯಗಳಲ್ಲಿ ಬಿಜೆಪಿ ಅಧಿಕಾರವನ್ನು ನಡೆಸುತ್ತಿದ್ದು, ಪಶ್ಚಿಮ ಬಂಗಾಳದಲ್ಲಿನ ಮತದಾರರು ಬಿಜೆಪಿ ಸಂಪೂರ್ಣ ಬೆಂಬಲ ನೀಡುವುದರೊಂದಿಗೆ ಐತಿಹಾಸಿಕ ಗೆಲುವನ್ನು ದಕ್ಕಿಸಿಕೊಟ್ಟಿದ್ದಾರೆ ಎಂದರು. ಈ ಸಂದರ್ಭದಲ್ಲಿ ಪಕ್ಷದ ಹಿರಿಯ-ಕಿರಿಯ ಮುಖಂಡರು, ವಿವಿಧ ಮೋರ್ಚಾಗಳ ಪ್ರಮುಖರು, ಮಹಿಳೆಯರು, ಕಾರ್ಯಕರ್ತರು ಭಾಗವಹಿಸಿದ್ದರು.

ಮುದಗಲ್‌ನಲ್ಲೂ ವಿಜಯೋತ್ಸವ

ಮುದಗಲ್: ಪಶ್ಚಿಮ ಬಂಗಾಳ ಹಾಗೂ ಅಸ್ಸಾಂ ಚುನಾವಣೆಯಲ್ಲಿ ಭಾರತೀಯ ಜನತಾ ಪಾರ್ಟಿ ಗೆಲುವು ಸಾಧಿಸಿದ ನಿಮಿತ್ತ ವಿಜಯೋತ್ಸವ ಆಚರಿಸಲಾಯಿತು.

ಪಟ್ಟಣದ ಪೋಲೀಸ್ ಠಾಣೆಯ ಮುಂಭಾಗದಲ್ಲಿ ಇಂದು ಪಶ್ಚಿಮ ಬಂಗಾಳ ಮತ್ತು ಅಸ್ಸಾಂ ಚುನಾವಣೆಯಲ್ಲಿ ಭಾರತೀಯ ಜನತಾ ಪಕ್ಷ ಅಭೂತಪೂರ್ವ ಗೆಲುವು ಸಾಧಿಸಿದ ಹಿನ್ನೆಲೆಯಲ್ಲಿ ಇಂದು ಭಾರತೀಯ ಜನತಾ ಪಾರ್ಟಿ ಘಟಕ. ವತಿಯಿಂದ ಪಟಾಕಿ ಸಿಡಿಸಿ ಸಿಹಿ ಹಂಚಿ ಸಡಗರ ಸಂಭ್ರಮದಿಂದ ವಿಜಯೋತ್ಸವ ಆಚರಿಸಲಾಯಿತು. ಈ ಸಂದರ್ಭದಲ್ಲಿ ಭಾರತೀಯ ಜನತಾ ಪಾರ್ಟಿ ಮುದಗಲ್ ನಗರ ಘಟಕ ಅಧ್ಯಕ್ಷ ಶ್ರೀ ಕರಿಯಪ್ಪ ಯಾದವ್, ಮಲ್ಲಪ್ಪ ಮಾಟೂರ, ಸಂತೋಷ್ ಸುರುಪೂರ, ವೇಂಕಟೇಶ ಹಿರೇಮನಿ, ನಾಗರಾಜ್ ತಳವಾರ, ನಾಗರಾಜ್ ಯಾದವ್, ವೀರಪ್ಪ ಗುಡೂರ, ಪಾಷಾ ಜಂಬಳ್ಳಿ, ಚಂದವಾಲಿ ಜಂಗಲಿ, ಇನ್ನಿತರರು ಇದ್ದರು.



ನಾ ಭವಿಷ್ಯ ನುಡಿದಂತೆಯೇ ಬಿಜೆಪಿ, ಜೆಸಿಬಿ ಮನೆಗೆ ಹೋದವು: ಎಂಬಿಪಾ



ವಿಜಯಪುರ: ನಾನು ಮೊದಲೇ ಹೇಳಿದ್ದ, ಬಾಗಲಕೋಟೆಯಲ್ಲಿ ಬಿಜೆಪಿ ಹಾಗೂ ಜೆಸಿಬಿ ಎರಡೂ ಮನೆಗೆ ಹೋಗುತ್ತವೆ ಎಂದು. ಉಪಚುನಾವಣೆಯ ಫಲಿತಾಂಶ ಹಾಗೆ ಆಗಿದೆ ಎಂದು ಸಚಿವ ಎಂ.ಬಿ.ಪಾಟೀಲ ಹೇಳಿದರು. ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಾಗಲಕೋಟೆ ಹಾಗೂ ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಜನರು ಆಡಳಿತಾರೂಢ ಕಾಂಗ್ರೆಸ್ ಪಕ್ಷದ ಕೈ ಹಿಡಿದಿದ್ದಾರೆ. ಪಶ್ಚಿಮ ಬಂಗಾಳದಲ್ಲಿ ಸಹಜವಾಗಿಯೇ ಆಡಳಿತ ವಿರೋಧಿ ಅಲೆಯಿದೆ. ತಮಿಳುನಾಡಿನಲ್ಲಿ ನಟ ವಿಜಯ ಸಿನಿಮಾ ಜನಪ್ರಿಯತೆ ಮೂಲಕ ಯುವಕರು, ಮಹಿಳೆಯರ ವಿಶ್ವಾಸ ಸಂಪಾದಿಸಿ ಇತಿಹಾಸ ಸೃಷ್ಟಿಸಿದ್ದಾರೆ. ಅಸ್ಸಾಂನಲ್ಲಿ ಬಿಜೆಪಿ ಸರ್ಕಾರ ಇದೆ, ಕೇರಳದಲ್ಲಿ ನಾವು ಸರ್ಕಾರ ರಚಿಸಲಿದ್ದೇವೆ ಎಂದು ಹೇಳಿದರು.


ಗೆಲ್ಲದಿದ್ರೂ ಜನರ ವಿಶ್ವಾಸ ಗಳಿಸಲು ಯಶಸ್ವಿ: ಬಿವೈವಿ

ಈ ಸೋಲು ಮುಂದೆ ಗೆಲುವಿನ ಮೆಟ್ಟಿಲಾಗಲಿದೆ | ಕಾರ್ಯಕರ್ತರ ಶ್ರಮ ನಿಷ್ಫಲವಾಗುವುದಿಲ್ಲ: ಬಿಜೆಪಿ ಅಧ್ಯಕ್ಷ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಬಾಗಲಕೋಟೆ ಮತ್ತು ದಾವಣಗೆರೆ ದಕ್ಷಿಣ ಕ್ಷೇತ್ರಗಳ ಉಪ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿಗಳು ಗೆಲುವಿನ ಗೆರೆ ದಾಟದಿದ್ದರೂ ಗಣನೀಯ ಪ್ರಮಾಣದಲ್ಲಿ ಜನರ ವಿಶ್ವಾಸ ಗಳಿಸುವಲ್ಲಿ ಯಶಸ್ವಿಯಾಗಿದ್ದಾರೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈ ಎರಡೂ ಕ್ಷೇತ್ರಗಳಲ್ಲಿ ನಮ್ಮ ಪಕ್ಷದ ಕಾರ್ಯಕರ್ತರ ಅವಿರತ ಪರಿಶ್ರಮ, ದಿಟ್ಟ ಹೋರಾಟದ ಫಲವಾಗಿ ಪಕ್ಷದ ಅಭ್ಯರ್ಥಿಗಳು ಗೆಲುವಿನ ಸಮೀಪ ಬಂದಿದ್ದಾರೆ. ಇದು ಮುಂದಿನ ದಿನಗಳ ಗೆಲುವಿಗೆ ಮೆಟ್ಟಿಲಾಗಲಿದೆ.



ಮುಂ ಬರುವ ಚುನಾವಣೆಯಲ್ಲಿ ಜನಾಶೀರ್ವಾದ ಪಡೆಯುವ ನಿಟ್ಟಿನಲ್ಲಿ ನಮ್ಮ ನಿರಂತರ ಪ್ರಯತ್ನ ಮುಂದುವರೆಸೋಣ ಎಂದರು.

2 ಕ್ಷೇತ್ರಗಳಲ್ಲಿ ಯಾವುದೇ ಸಣ್ಣ ಒಡಕಿಲ್ಲದೇ, ಸ್ಥಳೀಯ ಮುಖಂಡರು ತಮ್ಮ ಸಮಸ್ಯೆಗಳನ್ನು ಬದಿಗಿಟ್ಟು ಪಕ್ಷದ ಅಭ್ಯರ್ಥಿ ಪರವಾಗಿ ಶ್ರಮ ಹಾಕಿದ್ದಾರೆ. ನಾವು ಕೂಡ ಕೈಜೋಡಿಸಿದ್ದೇವೆ. ಕಾರ್ಯಕರ್ತರೂ ಹಗಲೂ ರಾತ್ರಿ ಶ್ರಮ ಹಾಕಿದ್ದಾರೆ ಎಂದು ತಿಳಿಸಿದರು.

ಈ ಹಿನ್ನಲೆಯಿಂದ ಧೃತಿಗೆಡುವ ಅವಶ್ಯಕತೆಯಿಲ್ಲ. ನಮ್ಮ ಅಭ್ಯರ್ಥಿಗಳು ಸೇರಿದಂತೆ ಚುನಾವಣಾ ಪ್ರಚಾರದಲ್ಲಿ ತೊಡಗಿಕೊಂಡಿದ್ದ ಎಲ್ಲಾ ನಮ್ಮ ಕಾರ್ಯಕರ್ತರು, ಪ್ರಮುಖರೆಲ್ಲರಿಗೂ ಕೃತಜ್ಞತೆಗಳನ್ನು ಸಲ್ಲಿಸುವ ಜೊತೆಗೆ ಪಕ್ಷ ಎಂದೆಂದಿಗೂ ನಿಮ್ಮೊಂದಿಗೆ ನಿಂತಿದೆ. ಪಕ್ಷವನ್ನು ಬೆಂಬಲಿಸಿ ಆಶೀರ್ವದಿಸಿದ ಎರಡೂ ಕ್ಷೇತ್ರಗಳ ಸಮಸ್ತ ಮತದಾರ ಬಂಧುಗಳಿಗೂ ಕೃತಜ್ಞತಾಪೂರ್ವಕ ವಂದನೆಗಳು. ನಿಮ್ಮ ನಿರೀಕ್ಷೆಗೆ ತಕ್ಕಂತೆ, ನಮ್ಮ ಸೇವೆ, ಸಂಘಟನೆ ಮತ್ತು ಹೋರಾಟಗಳನ್ನು ಮತ್ತಷ್ಟು ಹೆಚ್ಚು ಶಕ್ತಿ ಹಾಗೂ ಹುಮ್ಮಸ್ಸಿನಿಂದ ಮುಂದುವರಿಸುತ್ತೇವೆ ಎಂದರು.

ದೇಶದಲ್ಲೇ ಕಾಂಗ್ರೆಸ್ ಅಸ್ತಿತ್ವ ಶೂನ್ಯ, ಮುಂದೆ ರಾಜ್ಯದಲ್ಲೂ ಮನೆಗೆ: ಜೋಶಿ

ನವದೆಹಲಿ: 'ಕೇರಳ ಬಿಟ್ಟರೆ ದೇಶದಲ್ಲಿ ಕಾಂಗ್ರೆಸ್ ಅಸ್ತಿತ್ವ ಶೂನ್ಯ. ಮುಂಬರುವ ಚುನಾವಣೆಯಲ್ಲಿ ಕರ್ನಾಟಕದಲ್ಲಿಯೂ 'ಇದೇ ಸ್ಥಿತಿ ಎದುರಾಗಲಿದೆ' ಎಂದು ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಭವಿಷ್ಯ ನುಡಿದರು. ದೆಹಲಿಯಲ್ಲಿ ಸೋಮವಾರ



ಸುದ್ದಿಗೋಷ್ಠಿಯಲ್ಲಿ ಪಂಚರಾಜ್ಯ ಚುನಾವಣೆ ಫಲಿತಾಂಶ ಕುರಿತು ಪ್ರತಿಕ್ರಿಯಿಸಿ, ದುರಾಡಳಿತ, ಮಿತಿಮೀರಿದ ತುಷ್ಟೀಕರಣ, ಭ್ರಷ್ಟಾಚಾರ, ಗೂಂಡಾಗಿರಿ ವಿರುದ್ಧ ಅತ್ಯಂತ ಸ್ಪಷ್ಟ ಜನಾದೇಶ ಇದಾಗಿದೆ. ಪ್ರಧಾನಿ ಮೋದಿ ನೇತೃತ್ವದ ಎನ್‌ಡಿಎ-ಬಿಜೆಪಿ ಆಡಳಿತಕ್ಕೆ ಬಹುದೊಡ್ಡ ಗೆಲುವು ತಂದುಕೊಟ್ಟಿದ್ದಾರೆಂದು ಹೇಳಿದರು. ರಾಷ್ಟ್ರೀಯ ಪಕ್ಷವಾಗಿ ಕಾಂಗ್ರೆಸ್ ದೇಶಾದ್ಯಂತ ಶೂನ್ಯಕ್ಕೆ ತಲುಪಿದ್ದೆ. ಕಾಂಗ್ರೆಸ್ ಇಷ್ಟರಮಟ್ಟಿಗೆ ನೆಲಕಚ್ಚಲು ಸರ್ವನಾಶಕ ರಾಜಕಾರಣ, ಪ್ರಧಾನಿ ಮೋದಿ ಅವರ ನಿಂದನೆಯಲ್ಲಿ ತೊಡಗಿದ್ದೇ ಮುಳುವಾಗಿದೆ ಎಂದರು.

ಗ್ಯಾರಂಟಿಗೆ ಅಂಕ, ಇಲ್ಲ ಆಡಳಿತ ವಿರೋಧಿ ಅಲೆ ಆತಂಕ

ಕಾಂಗ್ರೆಸ್‌ಗೆ ದಾವಣಗೆರೆ, ಬಾಗಲಕೋಟೆ ಬೈಎಲೆಕ್ಷನ್ ರಿಸಲ್ಟ್‌ನ ಸಂದೇಶವಿದು | ಚುನಾವಣೆ ಮೇಲೆ ಪರಿಣಾಮ ಬೀರದ ಕುರ್ಚಿ ಕಚ್ಚಾಟ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ರಾಜ್ಯ ವಿಧಾನಸಭೆ ಉಪಚುನಾವಣೆಯಲ್ಲಿ ದಾವಣಗೆರೆ ದಕ್ಷಿಣ, ಬಾಗಲಕೋಟೆ ಎರಡೂ ಕ್ಷೇತ್ರಗಳಲ್ಲಿ ಆಡಳಿತಾರೂಢ ಕಾಂಗ್ರೆಸ್ ಗೆದ್ದು ಬೀಗಿದೆ. ಕಾಂಗ್ರೆಸ್ ವಿರುದ್ಧ ಸದ್ಯಕ್ಕೆ ಆಡಳಿತ ವಿರೋಧಿ ಅಲೆ ಇಲ್ಲ ಎಂಬ ಸಂದೇಶವನ್ನು ಈ ಫಲಿತಾಂಶ ರವಾನಿಸಿದ್ದು, ಬಾಗಲಕೋಟೆ ಗ್ರಾಮೀಣ ಭಾಗದಲ್ಲಿ ಹರಿದು ಬಂದ ಮತ ಪ್ರಮಾಣ ನೋಡಿದರೆ ಗ್ಯಾರಂಟಿಗಳಿಗೆ ಮತದಾರರು ಪೂರ್ಣ ಅಂಕ ನೀಡಿದಂತಾಗಿದೆ.

ಮತ್ತೊಂದೆಡೆ, ದಾವಣಗೆರೆಯಲ್ಲಿ ಗೆಲುವಿನ ದಡ ದಾಟಿದ್ದರೂ ಅಂತರ ಕಡಿಮೆ, ಅಲ್ಪಸಂಖ್ಯಾತರ ಮತಗಳು ಚದುರಿರುವುದು ಕಾಂಗ್ರೆಸ್‌ಗೆ ಎಚ್ಚರಿಕೆ ಗಂಟೆಯಾಗಿದೆ. ಆದರೂ ಕೊನೇ ಕ್ಷಣದಲ್ಲಿ ಭಿನ್ನ ಮತಕ್ಕೆ ಮುಲಾಮು ಹಚ್ಚಿ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದ್ದ ವಿಧಾನಪರಿಷತ್‌ನ ಸರ್ಕಾರದ ಮುಖ್ಯಸಚೇತಕ ಸಲೀಂ ಅಹ್ಮದ್, ಶಾಸಕ ರಿಜ್ವಾನ್ ಅರ್ಷದ್ ಪ್ರಯತ್ನಕ್ಕೆ ಪ್ರಶಂಸೆ ವ್ಯಕ್ತವಾಗಿದೆ.

ಭಿನ್ನಮತಕ್ಕೆ ಕುಮ್ಮಕ್ಕು ನೀಡಿದ ಆರೋಪ ಹೊತ್ತಿರುವ ಅಲ್ಪಸಂಖ್ಯಾತ ನಾಯಕರಿಗೆ ಹಿನ್ನಡೆ ಎನ್ನಲಾಗಿದೆ. ಇನ್ನು ಎರಡೂ ಕ್ಷೇತ್ರಗಳಲ್ಲಿ ಪಕ್ಷ ಸೋತರೆ ಅಧಿಕಾರ ಹಸ್ತಾಂತರ ವಿಷಯ ಮುನ್ನೆಲೆಗೆ ಬರಲಿವೆ ಎಂಬ ವಿಶ್ಲೇಷಣೆಗಳು ತಲೆಕೆಳಗಾಗಿದೆ. ಫಲಿತಾಂಶದ ಪ್ರಭಾವ ರಾಜಕೀಯ ಬೆಳವಣಿಗೆಗಳಿಗೆ ಮುನ್ನುಡಿ ಬರೆಯುವ ವಿಚಾರದಲ್ಲಿ ನಗಣ್ಯ ಎಂದೇ ಹೇಳಲಾಗುತ್ತಿದೆ.



ದಾವಣಗೆರೆಯಲ್ಲಿ ಗೆಲುವಿನ ದಡ ಸೇರಿದ ಕೈ: ಉಪ ಚುನಾವಣೆ ವೇಳೆ ದಾವಣಗೆರೆ ದಕ್ಷಿಣದ ಕೈ ಟಿಕೆಟ್‌ಗೆ ಅಲ್ಪಸಂಖ್ಯಾತರು ಹಾಗೂ ಶಾಮನೂರು ಕುಟುಂಬ ಪಟ್ಟು ಹಿಡಿದ ಹಿನ್ನೆಲೆಯಲ್ಲಿ ತೀವ್ರ ತಿಕ್ಕಾಟ ಉಂಟಾಗಿತ್ತು. ಸಮರ್ಥ್ ಶಾಮನೂರಿಗೆ ಟಿಕೆಟ್ ಘೋಷಿಸಿದ್ದರೂ ಅಲ್ಪಸಂಖ್ಯಾತರು ಬಂಡಾಯದ ಬಾವುಟ ಹಾರಿಸಿದ್ದರು. ಕಾಂಗ್ರೆಸ್‌ನ ಅಲ್ಪಸಂಖ್ಯಾತ ನಾಯಕರು ಕ್ಷೇತ್ರದಿಂದ ಅಂತರ ಕಾಯ್ದುಕೊಂಡು ಪರೋಕ್ಷವಾಗಿ ಬಂಡಾಯದ ಸಂದೇಶ ನೀಡಿದ್ದರು. ಪರಿಣಾಮ 2023ರ ಸಾರ್ವತ್ರಿಕ ಚುನಾವಣೆಯಲ್ಲಿ ಶಾಮನೂರು ಅವರು 27,888 ಮತಗಳ ಅಂತರದಿಂದ ಗೆದ್ದಿದ್ದರೂ, ಉಪಚುನಾವಣೆಯಲ್ಲಿ ಸಮರ್ಥ್ ಕೇವಲ 5,708 ಮತಗಳ ಕಡಿಮೆ ಅಂತರದಿಂದ ಗೆದ್ದಿದ್ದಾರೆ.

ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಯಾಗಿದ್ದ ಸಾದಿಕ್ ಪೈಲ್ವಾನ್ ನಾಮಪತ್ರ ಸಲ್ಲಿಸಿದ್ದರೂ ಸ್ಪರ್ಧಾ ಕಣದಿಂದ ಹಿಂದೆ ಸರಿದಿದ್ದರು. ಹೀಗಾಗಿ ಸಾದಿಕ್‌ಗೆ 47 ಮತ ಮಾತ್ರ ಬಂದಿದ್ದು, ಅವರು ಪೂರ್ಣ ಪ್ರಮಾಣದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಪರ ಕೆಲಸ ಮಾಡಿದ್ದರು. ಇಲ್ಲಿ ಅಲ್ಪಸಂಖ್ಯಾತರ ಮತ ಭಾರೀ ಪ್ರಮಾಣದಲ್ಲಿ ವಿಭಜನೆ ಆಗುವುದನ್ನು ತಡೆಯಲು ಸಲೀಂ ಹಾಗೂ ರಿಜ್ವಾನ್ ಅವರ ಆಪರೇಷನ್ ಅತ್ಯಂತ ನಿರ್ಣಾಯಕ ರೀತಿಯಲ್ಲಿ ಕೆಲಸ ಮಾಡಿತು ಎಂದೇ ವಿಶ್ಲೇಷಿಸಲಾಗಿದೆ. ಜತೆಗೆ, ಸಿಎಂರ ನಿರ್ದೇಶನ ಮೇರೆಗೆ ಸಚಿವ ಜಮೀರ್ ಅಹ್ಮದ್ ಅವರು ಒಂದು ದಿನ ಕ್ಷೇತ್ರದಲ್ಲಿ ಪ್ರಚಾರವನ್ನೂ ನಡೆಸಿದ್ದರು.

ಅಲ್ಪಸಂಖ್ಯಾತ ಅಭ್ಯರ್ಥಿಗಳಿಗೆ 22,900 ಮತ: ಉಳಿದಂತೆ ಅಲ್ಪಸಂಖ್ಯಾತರಿಗೆ ಟಿಕೆಟ್ ನೀಡಬೇಕೆಂದು ಕಾಂಗ್ರೆಸ್ ನಾಯಕರೇ ಪಟ್ಟು ಹಿಡಿದಿದ್ದರಿಂದ ಅಲ್ಪಸಂಖ್ಯಾತರಲ್ಲಿ ಕಾಂಗ್ರೆಸ್ ಅಭ್ಯರ್ಥಿ ವಿರುದ್ಧದ ಅಭಿಪ್ರಾಯ ಮೂಡುವಂತಾಯಿತು. ಇದರಿಂದ ಈ ಬಾರಿ ಎಸ್‌ಡಿಪಿಐ ಅಭ್ಯರ್ಥಿ 18,975 ಮತ ಪಡೆದಿದ್ದು, 2023ರ ಚುನಾವಣೆಯಲ್ಲಿ ಎಸ್‌ಡಿಪಿಐ ಕೇವಲ 1311 (ಶೇ.0.9) ಪಡೆದಿತ್ತು. ಉಪಚುನಾವಣೆಯಲ್ಲಿ ಎಸ್‌ಡಿಪಿಐ ಸೇರಿ ಅಲ್ಪಸಂಖ್ಯಾತ ಸಮುದಾಯದಿಂದ 14 ಅಭ್ಯರ್ಥಿಗಳು ಚುನಾವಣೆಗೆ ಸ್ಪರ್ಧಿಸಿದ್ದರು. 22,900 ಮತಗಳು ಅವರ ಪಾಲಾಗಿವೆ.

ಬಾಗಲಕೋಟೆಯಲ್ಲಿ ಭರ್ಜರಿ ಗೆಲುವು: ಇದಕ್ಕೆ ತದ್ವಿರುದ್ಧವಾಗಿ ಬಾಗಲಕೋಟೆಯಲ್ಲಿ ಕಾಂಗ್ರೆಸ್ ಭರ್ಜರಿ ಗೆಲುವು ಸಾಧಿಸಿದೆ. 2023ರಲ್ಲಿ ಎಚ್.ವೈ.ಮೇಟಿ ಅವರು 5,878 ಮತಗಳ ಕಡಿಮೆ ಅಂತರದಿಂದ ಮಾತ್ರ ಗೆದ್ದಿದ್ದು, ಉಪಚುನಾವಣೆಯಲ್ಲಿ ಉಮೇಶ್ ಮೇಟಿ ಅವರು 22,332 ಗಳ ಅಂತರದಿಂದ ಗೆದ್ದಿದ್ದಾರೆ. ವಿಶೇಷವಾಗಿ ಗ್ರಾಮೀಣ ಭಾಗದಲ್ಲಿ ಕಾಂಗ್ರೆಸ್ ಅಭ್ಯರ್ಥಿಗೆ ಮುನ್ನಡೆ ಸಿಕ್ಕಿದ್ದು, ಇದರಿಂದ ಸಿದ್ದರಾಮಯ್ಯ ಅವರ ಸರ್ಕಾರದ ಗ್ಯಾರಂಟಿಗಳ ಬಗ್ಗೆ ಜನ ಉತ್ತಮ ಅಭಿಪ್ರಾಯ ಹೊಂದಿರುವುದಾಗಿ ವಿಶ್ಲೇಷಿಸಲಾಗಿದೆ. ಜತೆಗೆ ಬಾಗಲಕೋಟೆ ಗೆಲುವು ಸಿದ್ದರಾಮಯ್ಯ ತಂಡದ ಪ್ರಯತ್ನದ ಫಲ ಎಂದೂ ವ್ಯಾಖ್ಯಾನಿಸಲಾಗುತ್ತಿದೆ.

ಈ ಉಪ ಚುನಾವಣೆ ಫಲಿತಾಂಶದ ಮೇಲೆ ಪಕ್ಷದ ಆಂತರಿಕ ವಿಪ್ಲವಗಳು ಯಾವುದೇ ಪರಿಣಾಮ ಬೀರುವುದಿಲ್ಲ ಎಂದೇ ವ್ಯಾಖ್ಯಾನಿಸಲಾಗುತ್ತಿದೆ. ನಾಯಕತ್ವ ಬದಲಾವಣೆ ವಿಚಾರ ಹೈಕಮಾಂಡ್ ಮನದಾಳ ಏನಿದೆಯೋ ಎಂಬುದರ ಮೇಲೆ ಅವಲಂಬಿತವಾಗಿದೆಯೇ ಹೊರತು ಉಪ ಚುನಾವಣೆ ಫಲಿತಾಂಶಕ್ಕೂ ಈ ವಿಚಾರಕ್ಕೂ ಯಾವುದೇ ಸಂಬಂಧವಿಲ್ಲದಂತಾಗಿದೆ.

ಸುದ್ದಿ ಸಿಂಚನ

ಎನ್‌ಡಿಎ ಅಭೂತಪೂರ್ವ ಗೆಲವು: ಎಚ್‌ಡಿಕೆ ಸಂತಸ



ಬೆಂಗಳೂರು: ಎನ್‌ಡಿಎ ಮೈತ್ರಿಕೂಟದ ಈ ಅಭೂತಪೂರ್ವ ಗೆಲುವು ಪ್ರಧಾನಿ ನರೇಂದ್ರ ಮೋದಿ ಅವರ ದೂರದೃಷ್ಟಿಯ ನಾಯಕತ್ವ ಮತ್ತು ವಿಕಸಿತ ಭಾರತ ಪರಿವರ್ತನಾ ಪ್ರೇರಿತ ಕಾರ್ಯಸೂಚಿಯಲ್ಲಿ ಜನರು ಹೊಂದಿರುವ ನಿರಂತರ ನಂಬಿಕೆಯ ದೃಢೀಕೃತ ಫಲಿತಾಂಶವಾಗಿದೆ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಹೇಳಿದ್ದಾರೆ. ಈ ನಿರ್ಣಾಯಕ ಜನಾದೇಶವು ಜನರ ಆಕಾಂಕ್ಷೆ ಮತ್ತು ಸಬ್ ಕಾ ಸಾಥ್ ಅ, ಸಬ್‌ಕಾ ವಿಕಾಸ್, ಸಬ್‌ಕಾ ವಿಶ್ವಾಸ್‌ನ ಮಾರ್ಗದರ್ಶಿ ತತ್ವಗಳ ನಡುವಿನ ಆಳವಾದ ಹೊಂದಾಣಿಕೆಯನ್ನು ಪ್ರತಿಬಿಂಬಿಸುತ್ತದೆ. ಇದು ಎನ್‌ಡಿಎ ಮೈತ್ರಿಕೂಟದ ವಿಶ್ವಾಸಾರ್ಹತೆ, ಕಾರ್ಯಕ್ಷಮತೆ ಮತ್ತು ಅಂತರ್ಗತ ಆಡಳಿತದ ವೇದಿಕೆಯಾಗಿ ಬಲಪಡಿಸುತ್ತದೆ ಎಂದಿದ್ದಾರೆ. ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಕಾರ್ಯತಂತ್ರದ ನಾಯಕತ್ವ ಮತ್ತು ರಾಷ್ಟ್ರೀಯ ಏಕತೆಗೆ ಅಚಲ ಬದ್ಧತೆಯು ಈ ಫಲಿತಾಂಶವನ್ನು ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿದೆ. ದೇಶಾದ್ಯಂತ ಎನ್‌ಡಿಎ ಮೈತ್ರಿಕೂಟದ ವ್ಯಾಪ್ತಿ ಮತ್ತು ಸಾಂಸ್ಥಿಕ ಆಳವನ್ನು ಮತ್ತಷ್ಟು ಬಲಪಡಿಸುತ್ತದೆ. ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನಬಿನ್ ಅವರು ಸಂಘಟನೆಯನ್ನು ಚೈತನ್ಯಗೊಳಿಸುವ ಮತ್ತು ಕಾರ್ಯಕರ್ತರೊಂದಿಗೆ ಸಂಪರ್ಕ ಸಾಧಿಸುವ ಪರಿಣಾಮಕಾರಿ ಪ್ರಯತ್ನಗಳು ಸಹ ಈ ಮಹತ್ವದ ಜನಾದೇಶಕ್ಕೆ ಕಾರಣವಾಗಿವೆ ಎಂದು ಅವರು ಸಾಮಾಜಿಕ ಜಾಲತಾಣದ ಮೂಲಕ ತಿಳಿಸಿದ್ದಾರೆ.

ಕಾಂಗ್ರೆಸ್ ಸರ್ಕಾರದ ಸಾಧನೆಗೆ ಮನ್ನಣೆ ನೀಡಿದ ಮತದಾರರ: ಶಿವಾನಂದ

ವಿಜಯಪುರ: ಬಾಗಲಕೋಟೆ ಮತ್ತು ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರಗಳಿಗೆ ನಡೆದ ಉಪಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಭರ್ಜರಿ ವಿಜಯ ಸಾಧಿಸಿದ್ದಾರೆ. ಈ ಗೆಲುವು ರಾಜ್ಯ ಸರ್ಕಾರದ ಸಾಧನೆಗೆ ಮತದಾರರು ನೀಡಿರುವ ಮನ್ನಣೆ ಎಂದು ಸಚಿವ ಶಿವಾನಂದ ಪಾಟೀಲ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಬಿಜೆಪಿ ಮುಖಂಡರು ಪ್ರಚೋದನಕಾರಿ ಭಾಷಣಗಳ ಮೂಲಕ ರಾಜ್ಯ ಸರ್ಕಾರದ ವಿರುದ್ಧ ಎಷ್ಟೇ ಅಪಪ್ರಚಾರ ನಡೆಸಿದರೂ ಮತದಾರರು ಮಾತ್ರ ಅಭಿವೃದ್ಧಿ ಮತ್ತು ಸಮಾಜದಲ್ಲಿ ಶಾಂತಿ ಬಯಸಿ ಕಾಂಗ್ರೆಸ್ ಅಭ್ಯರ್ಥಿಗಳಾಗಿದ್ದ ಉಮೇಶ ಮೇಟಿ ಮತ್ತು ಸಮರ್ಥ ಶಾಮನೂರು ಅವರನ್ನು ಆಯ್ಕೆ ಮಾಡಿದ್ದಾರೆ. ಕಾಂಗ್ರೆಸ್ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಮೂಲಕ ಸಿಎಂ ಸಿದ್ದರಾಮಯ್ಯ ಮತ್ತು ಡಿಸಿಎಂ ಡಿ.ಕೆ.ಶಿವಕುಮಾರ್ ಅವರ ಕೈ ಬಲಪಡಿಸಿದ್ದಾರೆ ಎಂದಿದ್ದಾರೆ.

ಪಂಚರಾಜ್ಯ ಎಲೆಕ್ಷನ್‌ನಲ್ಲಿ ಕೈಗೆ ತಕ್ಕ ಉತ್ತರ: ಶೆಟ್ಟರ್

ಹುಬ್ಬಳ್ಳಿ: ಪ್ರಧಾನಿ ನರೇಂದ್ರ ಮೋದಿ ಬಗೆಗಿನ ಟೀಕೆ, ಮಹಿಳಾ ಮೀಸಲಾತಿ ವಿರೋಧಿಸಿದ್ದಕ್ಕಾಗಿ ಪಂಚರಾಜ್ಯ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಜನತೆ ತಕ್ಕ ಉತ್ತರ ನೀಡಿದ್ದಾರೆ. ಮುಂದಿನ ದಿನಗಳಲ್ಲಿ ದೇಶದಲ್ಲಿಯೇ ಕಾಂಗ್ರೆಸ್ ಹೆಸರಿಲ್ಲದಂತೆ ಆಗಲಿದೆ ಎಂದು ಸಂಸದ ಜಗದೀಶ್ ಶೆಟ್ಟರ್ ಭವಿಷ್ಯ ನುಡಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪಂಚರಾಜ್ಯಗಳ ವಿಧಾನಸಭಾ ಚುನಾವಣೆಯಲ್ಲಿ ಅಸ್ಸಾಂ, ಪಶ್ಚಿಮ ಬಂಗಾಳ ಹಾಗೂ ಪುದುಚೇರಿಗಳಲ್ಲಿ ಬಿಜೆಪಿಗೆ ಮತದಾರರು ಭವ್ಯ ಬೆಂಬಲ ನೀಡಿದ್ದಾರೆ. ಪಕ್ಷದ ಆಡಳಿತ ಮತ್ತು ಅಭಿವೃದ್ಧಿ ಕಾರ್ಯವೈಖರಿಯನ್ನು ಮೆಚ್ಚಿ ಜನತೆ ನೀಡಿರುವ ಈ ಬೆಂಬಲ ಅತ್ಯಂತ ಸಂತಸ ತಂದಿದೆ ಎಂದರು.

ರಾಗಾ ಮಾತು ಕೇಳದೆ ಎಡವಿದ್ರಾ ಖರ್ಗೆ, ಚಿದು?

ವಿಜಯ್ ಜೊತೆ ಹೋಗೋಣ ಎಂದಿದ್ದ ರಾಹುಲ್ | ಆದರೆ ಡಿಎಂಕೆ ಜೊತೆ ಮೈತ್ರಿಗೆ ಖರ್ಗೆ, ಚಿದು ಇಂಗಿತ

ಇದರಿಂದ ತಮಿಳುನಾಡಿನಲ್ಲಿ ಕಾಂಗ್ರೆಸ್‌ಗೆ ತಪ್ಪಿದ ಹೆಚ್ಚು ಸೀಟು ಗೆಲ್ಲುವ ಅವಕಾಶ | ಪಕ್ಷದೊಳಗೆ ಚರ್ಚೆ ಶುರು

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ತಮಿಳುನಾಡು ರಾಜ್ಯದಲ್ಲಿ ಕಾಂಗ್ರೆಸ್‌ನ ಮಿತ್ರಪಕ್ಷ ಹಾಗೂ ಆಡಳಿತರೂಢ ಡಿಎಂಕೆ ಪಕ್ಷಕ್ಕೆ ಹೀನಾಯ ಸೋಲುಂಟಾಗಿದೆ. ಇದು ಚುನಾವಣಾ ಪೂರ್ವ ಮೈತ್ರಿಕೂಟ ರಚನೆ ನಿರ್ಧಾರದಲ್ಲಿ ಆದ ತಪ್ಪು ಕಾರಣವೇ ಎನ್ನುವ ಚರ್ಚೆ ಪಕ್ಷದಲ್ಲಿ ಶುರುವಾಗಿದೆ.

ಪಂಚರಾಜ್ಯಗಳ ಚುನಾವಣೆ ಪೂರ್ವದಲ್ಲಿ ತಮಿಳುನಾಡಿನಲ್ಲಿ ಯಾವ ಪಕ್ಷದ ಜತೆಗೆ ಚುನಾವಣೆಗೆ ಹೋಗಬೇಕು ಎಂಬ ಬಗ್ಗೆ ಕಾಂಗ್ರೆಸ್‌ನ ಉನ್ನತ ಮಟ್ಟದ ಸಭೆ ನಡೆದಿತ್ತು. ಈ ವೇಳೆ ಕಾಂಗ್ರೆಸ್ ನಾಯಕರಾದ ರಾಹುಲ್‌ಗಾಂಧಿ ಅವರು ನಟ ವಿಜಯ್ ನೇತೃತ್ವದ ಟಿವಿಕೆ ಪಕ್ಷದ ಜೊತೆ ಚುನಾವಣೆಗೆ ಹೋಗೋಣ. ಆ ಪಕ್ಷದವರು ಕಾಂಗ್ರೆಸ್ ಜತೆ ಚುನಾವಣೆ ಎದುರಿಸಲು ಉತ್ಸುಕರಾಗಿದ್ದಾರೆ. ಜತೆಗೆ



60-65 ಕ್ಷೇತ್ರಗಳನ್ನು ಕಾಂಗ್ರೆಸ್ ಬಿಟ್ಟುಕೊಡಲಿದ್ದಾರೆ. ತಮಿಳುನಾಡಿನಲ್ಲಿ ಆಡಳಿತ ವಿರೋಧಿ ಅಲೆ ಇದ್ದು, ಯುವ ಮತದಾರರು ವಿಜಯ್ ಜತೆ ನಿಲ್ಲುವ ಮನಸ್ಸು ಮಾಡಿದ್ದಾರೆ. ಅಲ್ಲಿ ಬದಲಾವಣೆಯ ಸಾಧ್ಯತೆ ಕಾಣುತ್ತಿದೆ ಎಂದು ರಾಹುಲ್ ತಮ್ಮ ಅಭಿಪ್ರಾಯ ಮಂಡಿಸಿದ್ದರು ಎಂದು ಮೂಲಗಳು ತಿಳಿಸಿವೆ.

ಡಿಎಂಕೆ ಕೈಬಿಡಲು ಆಕ್ಷೇಪ: ಆದರೆ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಕೇಂದ್ರದ ಮಾಜಿ ಸಚಿವ ಪಿ.ಚಿದಂಬರಂ, ತಮಿಳುನಾಡು ಕಾಂಗ್ರೆಸ್ ಅಧ್ಯಕ್ಷ ಕೆ.ಸೆಲ್ವಪೆರುತಂಗೈ ಅವರು ಡಿಎಂಕೆ ಬಿಟ್ಟು ಟಿವಿಕೆ ಜೊತೆ ಹೋಗುವುದಕ್ಕೆ ಆಕ್ಷೇಪ ವ್ಯಕ್ತಪಡಿಸಿದ್ದರು. ಡಿಎಂಕೆ ಕಾಂಗ್ರೆಸ್ ಜತೆ ಹಲವು ವರ್ಷಗಳಿಂದ ಮೈತ್ರಿಯಲ್ಲಿದೆ. ಈ ಮೈತ್ರಿ ಮುರಿಯುವುದು ಬೇಡ. ಹೊಸ ಪಕ್ಷದ ಜತೆಗೆ ಪ್ರಯೋಗಕ್ಕೆ ಕೈ ಹಾಕಿ ವಿಫಲವಾದರೆ ಡಿಎಂಕೆ ವಿಶ್ವಾಸ ಕೈಗೊಳ್ಳಬೇಕಾಗುತ್ತದೆ ಎಂದು ಅಭಿಪ್ರಾಯಪಟ್ಟಿದ್ದರು ಎನ್ನಲಾಗಿದೆ.

ಇದೀಗ ರಾಹುಲ್‌ಗಾಂಧಿ ಊಹೆ ನಿಜವಾಗಿದ್ದು, ಚುನಾವಣಾ ಪೂರ್ವ ಮೈತ್ರಿ ನಿರ್ಧಾರದಿಂದ ಪಕ್ಷಕ್ಕೆ ಹಿನ್ನಡೆಯಾಗಿದೆ. ಕಾಂಗ್ರೆಸ್ ಪಕ್ಷ ಟಿವಿಕೆ ಜತೆ ಮೈತ್ರಿ ಮಾಡಿಕೊಂಡು 60-65 ಸ್ಥಾನ ಪಡೆದಿದ್ದರೆ ಕಾಂಗ್ರೆಸ್ ಸಾಂಪ್ರದಾಯಿಕ ಮತ ಹಾಗೂ ವಿಜಯ್ ಪರ ಸೃಷ್ಟಿಯಾಗಿದ್ದ ಅಲೆಯಿಂದ ಕನಿಷ್ಠ 30-40 ಸ್ಥಾನ ಗೆದ್ದು, ಡಿಸಿಎಂ ಸ್ಥಾನದ ಜತೆಗೆ ಅಧಿಕೃತವಾಗಿ ಸರ್ಕಾರ ರಚನೆಯ ಅವಕಾಶವಿತ್ತು.

ಈಗಾಗಲೇ ಕೇರಳದಲ್ಲಿ ಭಾರಿ ಬಹುಮತದೊಂದಿಗೆ ಕಾಂಗ್ರೆಸ್ ನೇತೃತ್ವದ ಯುಡಿಎಫ್ ಅಧಿಕಾರಕ್ಕೆ ಬಂದಿದೆ. ಹೀಗಾಗಿ ತಮಿಳುನಾಡು ಸೇರಿ ಕಾಂಗ್ರೆಸ್ ಮೈತ್ರಿಕೂಟವೂ ಎರಡು ರಾಜ್ಯಗಳಲ್ಲಿ ಗೆದ್ದಂತಾಗಿ ಬಿಜೆಪಿಗೆ ಬಹುತೇಕ ಸಮ ಪೈಪೋಟಿ ನೀಡಿದಂತಾಗುತ್ತಿತ್ತು. ಹೀಗಾಗಿ ಖರ್ಗೆ, ಚಿದಂಬರಂ ಮತ್ತಿತರ ನಾಯಕರು, ತಮಿಳುನಾಡು ಕಾಂಗ್ರೆಸ್ ಅಧ್ಯಕ್ಷರ ನಿರ್ಧಾರದ ಬಗ್ಗೆ ಪಕ್ಷದಲ್ಲಿ ಆಂತರಿಕವಾಗಿ ಚರ್ಚೆ ಆರಂಭವಾಗಿದ್ದು, ಫಲಿತಾಂಶದ ಪರಿಣಾಮಗಳ ಬಗ್ಗೆ ಕೆಲವು ನಾಯಕರು ಲೆಕ್ಕಾಚಾರ ಹಾಕುತ್ತಿದ್ದಾರೆ.

ದಾವಣಗೆರೆ ದಕ್ಷಿಣದಲ್ಲಿ ನಾವು ಸೋತಿದ್ದಕ್ಕೆ ನೋವು: ಬಿಎಸ್‌ವೈ

ಗೆಲ್ಲುವ ವಿಶ್ವಾಸವಿತ್ತು, ಕೊನೆಯಲ್ಲಿ ವ್ಯತ್ಯಾಸವಾಗಿದೆ

ಮುಂದೆ ಕೊರತೆ ಸರಿಪಡಿಸಿಕೊಳ್ಳುತ್ತೇವೆ: ಮಾಜಿ ಸಿಎಂ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಸೋಲಿನಿಂದ ನೋವಾಗಿದೆ ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಹೇಳಿದ್ದಾರೆ.



ಸೋಮವಾರ ತಮ್ಮ ನಿವಾಸದ ಬಳಿ ಸುದ್ದಿಗಾರರೊಂದಿಗೆ ಮಾತನಾಡಿ, ದಾವಣಗೆರೆಯಲ್ಲಿ ಗೆಲ್ಲುವ ವಿಶ್ವಾಸವಿತ್ತು. ಕೊನೆಯಲ್ಲಿ ಸ್ವಲ್ಪ ವ್ಯತ್ಯಾಸವಾಗಿದೆ. ಈ ಸೋಲಿನಿಂದ ನೋವಾಗಿದೆ. ಮುಂದಿನ ದಿನಗಳಲ್ಲಿ ಕೊರತೆಗಳನ್ನು ಸರಿಪಡಿಸಿಕೊಂಡು ಗೆಲ್ಲಲು ಪ್ರಯತ್ನಿಸುತ್ತೇವೆ ಎಂದರು.

ಪ್ರಶ್ನೆಯೊಂದಕ್ಕೆ ಉತ್ತರಿಸಿದ ಅವರು, ಉಚಿತ ಘೋಷಣೆಗಳಿಂದ ಜನರನ್ನು ಹೆಚ್ಚು ದಿನ ಮರುಳು ಮಾಡಲು ಆಗಲ್ಲ ಎಂಬುದು ಈ ಪಂಚ ರಾಜ್ಯಗಳ ಫಲಿತಾಂಶ ತೋರಿಸಿದೆ. ಪಂಚ ರಾಜ್ಯಗಳ ಫಲಿತಾಂಶವು ಜನ ಪ್ರಧಾನಿ ಮೋದಿ ಅವರ ಮೇಲಿರಿಸಿರುವ ನಂಬಿಕೆಯನ್ನು ಮತ್ತಷ್ಟು ದೃಢಪಡಿಸಿದೆ. ಪಶ್ಚಿಮ ಬಂಗಾಳದ ಟಿಎಂಸಿ ಸರ್ಕಾರ ಧೂಳಿಪಟವಾಗಿದೆ. ಪ್ರಧಾನಿ ಮೋದಿ ಮತ್ತು ಅಮಿತ್ ಶಾ ಅವರ ಪ್ರಭಾವದಿಂದ ಗೆದ್ದಿದ್ದೇವೆ. ಇದು ದೇಶಕ್ಕೇ ಉದಾಹರಣೆಯಾಗಿದೆ. ಒಂದು ಸೀಟು ಗೆಲ್ಲಲಾಗದ ಕಾಂಗ್ರೆಸ್‌ಗೆ ಮಾತನಾಡುವ ನೈತಿಕ ಹಕ್ಕಿಲ್ಲ. ಕವಡೆ ಕಾಸಿನ ಕಿಮ್ಮತ್ತಿಲ್ಲ ಎಂದು ಟೀಕಿಸಿದರು.

ಉಪಚುನಾವಣೆಯಲ್ಲಿ ಕೈಗೂಡದ ಬಿಜೆಪಿ ನಿರೀಕ್ಷೆ

ಸುಸೂತ್ರವಾಗಿ ಅಭ್ಯರ್ಥಿ ಆಯ್ಕೆ, ಅಬ್ಬರದ ಪ್ರಚಾರ ನಡೆಸಿದರೂ ದಾವಣಗೆರೆ, ಬಾಗಲಕೋಟೆಯಲ್ಲಿ ಸೋಲು

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಸ್ಥಳೀಯ ಮುಖಂಡರ ನಡುವಿನ ಬಗೆಹರಿಯಲಾಗದ ಭಿನ್ನಾಭಿಪ್ರಾಯಗಳನ್ನು ಬಗೆಹರಿಸಿ ಭರ್ಜರಿ ಪ್ರಚಾರ ನಡೆಸಿದರೂ ಪ್ರಮುಖ ಪ್ರತಿಪಕ್ಷ ಬಿಜೆಪಿಗೆ 2 ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆಯಲ್ಲಿ ಗೆಲುವು ಸಾಧಿಸಲಾಗಲಿಲ್ಲ.

ಬಾಗಲಕೋಟೆ ಕ್ಷೇತ್ರದ ಬಗ್ಗೆ ಹೆಚ್ಚಿನ ನಿರೀಕ್ಷೆ ಇರದಿದ್ದರೂ ಆಡಳಿತಾರೂಢ ಕಾಂಗ್ರೆಸ್ ಪಕ್ಷದಲ್ಲಿನ ಬಿಕ್ಕಟ್ಟಿನ ಪರಿಣಾಮ ದಾವಣಗೆರೆ ದಕ್ಷಿಣ ಕ್ಷೇತ್ರದ ಬಗ್ಗೆ ರಾಜ್ಯ ಬಿಜೆಪಿ ನಾಯಕರಲ್ಲಿ ತೀವ್ರ ನಿರೀಕ್ಷೆಯಿತ್ತು. ಕಡಿಮೆ ಮತಗಳ ಅಂತರದಲ್ಲಾದರೂ ಗೆಲ್ಲುತ್ತೇವೆ ಎಂಬ ವಿಶ್ವಾಸ ವ್ಯಕ್ತಪಡಿಸುತ್ತಿದ್ದರು. ಆದರೆ, ಅಂತಿಮವಾಗಿ ಆ ನಿರೀಕ್ಷೆಯೂ ಹುಸಿಯಾಗಿದೆ.

ಒಂದರಲ್ಲೂ ಗೆಲ್ಲಲಿಲ್ಲ: ಹಾಗೆ ನೋಡಿದರೆ ಕಳೆದ 3 ವರ್ಷಗಳಲ್ಲಿ 6 ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆ ನಡೆದಿದೆ. ಸುರಪುರ, ಶಿಗ್ಗಾವಿ, ಚನ್ನಪಟ್ಟಣ, ಸಂಡೂರು, ಇದೀಗ ಬಾಗಲಕೋಟೆ ಮತ್ತು ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆ ಪೈಕಿ ಬಿಜೆಪಿಗೆ ಒಂದರಲ್ಲೂ ಗೆಲ್ಲಲು ಸಾಧ್ಯವಾಗಿಲ್ಲ. ಈ ಪೈಕಿ ಚನ್ನಪಟ್ಟಣ ಕ್ಷೇತ್ರದಲ್ಲಿ ಬಿಜೆಪಿ ಸ್ಪರ್ಧಿಸಿರಲಿಲ್ಲ. ಮಿತ್ರ ಪಕ್ಷ ಜೆಡಿಎಸ್ ತನ್ನ ಅಭ್ಯರ್ಥಿಯನ್ನು ಕಣಕ್ಕಿಳಿಸಿತ್ತು. ಇವೆಲ್ಲವೂ ಬಿ.ವೈ.ವಿಜಯೇಂದ್ರ ಅವರು ಪಕ್ಷದ ರಾಜ್ಯಾಧ್ಯಕ್ಷರಾದ ಬಳಿಕ ನಡೆದ ಉಪಚುನಾವಣೆಗಳು.



ಉಪಚುನಾವಣೆಗಳನ್ನು ಗಂಭೀರವಾಗಿ ಪರಿಗಣಿಸಿ ತೀವ್ರ ಪ್ರಚಾರ ನಡೆಸಿದರೂ ಕಾಂಗ್ರೆಸ್ ಪಕ್ಷದ ಅಲೆ ಎದುರು ಗೆಲುವು ಪ್ರಯಾಸದಾಯಕವಾಗಿಯೇ ಪರಿಣಮಿಸಿದೆ.

ಪ್ರಸಕ್ತ ಉಪಚುನಾವಣೆ ಘೋಷಣೆಯಾಗುವ ಮೊದಲು ಮತ್ತು ಘೋಷಣೆಯಾದ ಬೆನ್ನಲ್ಲೇ ಬಾಗಲಕೋಟೆ ಮತ್ತು ದಾವಣಗೆರೆ ದಕ್ಷಿಣದಲ್ಲಿನ ಸ್ಥಳೀಯ ಮುಖಂಡರ ನಡುವಿನ ಭಿನ್ನಾಭಿಪ್ರಾಯ ಬಗೆಹರಿಸಲು ವಿಜಯೇಂದ್ರ ಮತ್ತಿತರ ನಾಯಕರು ಪ್ರಾಮಾಣಿಕ ಪ್ರಯತ್ನ ನಡೆಸಿ ಸಫಲರಾದರು. ಅದರ ಪರಿಣಾಮ ಅಭ್ಯರ್ಥಿ ಆಯ್ಕೆಯೂ ಗೊಂದಲಕ್ಕೀಡಾಗದೆ ಸುಸೂತ್ರವಾಗಿ ನಡೆಯಿತು.

ಒಡಕಿಲ್ಲದೆ ಶ್ರಮ: ಚುನಾವಣೆಯಲ್ಲಿ ಎಲ್ಲ ಸ್ಥಳೀಯ ಮುಖಂಡರೂ ತಮ್ಮ ಶ್ರಮ ಹಾಕಿ ಪ್ರಚಾರ ಮಾಡಿದರು. ಎಲ್ಲಿಯೂ ಒಡಕು ಹೊರಹಾಕಲಿಲ್ಲ. ರಾಜ್ಯ ನಾಯಕತ್ವವೂ 2 ಕ್ಷೇತ್ರಗಳ ಪ್ರಚಾರವನ್ನು ವ್ಯವಸ್ಥಿತವಾಗಿ ರೂಪಿಸಿತು. ತಂಡಗಳನ್ನು ಮಾಡಿ ಸತತ ಪ್ರಚಾರವನ್ನೂ ಕೈಗೊಂಡರು. ರಾಜ ಸರ್ಕಾರದ ವೈಫಲ್ಯಗಳನ್ನು ಮತದಾರರಿಗೆ ತಲುಪಿಸಲು ಪ್ರಯತ್ನಿಸಿದರು. ಇದರ ಪರಿಣಾಮವೇ ಎರಡೂ ಕಡೆ ಅಲ್ಲದಿದ್ದರೂ ದಾವಣಗೆರೆ ದಕ್ಷಿಣದಲ್ಲಾದರೂ ಗೆಲ್ಲುವ ನಿರೀಕ್ಷೆ ಇತ್ತು. ಆದರೆ ಅದು ಹುಸಿಯಾಯಿತು.

ಬಂಗಾಳದಂತೆ ರಾಜ್ಯದಲ್ಲೂ ಕಾಂಗ್ರೆಸ್ ಸೋತು ಮನೆಗೆ ಹೋಗುತ್ತೆ: ಅಶೋಕ್

ಗ್ಯಾರಂಟಿ ಹೆಸರಿನಲ್ಲಿ ಜನರಿಗೆ ತೆರಿಗೆ ಬರೆ: ವಿಪಕ್ಷ ನಾಯಕ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಪಶ್ಚಿಮ ಬಂಗಾಳದಂತೆ ಕರ್ನಾಟಕದಲ್ಲೂ ಮುಂದಿನ ಚುನಾವಣೆಯಲ್ಲಿ ಕಾಂಗ್ರೆಸ್ ಸೋತು ಮನೆಗೆ ಹೋಗಲಿದೆ ಎಂದು ಪ್ರತಿಪಕ್ಷ ನಾಯಕ ಆರ್. ಅಶೋಕ್ ಹೇಳಿದ್ದಾರೆ.



ಚುನಾವಣಾ ಫಲಿತಾಂಶದ ಕುರಿತು ಪ್ರತಿಕ್ರಿಯಿಸಿದ ಅವರು, ಅಸ್ಸಾಂ, ಪುದುಚೇರಿ, ಪಶ್ಚಿಮ ಬಂಗಾಳ ರಾಜ್ಯಗಳ ಚುನಾವಣಾ ಫಲಿತಾಂಶದಿಂದ ಕರ್ನಾಟಕದ ಕಾಂಗ್ರೆಸ್ ಪಾಠ ಕಲಿಯಬೇಕಿದೆ. ಗ್ಯಾರಂಟಿಗಳ ಹೆಸರಲ್ಲಿ ಜನರ ಮೇಲೆ ತೆರಿಗೆಗಳ ಹೊರೆ ಹೇರಿ, ಸಾಲದ ಸುಳಿಯಲ್ಲಿ ಸಿಲುಕಿಸಿರುವ ಕಾಂಗ್ರೆಸ್ ಮುಂದಿನ ಚುನಾವಣೆಯಲ್ಲಿ ನೆಲಕಚ್ಚಲಿದೆ ಎಂಬುದು ಸ್ಪಷ್ಟ ಎಂದರು.

ರೈತರ ಆತ್ಮಹತ್ಯೆ, ಸರ್ಕಾರಿ ಆಸ್ಪತ್ರೆಗಳಲ್ಲಿ ಬಾಣಂತಿಯರ ಸಾವು, ಬೆಂಗಳೂರಿನಲ್ಲಿ ಮಳೆಯಿಂದ ಜೀವಹಾನಿ, ಸಾರಿಗೆ ಸಿಬ್ಬಂದಿಗೆ ವೇತನ ಬಾಕಿ, ಅಬಕಾರಿ ಇಲಾಖೆಯಲ್ಲಿ ಭ್ರಷ್ಟಾಚಾರ ಹೀಗೆ ಅನೇಕ ತಪ್ಪುಗಳ ಮೂಲಕ ಕಾಂಗ್ರೆಸ್ ಜನರ ಕೆಂಗಣ್ಣಿಗೆ ಗುರಿಯಾಗಿದೆ. ಸಿಎಂ ಕುರ್ಚಿ ಕಚ್ಚಾಟದಲ್ಲೇ ನಿರತರಾಗಿರುವ ಕಾಂಗ್ರೆಸಗೆ ಮುಂದಿನ ಚುನಾವಣೆಯಲ್ಲಿ ಜನರು ಉತ್ತರ ನೀಡಲಿದ್ದಾರೆ ಎಂದರು.

ಖುಷಿ ಮತದಾರರಿಗೆ ಧನ್ಯವಾದ | ಮುಂದೆಯೂ ಗೆಲ್ತೀವಿ: ಸಿದ್ದು

ಉಪಚುನಾವಣೆ ಗೆಲುವು ಸರ್ಕಾರದ ಸಾಧನೆ, ಕಾರ್ಯಕರ್ತರ ಜಯ: ಸಿಎಂ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಬಾಗಲಕೋಟೆ, ದಾವಣಗೆರೆ ಉಪಚುನಾವಣೆಯಲ್ಲಿ ಕಾಂಗ್ರೆಸ್ ಗೆಲ್ಲಿಸಿದ ಮತದಾರರಿಗೆ ಸಿಎಂ ಸಿದ್ದರಾಮಯ್ಯ ಧನ್ಯವಾದ ತಿಳಿಸಿದ್ದಾರೆ.



ಗೆಲುವಿನ ಬಗ್ಗೆ ಪ್ರತಿಕ್ರಿಯೆ ನೀಡಿರುವ ಅವರು, ಎರಡೂ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳಿಗೆ ಮತದಾನ ಮಾಡಿ ಗೆಲ್ಲಿಸಿದ ಸಮಸ್ತ ಮತದಾರ ಬಂಧುಗಳಿಗೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ಇದು ನಮ್ಮ ಸರ್ಕಾರದ ಸಾಧನೆಗಳಿಗೆ ಮತ್ತು ಕಾಂಗ್ರೆಸ್ ಪಕ್ಷದ ಸಿದ್ಧಾಂತಕ್ಕೆ ಸಿಕ್ಕ ಜಯವಾಗಿದೆ ಎಂದು ಬಣ್ಣಿಸಿದ್ದಾರೆ.

ವಿಪಕ್ಷಗಳ ಅಪಪ್ರಚಾರ , ಹಣದ ಪ್ರಭಾವದ ಹೊರತಾಗಿಯೂ 2 ಕ್ಷೇತ್ರಗಳ ಮತದಾರರು ಕಾಂಗ್ರೆಸ್ ಪಕ್ಷ ಮತ್ತು ನಮ್ಮ ಸರ್ಕಾರದ ಮೇಲೆ ನಂಬಿಕೆ ಇಟ್ಟು ಮತಚಲಾಯಿಸಿದ್ದಾರೆ. ಇಡೀ ರಾಜ್ಯದ ಜನತೆ ನಮ್ಮ ಮೇಲೆ ಇಟ್ಟಿರುವ ನಂಬಿಕೆ ಉಳಿಸಿಕೊಳ್ಳುತ್ತೇವೆ. ಮುಂದಿನ ವಿಧಾನಸಭಾ ಚುನಾವಣೆಯಲ್ಲೂ ರಾಜ್ಯದ ಮತದಾರರು ಇದೇ ರೀತಿ ನಮ್ಮನ್ನು ಹರಸುತ್ತಾರೆ ಎಂಬ ನಂಬಿಕೆ ನಮಗೆ ಇದೆ ಎಂದು ಹೇಳಿದ್ದಾರೆ.

ಕೇರಳದಲ್ಲಿ ನಿರೀಕ್ಷಿತ, ತ.ನಾಡಿನದ್ದು ಅನಿರೀಕ್ಷಿತ ಫಲಿತಾಂಶ: ಸಿದ್ದರಾಮಯ್ಯ

ಕೇರಳದಲ್ಲಿ ಕಾಂಗ್ರೆಸ್ ನೇತೃತ್ವದ ಯುಡಿಎಫ್‌ಗೆ ನಿರೀಕ್ಷಿತ ಗೆಲುವು ದೊರಕಿದೆ. ಆದರೆ, ತಮಿಳುನಾಡಿನದ್ದು ಅನಿರೀಕ್ಷಿತ. ಇನ್ನು, ಬಂಗಾಳದಲ್ಲಿ ಬಿಜೆಪಿ ಗೆಲುವು ಪ್ರಜಾಪ್ರಭುತ್ವ ವ್ಯವಸ್ಥೆಯ ಸೋಲು ಎಂದು ಸಿಎಂ ಸಿದ್ದರಾಮಯ್ಯ ಪ್ರತಿಕಿಯಿಸಿದ್ದಾರೆ. ದಕ್ಷಿಣದ ರಾಜ್ಯಗಳಾದ ಕರ್ನಾಟಕ, ತೆಲಂಗಾಣ ರಾಜ್ಯಗಳಂತೆ ಕೇರಳ, ತಮಿಳುನಾಡು ರಾಜ್ಯಗಳಲ್ಲಿಯೂ ಬಿಜೆಪಿ ಕೋಮುವಾದಿ ರಾಜಕಾರಣಕ್ಕೆ ಪ್ರವೇಶವಿಲ್ಲ ಎಂಬ ಸಂದೇಶ ನೀಡಿದ ಜನರನ್ನು ಪ್ರಜಾಪ್ರಭುತ್ವವಾದಿ ಜನರ ಪರ ಅಭಿನಂದಿಸುತ್ತೇನೆ ಎಂದು ತಿಳಿಸಿದ್ದಾರೆ.

ಸಂತಸ ಪಕ್ಷದ ಕಾರ್ಯಕರ್ತರ ಪ್ರಯತ್ನದಿಂದ ಗೆಲುವು ಸಿಕ್ಕಿದೆ: ಡಿಸಿಎಂ

ಉಪಚುನಾವಣೆ ಫಲಿತಾಂಶ ಮೂಲಕ 2028ರಲ್ಲಿ ಕೈ ಗೆಲ್ಲಿಸುವ ಸಂದೇಶ: ಡಿಕೆಶಿ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಕರ್ನಾಟಕದ ಎರಡೂ ಕ್ಷೇತ್ರಗಳ ಉಪಚುನಾವಣೆಯಲ್ಲೂ ಜನ ನಮ್ಮ ಮೇಲೆ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಸರ್ಕಾರದ ಗ್ಯಾರಂಟಿ ಯೋಜನೆಗಳ ಜತೆಗೆ ದಕ್ಷ ಆಡಳಿತ ನೀಡುತ್ತಿರುವುದನ್ನು ಜನ ಗಮನಿಸಿದ್ದು, 2028ರಲ್ಲಿ ಮತ್ತೆ ಅಧಿಕಾರಕ್ಕೆ ಬರಲು ಬೆಂಬಲ ನೀಡುವ ಸಂದೇಶ ನೀಡಿದ್ದಾರೆ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ತಿಳಿಸಿದರು.



ಕೆಪಿಸಿಸಿ ಕಚೇರಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಡಿ.ಕೆ.ಶಿವಕುಮಾರ್, ದಾವಣಗೆರೆ ದಕ್ಷಿಣ ಮತ್ತು ಬಾಗಲಕೋಟೆ ಕ್ಷೇತ್ರಗಳ ಮತದಾರರಿಗೆ ನಾನು ಕೃತಜ್ಞತೆ ಸಲ್ಲಿಸುತ್ತೇನೆ ಎಂದರು.

ದಾವಣಗೆರೆ ದಕ್ಷಿಣದಲ್ಲಿ ಹೆಚ್ಚಿನ ಅಂತರದ ಗೆಲುವಿನ ನಿರೀಕ್ಷೆಯಲ್ಲಿದ್ದೆವು. ಆದರೂ, ಗೆಲುವು ಸಾಧಿಸಿದ್ದೇವೆ. ಇನ್ನು, ಬಾಗಲಕೋಟೆಯಲ್ಲಿ ಕಳೆದ ಚುನಾವಣೆಯಲ್ಲಿ ಗೆಲುವಿನ ಅಂತರ ಕಡಿಮೆಯಿತ್ತು. ಈಗ 22,000ಕ್ಕೂ ಹೆಚ್ಚಿನ ಮತಗಳ ಅಂತರದಿಂದ ನಮ್ಮ ಅಭ್ಯರ್ಥಿ ಗೆದ್ದಿದ್ದಾರೆ. ಸಿಎಂ ಸಿದ್ದರಾಮಯ್ಯ, ಸಂಪುಟ ಸಹೋದ್ಯೋಗಿಗಳು, ಶಾಸಕರು, ಪಕ್ಷದ ಪದಾಧಿಕಾರಿಗಳು, ಜಿಲ್ಲೆ ಮತ್ತು ಬ್ಲಾಕ್ ಅಧ್ಯಕ್ಷರು ಹಗಲಿರುಳು ದುಡಿದಿದ್ದಾರೆ ಎಂದರು.

ದಾವಣಗೆರೆಯಲ್ಲಿ ಪಕ್ಷದ ಕೆಲ ನಾಯಕರು ಬೇರೆ ಅಭ್ಯರ್ಥಿಗೆ ಬೆಂಬಲ ನೀಡಿದ್ದಾರೆ ಎಂಬ ಆರೋಪದ ಕುರಿತು ಮಾತನಾಡಿದ ಶಿವಕುಮಾರ್, ಚುನಾವಣೆಯಲ್ಲಿ ಎಲ್ಲರೂ ಒಗ್ಗಟ್ಟಿನಿಂದ ಕೆಲಸ ಮಾಡಿದ್ದಾರೆ. ಈ ಚುನಾವಣೆಯಲ್ಲಿ ನಮ್ಮ ಅಭ್ಯರ್ಥಿ ಗೆದ್ದಿದ್ದಾರೆ. ಅದರ ಹೊರತಾಗಿ ಬೇರೆ ವಿಚಾರಗಳನ್ನು ಚರ್ಚೆ ಮಾಡುವುದಿಲ್ಲ ಎಂದರು.

ಕೇರಳ ನಿರೀಕ್ಷೆಯಂತೆ ಗೆಲುವು: ಕೇರಳದಲ್ಲಿ ಬಹುದೊಡ್ಡ ಅಂತರದಿಂದ ಯುಡಿಎಫ್ ಗೆಲುವು ನೀಡಿದೆ. ಎಲ್‌ಡಿಎಫ್ ಹಾಗೂ ಬಿಜೆಪಿ ಒಳ ಒಪ್ಪಂದ ಮಾಡಿಕೊಂಡರೂ ಜನ ನಮಗೆ ಆಶೀರ್ವಾದ ಮಾಡಿದ್ದಾರೆ. ಕೇರಳದಲ್ಲಿ ನಿರೀಕ್ಷೆಯಂತೆ ಪಕ್ಷ ಗೆದ್ದಿದೆ. ತಮಿಳುನಾಡಿನಲ್ಲಿ ಡಿಎಂಕೆ ಸೋತಿದ್ದರೂ, ಬಿಜೆಪಿ ಅಂಗಪಕ್ಷ ಸೋಲಿಸಲಾಗಿದೆ. ಆ ಮೂಲಕ ಕೋಮುವಾದಿ ಶಕ್ತಿ ದೂರ ಇಡಲಾಗಿದೆ. ಅಲ್ಲಿನ ಮತದಾರರನ್ನು ಅಭಿನಂದಿಸುತ್ತೇನೆ ಎಂದರು.

ದಾವಣಗೆರೆ: ಸ್ಟ್ರಾಂಗ್‌ರೂಂ ಬೀಗ ಒಡೆದು ಒಳಹೋದ ಅಧಿಕಾರಿಗಳು

ಕೈ ಕೊಟ್ಟ ಕೀಗಳು | ಬಾಗಿಲ ಚಿಲಕ ಮುರಿದು ಒಳಕ್ಕೆ

• **ಕನ್ನಡಪ್ರಭ ವಾರ್ತೆ** ದಾವಣಗೆರೆ

ದಾವಣಗೆರೆ ದಕ್ಷಿಣ ಕ್ಷೇತ್ರದ ಮತ ಎಣಿಕೆ ಕೇಂದ್ರದ ಸ್ಟ್ರಾಂಗ್ ರೂಂನಲ್ಲಿದ್ದ ನಾಲ್ಕು ಕೊಠಡಿಗಳ ಪೈಕಿ 2 ಕೊಠಡಿಗಳ ಬೀಗವನ್ನು ತೆಗೆಯಲಾಗದೇ ಬಾಗಿಲಿಗೆ ಹಾಕಿದ್ದ ಚಿಲಕಗಳನ್ನೇ ಒಡೆದು ಹಾಕಿದ ಘಟನೆ ಸೋಮವಾರ ನಡೆಯಿತು.

ನಗರದ ಡಿಆರ್‌ಆರ್ ಶಾಲೆಯ ಮತ ಎಣಿಕಾ ಕೇಂದ್ರದ ಸ್ಟ್ರಾಂಗ್ ರೂಂಗಳ ಬೀಗಗಳನ್ನು ತೆರೆಯಲು ಹರಸಾಹಸ ಮಾಡಿದ ಸಿಬ್ಬಂದಿ, ಕಡೆಗೆ ಬೀಗ ತೆಗೆಯುವ ಬದಲಿಗೆ ಚಿಲಕವನ್ನೇ ಸುತ್ತಿಗೆಯಿಂದ ಒಡೆದು ತೆಗೆಯಬೇಕಾದ ಪರಿಸ್ಥಿತಿ ಬಂದಿದ್ದು ಸಾಕಷ್ಟು ಪ್ರಶ್ನೆಗೆ ಆಸ್ಪದ ಮಾಡಿಕೊಟ್ಟಿದೆ.

ಅಕ್ರಮ ನಡೆದಿದೆ



ದಾವಣಗೆರೆ ದಕ್ಷಿಣ ಕ್ಷೇತ್ರದ ಉಪ ಚುನಾವಣೆಯಲ್ಲಿ ಅಕ್ರಮ ನಡೆದಿದ್ದು, ಈ ಬಗ್ಗೆ ರಾಜ್ಯ ಮತ್ತು ಕೇಂದ್ರ ಚುನಾವಣಾ ಆಯೋಗಗಳಿಗೆ ದೂರು ನೀಡುವ ಜೊತೆಗೆ ನ್ಯಾಯಾಲಯದ ಮೊರೆ ಹೋಗುತ್ತೇನೆ.

• **ಶ್ರೀನಿವಾಸ ದಾಸಕರಿಯಪ್ಪ**
ಪರಾಜಿತ ಬಿಜೆಪಿ ಅಭ್ಯರ್ಥಿ

ಪ್ರತಿಯೊಂದು ಸ್ಟ್ರಾಂಗ್ ರೂಂಗೂ ಎರಡೆರಡು ಅತ್ಯಾಧುನಿಕ ಬೀಗಗಳನ್ನೇ ಹಾಕಲಾಗಿತ್ತು. ಡಬಲ್ ಲಾಕರ್ ಬೀಗಗಳನ್ನು ಅಳವಡಿಸಲಾಗಿತ್ತು. ಆದರೆ, ಚುನಾವಣಾಧಿಕಾರಿ ಬಳಿ ಇದ್ದ ಕೀಗಳಿಂದ ಬೀಗಗಳನ್ನು ತೆಗೆಯಲಾಗದ ಹಿನ್ನೆಲೆಯಲ್ಲಿ ಅನಿವಾರ್ಯವಾಗಿ 2 ಸ್ಟ್ರಾಂಗ್ ರೂಂಗಳ ಬೀಗಗಳನ್ನು ಒಡೆದು ಹಾಕಿ, ಬಾಗಿಲುಗಳನ್ನು ತೆಗೆಯಲಾಯಿತು.



15 ವರ್ಷಗಳ ದೀದಿ ಭದ್ರಕೋಟೆ ಬಿಜೆಪಿ ದಾಳಿಗೆ ಛಿದ್ರ

ಪಶ್ಚಿಮ ಬಂಗಾಳದಲ್ಲಿ ಬಿಜೆಪಿಗೆ ಐತಿಹಾಸಿಕ ಜಯ | ಮೊದಲ ಸಲ ಅಧಿಕಾರ | ಆಡಳಿತ ವಿರೋಧಿ ಅಲೆಗೆ ಟಿಎಂಸಿ ಬಲಿ | ಕಾಂಗ್ರೆಸ್‌ಗೆ ಹೀನಾಯ ಸೋಲು

ಕೋಲ್ಕತಾ: 15 ವರ್ಷಗಳಿಂದ ಪಶ್ಚಿಮ ಬಂಗಾಳವನ್ನು ಅಕ್ಷರಶಃ ಆಳಿದ್ದ ಟಿಎಂಸಿ ನಾಯಕಿ ಮಮತಾ ಬ್ಯಾನರ್ಜಿ ಅಧಿಪತ್ಯ ಕೊನೆಗೊಳಿಸುವಲ್ಲಿ ಕಡೆಗೂ ಯಶಸ್ವಿಯಾಗಿರುವ ಬಿಜೆಪಿ, ರಾಜ್ಯದಲ್ಲಿ ಮೊದಲಸಲಅಧಿಕಾರದಗದ್ದುಗೆಏರಿದೆ. ರಾಜ್ಯ ವಿಧಾನಸಭೆಯ 294 ಸ್ಥಾನಗಳ ಪೈಕಿ 293 ಸ್ಥಾನಗಳಿಗೆ ಚುನಾವಣೆ ನಡೆದಿದ್ದು, ಭರ್ಜರಿ ಬಹುಮತದೊಂದಿಗೆ ಬಿಜೆಪಿ ಅಧಿಕಾರಕ್ಕೆ ಬಂದಿದೆ.

ವಿಶೇಷ ಮತಪಟ್ಟಿ ಪರಿಷ್ಕರಣೆ ವಿವಾದ, ಬಾಂಗ್ಲನ್ನರ ಅಕ್ರಮ ಒಳನುಸುಳುವಿಕೆ, ಹಿಂದೂಗಳಮೇಲಿನದೌರ್ಜನ್ಯ ತಡೆಯುವಲ್ಲಿ ಮಮತಾವಿಫಲಎಂಬಆರೋಪ, ಆಡಳಿತದಲ್ಲಿನಭ್ರಷ್ಟಾಚಾರದ ಆರೋಪ, ಅತಿಯಾದ ಓಲೈಕೆ ರಾಜಕಾರಣ, ವೈದ್ಯಕೀಯ ವಿದ್ಯಾರ್ಥಿನಿಯ ಮೇಲಿನ ಅತ್ಯಾಚಾರ ಪ್ರಕರಣದಲ್ಲಿ ಟಿಎಂಸಿ ನಾಯಕರ ಕೀಳು ಹೇಳಿಕೆ, ಅಭಿವೃದ್ಧಿಯಲ್ಲಿ ಕುಂಠಿತ, ಸತತ 15 ವರ್ಷಗಳ ಆಡಳಿತ ವಿರೋಧಿ ಅಲೆಗೆ ಸಿಕ್ಕ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅಧಿಕಾರ ಕಳೆದುಕೊಂಡಿದ್ದಾರೆ.

ಮತ್ತೊಂದೆಡೆ ಸತತ 2 ವರ್ಷಗಳಿಂದ, ಬಂಗಾಳವನ್ನು ಗೆಲ್ಲಲು ಬಿಜೆಪಿಯ ಚುನಾವಣಾ ರಣತಂತ್ರಗಾರ ಅಮಿತ್ ಶಾ ಹೆಣೆದಕಾರ್ಯತಂತ್ರ, ಬಿಜೆಪಿಯತಳಮಟ್ಟದಕಾರ್ಯಕರ್ತರು ಕಳೆದ2 ತಿಂಗಳಲ್ಲಿರಾಜ್ಯವ್ಯಾಪಿ1.65 ಲಕ್ಷಕ್ಕೂಹೆಚ್ಚುಸಮುದಾಯ ಸಭೆನಡೆಸಿ ಮಮತಾ ಸರ್ಕಾರದವೈಫಲ್ಯ, ಬಾಂಗ್ಲಾದೇಶದಲ್ಲಿನ ಹಿಂದೂಗಳ ಮೇಲಿನ ದಾಳಿ ಪ್ರಸ್ತಾಪಿಸಿ, ಹಿಂದೂಗಳನ್ನು ಬಡಿದೆಬ್ಬಿಸಿದ್ದು, ಮಮತಾ ಸರ್ಕಾರದ ಓಲೈಕೆ ರಾಜಕಾರಣದ ಬಗ್ಗೆ ಗಮನ ಸೆಳೆದಿದ್ದು ಬಿಜೆಪಿ ಗೆಲುವಿಗೆ ದೊಡ್ಡ ಮಟ್ಟದಲ್ಲಿ ನೆರವು ನೀಡಿದೆ. ಜೊತೆಗೆ ಕಡೆಯ ಹಂತದಲ್ಲಿ ಪ್ರಧಾನಿ ಮೋದಿಯಾಗಿ ಬಿಜೆಪಿ ನಾಯಕರು ನಡೆಸಿದ ಸಂಘಟಿತ ಹೋರಾಟ, ಭರ್ಜರಿ ಪ್ರಚಾರ ಕೂಡಾ ಬಿಜೆಪಿಯು ವಿಧಾನಸಭೆಯಲ್ಲಿ ಸುಲಭವಾಗಿ ಮ್ಯಾಜಿಕ್ ಸಂಖ್ಯೆಯಾದ 148ರ ಗಡಿದಾಟುವುದನ್ನು ಖಚಿತಪಡಿಸಿದೆ.

ಕಳೆದ ಚುನಾವಣೆಗೆ ಹೋಲಿಸಿದರೆ ಈ ಬಾರಿ ಟಿಎಂಸಿಯ ಮತ ಪಾಲು ಶೇ.6-ಶೇ.7ರಷ್ಟು ಇಳಿದಿದ್ದರೆ, ಬಿಜೆಪಿಯ ಪಾಲು ಶೇ.6-7ರಷ್ಟು ಹೆಚ್ಚಳವಾಗಿದ್ದು ಫಲಿತಾಂಶ ತಿರುವು ಮುರುವಾಗಲು ನೆರವಾಗಿದೆ. 2021ರಲ್ಲಿ ತಾನು ಗೆದ್ದಿದ್ದ ಸ್ಥಾನಗಳ ಪೈಕಿ ಬಹುತೇಕ ಕ್ಷೇತ್ರಗಳನ್ನು ಉಳಿಸಿಕೊಳ್ಳುವಲ್ಲಿ ಯಶಸ್ವಿಯಾಗಿರುವ ಬಿಜೆಪಿ, ಈ ಬಾರಿ ಟಿಎಂಸಿ ಪ್ರಾಬಲ್ಯದ ಹಲವು ಸ್ಥಾನಗಳನ್ನೂ ಕಸಿದುಕೊಳ್ಳುವಲ್ಲಿ ಯಶಸ್ವಿಯಾಗಿದೆ.

ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಗೆದ್ದಿದ್ದು ಹೇಗೆ?

- ಟಿಎಂಸಿ ವಿರುದ್ಧ ಕೇಳಿಬಂದ ಅತಿಯಾದ ಓಲೈಕೆ ರಾಜಕಾರಣದ ಆರೋಪ
- ಬಾಂಗ್ಲಾ ಅಕ್ರಮ ಒಳನುಸುಳುವಿಕೆ ಬಗ್ಗೆ ಮಮತಾ ಸರ್ಕಾರ ಜಾಣ ಮೌನ
- ಹಿಂದೂ ಮೇಲಿನ ಸತತ ದೌರ್ಜನ್ಯ ತಡೆಗೆ ಟಿಎಂಸಿ ವಿಫಲ. ಹಿಂದೂಗಳ ಆಕ್ರೋಶ
- ನೆರೆ ಬಾಂಗ್ಲಾ ಹಿಂದೂಗಳ ಮೇಲಿನ ಹಿಂಸಾಚಾರವೂ ಚುನಾವಣೆ ಮೇಲೆ ಪರಿಣಾಮ ಬೀರಿರುವ ಸಾಧ್ಯತೆ
- ಅಭಿವೃದ್ಧಿ ಕಾರ್ಯದಲ್ಲಿ ಹಿನ್ನಡೆ. ಸರ್ಕಾರ, ಸಚಿವರ ಮೇಲೆ ಭ್ರಷ್ಟಾಚಾರ ಆರೋಪ
- ಸತತ 15 ವರ್ಷಗಳ ಮಮತಾ ಸರ್ಕಾರದ ಆಡಳಿತ ವಿರೋಧಿ ಅಲೆ ಬಿಜೆಪಿಗೆ ವರ
- ಇವುಗಳನ್ನು ಜನರ ಗಮನಕ್ಕೆ ತರುವಲ್ಲಿ ಯಶಸ್ವಿಯಾದ ಬಿಜೆಪಿ ಕಾರ್ಯತಂತ್ರ
- ತನ್ನ ಪ್ರಾಬಲ್ಯದ ಹೊರತಾದ ಕ್ಷೇತ್ರಗಳಲ್ಲೂ ಸಂಘಟನೆಗೆ ಬಿಜೆಪಿ ಒತ್ತು ನೀಡಿದ್ದು
- ಎಸ್‌ಐಆರ್ ಮೂಲಕ ನಕಲಿ ಮತದಾರರ ತೆರವು ಮಾಡಿದ್ದು ಟಿಎಂಸಿಗೆ ಭಾರೀ ಶಾಪ
- 1 ವರ್ಷದಿಂದ ರಾಜ್ಯವ್ಯಾಪಿ 1.64 ಲಕ್ಷ ಸಮುದಾಯ ಸಭೆ ನಡೆಸಿದ್ದ ಬಿಜೆಪಿ
- 2 ವರ್ಷಗಳಿಂದ ಅಮಿತ್ ಶಾ ಕಾರ್ಯತಂತ್ರ, ಮೋದಿ ಭರ್ಜರಿ ಪ್ರಚಾರ ಸಭೆಗಳು
- 5 ವರ್ಷಗಳಿಂದ ಟಿಎಂಸಿಯ ಸವಾಲು ಮೆಟ್ಟಿನಿಲ್ಲುವಲ್ಲಿ ಬಿಜೆಪಿಯ ಸುವೇಂದು ಅಧಿಕಾರಿ ಯಶಸ್ವಿಯಾಗಿದ್ದು

ಪ.ಬಂಗಾಳ (ಒಟ್ಟು ಸ್ಥಾನ 294 / ಬಹುಮತಕ್ಕೆ 148)


ಪಕ್ಷ	ಸ್ಥಾನ	2021	ಲಾಭ/ನಷ್ಟ	% ಮತ
ಟಿಎಂಸಿ	81	214	-133	41
ಬಿಜೆಪಿ	206	77	+129	45
ಕಾಂಗ್ರೆಸ್	2	0	+2	3
ಎಡರಂಗ	2	1	+1	5
ಇತರರು	2	1	+1	6

ಗೆದ್ದ ಪ್ರಮುಖರು

- ಸುವೇಂದು ಅಧಿಕಾರಿ (ಬಿಜೆಪಿ)
- ಅಗ್ನಿಮಿತ್ರ ಪೌಲ್ (ಬಿಜೆಪಿ)
- ದಿಲೀಪ್ ಘೋಷ್ (ಬಿಜೆಪಿ)
- ರೂಪಾ ಗಂಗೂಲಿ (ಬಿಜೆಪಿ)
- ಸ್ವಪನ್ ದಾಸ್ ಗುಪ್ತಾ (ಬಿಜೆಪಿ)
- ಕುನಾಲ್ ಘೋಷ್ (ಟಿಎಂಸಿ)
- ಅಶೋಕ್ ದಿಂಡಾ (ಬಿಜೆಪಿ)

ಸೋತ ಪ್ರಮುಖರು

- ಅಧೀರ್ ರಂಜನ್ ಚೌಧರಿ (ಕಾಂಗ್ರೆಸ್)
- ಮಮತಾ ಬ್ಯಾನರ್ಜಿ (ಟಿಎಂಸಿ)
- ಸೋಹಂ ಚಕ್ರವರ್ತಿ (ಬಿಜೆಪಿ)
- ಸಯಾಂತಿಕಾ ಬ್ಯಾನರ್ಜಿ (ಟಿಎಂಸಿ)
- ಪ್ರಿಯಾಂಕಾ ತಿಬ್ರೇವಾಲ್ (ಬಿಜೆಪಿ)
- ಶಶಿ ಪಾಂಜಾ (ಟಿಎಂಸಿ)
- ಮೌಸಂ ನೂರ್ (ಟಿಎಂಸಿ)



ಬಂಗಾಳ
294 ಒಟ್ಟು ಸ್ಥಾನ
148 ಬಹುಮತಕ್ಕೆ



ಅಭೂತಪೂರ್ವ ಗೆಲುವಿನ ಹಿನ್ನೆಲೆಯಲ್ಲಿ ಪಶ್ಚಿಮ ಬಂಗಾಳದ ಬಿಜೆಪಿ ಕಾರ್ಯಕರ್ತರಿಂದ ಬಣ್ಣ ಎರಚಿ ಸಂಭ್ರಮಾಚರಣೆ

ಭವಾನಿಪುರ ಎಣಿಕೆ ಕೇಂದ್ರದಲ್ಲಿ ದೀದಿ-ಅಧಿಕಾರಿ ಮುಖಾಮುಖಿ



ಕೋಲ್ಕತಾ: ಪಶ್ಚಿಮ ಬಂಗಾಳದಲ್ಲಿ ಜಿದ್ದಾಜಿದ್ದಿಗೆ ವೇದಿಕೆಯಾಗಿರುವ ಭವಾನಿಪುರ ಕ್ಷೇತ್ರದಲ್ಲಿ ಮತ ಎಣಿಕೆ ವೇಳೆ ಅಭ್ಯರ್ಥಿಗಳಾದ ಟಿಎಂಸಿ ನಾಯಕಿ ಮಮತಾ ಬ್ಯಾನರ್ಜಿ ಮತ್ತು ಬಿಜೆಪಿಯ ಸುವೇಂದು ಅಧಿಕಾರಿ ಮುಖಾಮುಖಿಯಾದ ಪ್ರಸಂಗ ನಡೆಯಿತು. ಮತ ಎಣಿಕೆ ವೇಳೆ ಅಂತಿಮ ಸುತ್ತುಗಳಲ್ಲಿ ಸುವೇಂದು ಅಧಿಕಾರಿ ಮುನ್ನಡೆ ಕುಸಿಯಲಾರಂಭಿಸಿತು. ಈ ವೇಳೆ ಅಧಿಕಾರಿಗಳು ಟಿಎಂಸಿ ಏಜೆಂಟ್ ಒಬ್ಬರನ್ನು ಬಲವಂತಾಗಿ ಕೇಂದ್ರದಿಂದ ಹೊರ ಹಾಕಿದರು ಎಂದು ಪಕ್ಷದ ಕಾರ್ಯ ಕರ್ತರು ಆರೋಪಿಸಿದರು. ಇದರ ಬೆನ್ನಲ್ಲೇ ಮಮತಾ ಬ್ಯಾನರ್ಜಿ ಕೂಡ ಸ್ಥಳಕ್ಕೆ ಆಗಮಿಸಿದರು. ಆಗ ಬಿಜೆಪಿಯ ಸುವೇಂದು ಅಧಿಕಾರಿ ಕೂಡ ಕೇಂದ್ರದಲ್ಲಿದ್ದರು.

ಮಮತಾ ಘೋರ ಪರಾಭವ

ಬಿಜೆಪಿಯ ಸುವೇಂದು ಎದುರು 15,105 ಮತಗಳಿಂದ ಸೋಲು
ಹಾವು-ಏಣಿ ಆಟದಲ್ಲಿ ತವರಿನಲ್ಲೇ ದೀದಿಗೆ ಭಾರೀ ಪರಾಜಯ

ಕೋಲ್ಕತಾ: ಇಡೀ ಪಶ್ಚಿಮ ಬಂಗಾಳ ಚುನಾವಣೆಯಲ್ಲಿ ತೀವ್ರ ಹಣಾಹಣಿಗೆ ಸಾಕ್ಷಿಯಾಗಿದ್ದ ಭವಾನಿಪುರ ಕ್ಷೇತ್ರದಲ್ಲಿ ಬಿಜೆಪಿಯಸುವೇಂದುಅಧಿಕಾರಿಎದುರು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ 15,105 ಮತಗಳಿಂದ ಪರಾಭವ ಕಂಡಿದ್ದಾರೆ. ಈ ಮೂಲಕ ಸತತ 3 ಅವಧಿಗೆ ಬಂಗಾಳದ ಗದ್ದುಗೆಯೇರಿ ಅನಭಿಷಿಕ್ತ ಸಾಮ್ರಾಜ್ಞಿಯಾಗಿ ಮೆರೆದಿದ್ದ ದೀದಿ ಯುಗ ಸದ್ಯದ ಮಟ್ಟಿಗೆ ಅಂತ್ಯವಾಗಿದೆ.

ಈಬಾರಿಮಮತಾಬ್ಯಾನರ್ಜಿಯವರ ತವರು ಕ್ಷೇತ್ರವಾದ ಭವಾನಿಪುರ ತೀವ್ರ ಕುತೂಹಲಕ್ಕೆ ಕಾರಣವಾಗಿತ್ತು. 2021ರ ಚುನಾವಣೆಯಲ್ಲಿ ನಂದಿಗ್ರಾಮದಲ್ಲಿ ಸುವೇಂದುಎದುರುಸೋತಿದ್ದಮಮತಾ, ಆ ಬಳಿಕ ಭವಾನಿಪುರದಿಂದ ಸ್ಪರ್ಧಿಸಿ, ಗೆಲುವು ಸಾಧಿಸಿ ಮುಖ್ಯಮಂತ್ರಿ ಕುರ್ಚಿಯನ್ನು ಉಳಿಸಿಕೊಂಡಿದ್ದರು. ಈ ಬಾರಿಯೂ ಅದೇ ಕ್ಷೇತ್ರದಿಂದ ಅದೃಷ್ಟ ಪರೀಕ್ಷೆಗೆಮುಂದಾಗಿದ್ದರು. ಆದರೆರಾಜ್ಯದಲ್ಲಿ ಅವರ ಇಡೀ ಪಕ್ಷ ಧೂಳಿಪಟವಾಗಿದ್ದಲ್ಲದೆ, ಕನಿಷ್ಠ ಶಾಸಕ ಸ್ಥಾನವನ್ನು ಉಳಿಸಿಕೊಳ್ಳುವಲ್ಲಿಯೂ ಅವರು ವಿಫಲರಾಗಿದ್ದಾರೆ.

ಮತಎಣಿಕೆಹಾವುಏಣಿಆಟದಂತಿತ್ತು. ಒಮ್ಮೆ ಸುವೇಂದು ಮುನ್ನಡೆ ಸಾಧಿಸಿದರೆ ಮತ್ತೊಮ್ಮೆ ದೀದಿ ಮುನ್ನಡೆ ಸಾಧಿಸುತ್ತಿದ್ದರು. ಕೊನೆಗೆ ದೀದಿ ಮಾಜಿ ಆಪ್ತನಾದ ಅಧಿಕಾರಿ ಕೈ ಮೇಲಾಯಿತು.



ಬಿಜೆಪಿ ಗೆಲುವಿಗೆ ಝಾಲ್ಮುರಿ ಹಂಚಿ, ತಿಂದು ಮಹಿಳಾಮಣಿಗಳ ಸಂಭ್ರಮಾಚರಣೆ

ಬಿಜೆಪಿಯಿಂದ 100 ಸ್ಥಾನಗಳ ಲೂಟಿ, ಇದು ಅಕ್ರಮ: ದೀದಿ

ಭವಾನಿಪುರ (ಬಂಗಾಳ): ಬಿಜೆಪಿಯಿಂದ ರಾಜ್ಯದಲ್ಲಿ 100 ಸ್ಥಾನ ಲೂಟಿ, ಇದು ಅಕ್ರಮ. ಇದರ ವಿರುದ್ಧ ನಾವು ಪುಟಿದೇಳುತ್ತೇವೆ ಎಂದು ಬಂಗಾಳ ಸಿಎಂ ಹಾಗೂ ಟಿಎಂಸಿ ನಾಯಕಿ ಮಮತಾ ಬ್ಯಾನರ್ಜಿ ಹೇಳಿದ್ದಾರೆ. ಸೋಮವಾರ ರಾತ್ರಿ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಬಿಜೆಪಿ 100 ಕ್ಕೂ ಹೆಚ್ಚು ಸ್ಥಾನಗಳನ್ನು ಲೂಟಿ ಮಾಡಿದೆ. ಚುನಾವಣಾ ಆಯೋಗವು ಬಿಜೆಪಿಯ ಆಯೋಗ. ನಾನು ಚುನಾವಣಾ ಆಯೋಗಕ್ಕೆ ದೂರು ನೀಡಿದ್ದೇನೆ, ಆದರೆ ಅವರು ಏನನ್ನೂಮಾಡುತ್ತಿಲ್ಲ. ಇದುಗೆಲುವುಎಂದುನೀವುಭಾವಿಸುತ್ತೀರಾ? ಇದು ಅನೈತಿಕಗೆಲುವು, ನೈತಿಕವಿಜಯವಲ್ಲ. ಚುನಾವಣಾ ಆಯೋಗವು ಕೇಂದ್ರ ಪಡೆಗಳು ಮತ್ತು ಪ್ರಧಾನಿ ಮತ್ತು ಗೃಹ ಸಚಿವರೊಂದಿಗೆ ಏನು ಮಾಡಿದೆಯೋ ಅದು ಸಂಪೂರ್ಣವಾಗಿ ಕಾನೂನುಬಾಹಿರ. ಇದು ಲೂಟಿ, ಲೂಟಿ, ಲೂಟಿ. ನಾವು ಮತ್ತೆ ಪುಟಿದೇಳುತ್ತೇವೆ' ಎಂದರು.

ನಾವು ಮತ್ತೆ ಪುಟಿದೇಳುತ್ತೇವೆ ಮಮತಾ

ಸಿಹಿ ಬದಲು ಬಂಗಾಳದಲ್ಲಿ ಮೀನು, ಚುರುಮುರಿ ತಿಂದು ಬಿಜೆಪಿ ಸಂಭ್ರಮ!

ಕೋಲ್ಕತಾ: ಮೊದಲ ಬಾರಿ ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಅಧಿಕಾರದ ಗದ್ದುಗೆ ಹಿಡಿದಿದ್ದಕ್ಕೆ ಪಕ್ಷದ ಕಾರ್ಯಕರ್ತರ ಸಂಭ್ರಮಕ್ಕೆ ಪಾರವೇ ಇಲ್ಲ. ಹಾಗಂತ ಅವರು ಸಿಹಿ ತಿಂದು ಸಂಭ್ರಮಿಸಿಲ್ಲ. ಬದಲಾಗಿ ಮೀನು ಹಂಚಿ, ಝಾಲ್ಮುರಿ (ಚುರುಮುರಿ) ತಿಂದು ವಿರೋಧಿಗಳಿಗೆ ಟಾಂಗ್ ನೀಡಿದ್ದಾರೆ. ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದರೆ ಮೀನು ಹಾಗೂ ಇತರ ಮಾಂಸಹಾರ ನಿಷೇಧಿಸುತ್ತಾರೆ ಎಂದು ಟಿಎಂಸಿ ಆರೋಪಿಸಿತ್ತು. ಹೀಗಾಗಿ ಈಗ ಬಿಜೆಪಿ ಮೀನು ಹಂಚಿ ತಿರುಗೇಟು ನೀಡಿದೆ. ಮತ್ತೊಂದೆಡೆ ಪ್ರಧಾನಿ ಮೋದಿ ತಮ್ಮ ಪ್ರಚಾರದಲ್ಲಿ ಚುರುಮುರಿ ಸೇವಿಸಿ ಮಮತಾಗೆ ಟಾಂಗ್ ನೀಡಿದ್ದರು. ಹೀಗಾಗಿ ಈಗಲೂ ಬಿಜೆಪಿ ಕಾರ್ಯಕರ್ತರು ಚುರುಮುರಿ ಹಂಚಿ ಗೆಲುವನ್ನು ಸಂಭ್ರಮಿಸಿದರು.



ಬಂಗಾಳದ ಕೆಲವೆಡೆ ಟಿಎಂಸಿ ಕಚೇರಿಗಳ ಮೇಲೆ ದಾಳಿ

ಇದಕ್ಕೂ ನಮಗೂ ಸಂಬಂಧವೇ ಇಲ್ಲ: ಬಿಜೆಪಿ

ಕೋಲ್ಕತಾ: ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಅಭೂತಪೂರ್ವ ಗೆಲುವು ದಾಖಲಿಸಿದ ಬೆನ್ನಲ್ಲೇ, ರಾಜ್ಯಾದ್ಯಂತ ಟಿಎಂಸಿ ಕಚೇರಿಗಳ ಮೇಲೆ ದಾಳಿ ನಡೆಸಿ, ಫ್ಲೆಕ್ಸ್ ಬೋರ್ಡ್‌ಗಳು, ಪಕ್ಷದ ಬ್ಯಾನರ್‌ಗಳು ಮತ್ತು ಧ್ವಜಗಳನ್ನು ವಿರೂಪಗೊಳಿಸಲಾಗಿದೆ. ಆದರೆ ಇದಕ್ಕೂ ತನಗೂ ಯಾವುದೇಸಂಬಂಧವಿಲ್ಲ ಎಂದು ಬಿಜೆಪಿ ಸ್ಪಷ್ಟಪಡಿಸಿದೆ.



ಪೊಲೀಸರ ನಿಷ್ಕ್ರಿಯತೆಯಿಂದಾಗಿ, ಬಿಜೆಪಿಯ ಆಶ್ರಯ ಪಡೆದಿರುವ ದುಷ್ಕರ್ಮಿಗಳು ಪಕ್ಷದ ಕಾರ್ಯಕರ್ತರುಮತ್ತು ಬೆಂಬಲಿಗರಮೇಲೆಸಂಘಟಿತದಾಳಿಗಳನ್ನುನಡೆಸುತ್ತಿದ್ದಾರೆ ಎಂದು ಟಿಎಂಸಿ ನಾಯಕರು ಆರೋಪಿಸಿದ್ದಾರೆ. ಆದರೆ ಬಿಜೆಪಿ ನಾಯಕರು ಈ ಆರೋಪವನ್ನು ಅಲ್ಲಗಳೆದಿದ್ದು, 'ಈ ಘಟನೆಗಳು ಟಿಎಂಸಿಯೊಳಗಿನ ಆಂತರಿಕ ವಿವಾದಗಳ ಫಲ' ಎಂದಿದ್ದಾರೆ.

ಮಮತಾ ಮೇಲೆ ಎಸ್‌ಐಆರ್ ತೀವ್ರ ಪರಿಣಾಮ?

ಕೋಲ್ಕತಾ: ಮತಪಟ್ಟಿ ವಿಶೇಷ ಪರಿಷ್ಕರಣೆ (ಎಸ್‌ಐಆರ್) ವೇಳೆ 1 ಕೋಟಿ ಮತದಾರರ ಹೆಸರನ್ನು ಚುನಾವಣಾ ಆಯೋಗ ಅಳಿಸಿ ಹಾಕಿತ್ತು. ಇವರು ಅಕ್ರಮ ಮತದಾರರು ಎಂದು ಆಯೋಗ ಕರೆದಿತ್ತು. ಆದರೆ ಇದೇ ಎಸ್‌ಐಆರ್ ಮಮತಾ ಬ್ಯಾನರ್ಜಿಗೆ ಮುಳುವಾಯಿತೆ ಎಂಬ ಪ್ರಶ್ನೆ ಎದುರಾಗಿದೆ. ಎಸ್‌ಐಆರ್ ಜಾರಿ ಮಾಡಿ ಟಿಎಂಸಿ ಪರ ಮತದಾರರ ಅಳಿಸಿಹಾಕಲಾಗಿದೆ ಎಂದು ಮಮತಾ ಆರೋಪಿಸಿದ್ದರು. ಇದರ ವಿರುದ್ಧ ಕೋರ್ಟ್ ಒಳಗೆ ಹಾಗೂ ಬಹಿರಂಗ ನಡೆಸಿದ್ದರು. 'ಆದರೆ ಇವರೆಲ್ಲ ಅಕ್ರಮ ಬಾಂಗ್ಲಾ ಮತದಾರರು. ಮಮತಾ ಅವರೇ ಇವರಿಗೆ ಮಣೆ ಹಾಕಿದ್ದರು' ಎಂದು ಬಿಜೆಪಿ ಆರೋಪಿಸಿತ್ತು.

ಆರ್‌ಜಿ ಕರ್ ರೇಪ್ ಸಂತ್ರಸ್ತೆಯ ತಾಯಿಗೆ ಬಂಗಾಳದಲ್ಲಿ ಗೆಲುವು



ಕೋಲ್ಕತಾ: 2024ರಲ್ಲಿ ಪಶ್ಚಿಮ ಬಂಗಾಳ ಆರ್ ಜಿ ಕರ್ ಮೆಡಿಕಲ್‌ಕಾಲೇಜಿನಲ್ಲಿನಡೆದಅತ್ಯಾಚಾರಪ್ರಕರಣದ ಸಂತ್ರಸ್ತೆ ತಾಯಿ ರತ್ನಾ ದೇವನಾಥ್ ಬಂಗಾಳ ಚುನಾವಣೆಯಲ್ಲಿಬಿಜೆಪಿಯಿಂದಜಯಸಾಧಿಸಿದ್ದಾರೆ. ಪಾನಿಹಾಟಿಯಲ್ಲಿಸ್ಪರ್ಧಿಸಿದ್ದ ರತ್ನಾ ತಮ್ಮ ಪ್ರತಿ ಸ್ಪರ್ಧಿ ಟಿಎಂಸಿಯ ತೀರ್ಥಂಕರ್ ಘೋಷ್ ವಿರುದ್ಧ ಗೆಲುವಿನನಗೆಬೀರಿದ್ದಾರೆ. ಇದೇವೇಳೆಸಂದೇಶಖಾಲಿ ದೌರ್ಜನ್ಯ ಸಂತ್ರಸ್ತೆ ರೇಖಾಪಾತ್ರ ಕೂಡ ಗೆದ್ದಿದ್ದಾರೆ.



ಇದು ಅತಿ ಹೆಮ್ಮೆಯ ಕ್ಷಣ

ಈ ಗೆಲುವು ಟಿಎಂಸಿ ಭಯದ ಎದುರು ಮೋದಿಯವರ ಮೇಲಿನ ನಂಬಿಕೆಯ ವಿಜಯ. ನನ್ನಂತಹ ಪ್ರತಿಯೊಬ್ಬ ಬಿಜೆಪಿ ಕಾರ್ಯಕರ್ತನಿಗೆ, ಇಂದು ಕೇಸರಿ ಧ್ವಜವು ಎಲ್ಲೆಡೆ ತಲೆಯೆತ್ತಿ ಹಾರಾಡುತ್ತಿದೆ ಎಂಬ ಹೆಮ್ಮೆಯ ಕ್ಷಣ.

• ಅಮಿತ್ ಶಾ
ಕೇಂದ್ರ ಗೃಹ ಸಚಿವ



ಮುಖರ್ಜಿ ಆತ್ಮ ಸಂತೃಪ್ತ

ಒಬ್ಬ ಕಾರ್ಯಕರ್ತನಾಗಿ ನನ್ನ ಹೃದಯ ಭಾವುಕವಾಗಿದೆ. ಒಂದು ಕನಸು ನನಸಾಗಿದೆ. ಡಾ. ಶ್ಯಾಮ್ ಪ್ರಸಾದ್ ಮುಖರ್ಜಿ ಅವರ ಆತ್ಮ ಈಗ ಸಂತೃಪ್ತಗೊಂಡಿದೆ. ಈ ಗೆಲುವು ಮೋದಿ ಅವರ ಮೇಲಿನ ಅಪಾರ ನಂಬಿಕೆಯ ಪ್ರತಿಬಿಂಬ.

• ಶಿವರಾಜ್ ಸಿಂಗ್ ಚೌಹಾಣ್ ಕೇಂದ್ರ ಸಚಿವ



ಉಗ್ರರ ವಿರುದ್ಧ ರಕ್ಷಣೆ

ಬಂಗಾಳದಲ್ಲಿ ಗೆಲುವು ಸಾಧಿಸಿರುವ ಬಿಜೆಪಿಯು, ದೇಶವನ್ನು ಒಳ ನುಸುಳುವಿಕೆ, ಉಗ್ರ ಚಟುವಟಿಕೆ, ಭಯೋತ್ಪಾದನೆಯಿಂದ ರಕ್ಷಿಸುತ್ತದೆ. ಮಮತಾ ಸರ್ಕಾರ ಬಾಂಗ್ಲಾನ್ನರ ಒಳನುಸುಳುವಿಕೆಗೆ ಸಾಕ್ಷಿಯಾಗಿತ್ತು.

• ದೇವೇಂದ್ರ ಫಡ್ನವೀಸ್
ಮಹಾರಾಷ್ಟ್ರ ಸಿಎಂ



ಇದು ಆರಂಭ ಮಾತ್ರ

ನಮ್ಮ ಪ್ರಧಾನಿ ನರೇಂದ್ರ ಮೋದಿ ಅವರ ಮಹಾನ್ ನಾಯಕತ್ವದಲ್ಲಿ, ಬಂಗಾಳ ಉದಯಿಸುತ್ತಿದೆ. ಬಲಿಷ್ಠ, ನಿರ್ಭೀತ ಬಂಗಾಳ ನಿರ್ಮಾಣ ಆಗಲಿದೆ. ಬಂಗಾಳದ ಓಟಕ್ಕೆ ಯಾರಿಗೂ ತಡೆಯೊಡ್ಡಲು ಆಗದು. ಇದು ಕೇವಲ ಆರಂಭ.

• ಲಿಯಾಂಡರ್ ಪೇಸ್
ಬಿಜೆಪಿ ನಾಯಕ

ಜನಸಂಘ ಸ್ಥಾಪಕ ಡಾ. ಮುಖರ್ಜಿ ತವರಲ್ಲಿ ಅರಳಿತು ಕಮಲ

ಫಲಿಸಿತು ಕಠಿಣ ಪರಿಶ್ರಮ, ಈಡೇರಿತು ಬಿಜೆಪಿ ಕಾರ್ಯಕರ್ತರ ದಶಕಗಳ ಮಹದಾಸೆ | ಬಂಗಾಳವನ್ನು ಬಾಚಿಕೊಂಡ ಪ್ರಧಾನಿ ಮೋದಿ- ಅಮಿತ್ ಶಾ ಜೋಡೆತ್ತುಗಳು

ಅದೊಂದು ಆಸೆ ಬಾಕಿ ಇತ್ತು. ಅದು ಕೂಡ ಈಗ ಈಡೇರಿತು!

ಬಿಜೆಪಿಯ ಪೂರ್ವಾಶ್ರಮವಾಗಿರುವ ಜನಸಂಘದ ಸಂಸ್ಥಾಪಕರು ಡಾ. ಶ್ಯಾಮಪ್ರಸಾದ ಮುಖರ್ಜಿ. ಅವರಿಂದ ಕುಡಿಯೊಡೆದ ಪಕ್ಷ ಈಗ ದೇಶಾದ್ಯಂತ ಹೆಮ್ಮರವಾಗಿ ಬೆಳೆದಿದೆ, ವಿಶ್ವದ ಅತಿದೊಡ್ಡ ಪಕ್ಷವಾಗಿದೆ. ಎಂದೂ ಗೆಲ್ಲದ ರಾಜ್ಯಗಳಲ್ಲೆಲ್ಲಾ 2014ರ ನಂತರ ಭರ್ಜರಿ ಬಹುಮತದೊಂದಿಗೆ ಅಧಿಕಾರಕ್ಕೇರಿದೆ. ಆದರೆ ಮುಖರ್ಜಿ ಅವರ ತವರು ರಾಜ್ಯವಾಗಿರುವ ಪಶ್ಚಿಮಬಂಗಾಳದಲ್ಲಿ ಏನೇ ತಿಪ್ಪರಲಾಗ ಹಾಕಿದರೂ ಗೆಲುವು ಮರೀಚಿಕೆಯಾಗಿತ್ತು. ಅದು ಕೂಡ ಈಗ ಸಾಕಾರಗೊಂಡಿದೆ. ಮುಖರ್ಜಿ ಅವರ 125ನೇ ವರ್ಷಾಚರಣೆ ಹೊತ್ತಲ್ಲೇ.

ಇದಕ್ಕೆ ಯಾರು ಕಾರಣ ಎಂದರೆ, ಬಿಜೆಪಿಯಲ್ಲಿ ಕೇಳಿಬರುವುದು ಎರಡೇ ಹೆಸರು. ಒಂದು ನರೇಂದ್ರ ಮೋದಿ, ಇನ್ನೊಂದು ಅಮಿತ್ ಶಾ!

ಬಂಗಾಳಿ ಅಸ್ಮಿತೆ, ಅಲ್ಪಸಂಖ್ಯಾತರ ಮತ, ತೋಳ್ಬಲದಿಂದಾಗಿ 15 ವರ್ಷಗಳಿಂದ ಬಂಗಾಳದಲ್ಲಿ ಗಟ್ಟಿಯಾಗಿ ನೆಲೆಯೂರಿದ್ದ ಮಮತಾ ಬ್ಯಾನರ್ಜಿ ನೇತೃತ್ವದ ತೃಣಮೂಲಕಾಂಗ್ರೆಸ್ ವಿರುದ್ಧ ಆಡಳಿತವಿರೋಧಿ ಅಲೆ ಇತ್ತು. ಆದರೆ ಅದನ್ನು ಮತವಾಗಿ ಪರಿವರ್ತಿಸಲು ಹಲವು ಕೊರತೆಗಳು ಇದ್ದವು. ಅವನ್ನೆಲ್ಲಾ ಮೋದಿ- ಶಾ ಜೋಡಿ ನೀಗಿಸಿದ ಫಲವೇ ಈ ಫಲಿತಾಂಶ.

ಬಂಗಾಳದಲ್ಲಿ 2014ರ ನಂತರ ಬಿಜೆಪಿ ತಳಮಟ್ಟದಿಂದ ನೆಲೆ ಕಾಣಲು ಆರಂಭಿಸಿತು. 2019ರಲ್ಲಿ ಲೋಕಸಭೆ ಚುನಾವಣೆಯಲ್ಲಿ ಅದು ಗೋಚರವಾಯಿತು. 2021ರ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ ಇನ್ನೇನು ಗೆದ್ದೇ ಬಿಟ್ಟಿತುಎನ್ನುವಂತಹವಾತಾವರಣಕಂಡುಬಂತಾದರೂ ಅಲ್ಪಮತಗಳ ಅಂತರದ ಸೋಲುಗಳು ಮಮತಾ ದೀದಿಯನ್ನು ಅಧಿಕಾರಕ್ಕೇರಿಸಿದ್ದವು.

ಬೂತ್ ಮಟ್ಟದ ತಂತ್ರಗಾರಿಕೆ: ಬಂಗಾಳವನ್ನು ಗೆಲ್ಲಲು ಅಬ್ಬರದಪ್ರಚಾರವೊಂದೇಸಾಲುವುದಿಲ್ಲಎಂಬುದನ್ನು ಮನಗಂಡ ಮೋದಿ- ಅಮಿತ್ ಶಾ ಜೋಡಿ, ಅಲ್ಪಮತಗಳಿಂದ ಫಲಿತಾಂಶವೇ ಬದಲಾಗುತ್ತಿದ್ದ ಬೂತ್‌ಗಳತ್ತ ಗಮನಹರಿಸಿತು. ಉತ್ತರಪ್ರದೇಶ ಸೇರಿ ವಿವಿಧ ರಾಜ್ಯಗಳಲ್ಲಿ ಗೆಲುವಿಗೆ ಪ್ರಮುಖ ಪಾತ್ರ ವಹಿಸಿದ ಬೂತ್ ಪ್ರಮುಖ ವ್ಯವಸ್ಥೆಯನ್ನು ಬಂಗಾಳದಲ್ಲೂ ಜಾರಿಗೆ ತಂದಿತು. ಬೂತ್ ಮಟ್ಟವನ್ನು ಬಲಪಡಿಸಿತು. ಟಿಎಂಸಿ



ಕಾರ್ಯಕರ್ತರ ಗೂಂಡಾಗಿರಿ ಎದುರು ತಲೆ ಎತ್ತಲು ಪ್ರಯಾಸಪಡುತ್ತಿದ್ದ ಬಿಜೆಪಿ ಕಾರ್ಯಕರ್ತರಿಗೆ ಎಲ್ಲ ರೀತಿಯಲ್ಲೂ ಶಕ್ತಿ ತುಂಬಿತು.

ಮೋದಿ ಮುಖ, ಡಬಲ್ ಎಂಜಿನ್: ಮಮತಾ ಬ್ಯಾನರ್ಜಿ ಅವರವರ್ಚಸ್ಸಿಗೆಸರಿಸಾಟಿಯಾಗಿನಿಲ್ಲಬಲ್ಲ ನಾಯಕ ಬಂಗಾಳ ಬಿಜೆಪಿಯಲ್ಲಿ ಇರಲಿಲ್ಲ. ಹೀಗಾಗಿ ಮೋದಿ ಮುಖವನ್ನೇ ದೊಡ್ಡದಾಗಿ ಬಿಂಬಿಸಲಾಯಿತು. ಪ್ರಚಾರಕ್ಕೆ ಅವರನ್ನು ಗರಿಷ್ಠ ಪ್ರಮಾಣದಲ್ಲಿ ಬಳಸಿಕೊಳ್ಳಲಾಯಿತು. ಕಾಲಿಗೆ ಚಕ್ರ ಕಟ್ಟಿಕೊಂಡವರಂತೆ ರಾಜ್ಯ ಸುತ್ತಿದ ಮೋದಿ, ಚುರುಮುರಿ ಅಂಗಡಿ ಭೇಟಿ, ಹೂಗ್ಲಿನದಿಯಲ್ಲಿಬೋಟ್‌ಸಂಚಾರದಂತಹಪ್ರಚಾರದ ಮೂಲಕಜನರಿಗೆಹತ್ತಿರವಾದರು. ಅಮಿತ್ ಶಾ ಅವರು ರಾಜ್ಯದಲ್ಲೇ ಹಲವು ದಿನಗಳ ಕಾಲ ಬೀಡುಬಿಟ್ಟು ತೆರೆಯ ಹಿಂದೆ ತಂತ್ರಗಾರಿಕೆ ರೂಪಿಸಿದರು.

ಇವತ್ತಿಗೂ ಬಂಗಾಳದಲ್ಲಿ ಉದ್ಯೋಗಖಾತ್ರಿ, ಪಿಎಂ ಕಿಸಾನ್ ಸಮ್ಮಾನ್ ಯೋಜನೆ ಜಾರಿಯಾಗಿಲ್ಲ. ಬಿಜೆಪಿ ಅಧಿಕಾರಕ್ಕೆ ಬಂದರೆ ಡಬಲ್ ಎಂಜಿನ್ ಸರ್ಕಾರವಾಗುತ್ತದೆ, ಕೇಂದ್ರದ ಯೋಜನೆಗಳ ಲಾಭ ಸಿಗುತ್ತದೆ ಎಂಬುದನ್ನು ಬಿಜೆಪಿ ಮನದಟ್ಟು ಮಾಡಿಕೊಡುವಲ್ಲಿ ಸಫಲವಾಯಿತು. ಮಮತಾ ಸರ್ಕಾರದಲ್ಲಿ ಅಭಿವೃದ್ಧಿಯಲ್ಲಿ ಬಂಗಾಳ ಹಿಂದೆ ಹೋಗುತ್ತಿದೆ, ಭ್ರಷ್ಟಾಚಾರ ಮಿತಿಮೀರಿದೆ ಎಂದು ಮತದಾರರ ಮನಸ್ಸಿನಲ್ಲಿ ಬಿತ್ತುವಲ್ಲಿ ಸಫಲವಾಯಿತು.

ಹೊರಗಿನವರು ವರ್ಸಸ್ ಸ್ಥಳೀಯರು: ಬಿಜೆಪಿ ಗೆದ್ದರೆ, ಬಂಗಾಳ ಅಸ್ಮಿತೆ ಮೇಲೆ ದಾಳಿಯಾಗುತ್ತದೆ. ಉತ್ತರ ಭಾರತದಂತೆ ಮಾಂಸಾಹಾರಕ್ಕೆ ನಿಷೇಧ ಹೇರಿಬಿಡುತ್ತಾರೆ ಎಂಬ ಪ್ರಚಾರವನ್ನು ಮಮತಾ ವ್ಯವಸ್ಥಿತವಾಗಿ ಮಾಡಿದರು. ಬಂಗಾಳದ ಸಂಸ್ಕೃತಿಗೆ ಬಿಜೆಪಿ ವಿರೋಧಿಎಂದುಬಿಂಬಿಸಿದರು. ಇದಕ್ಕೆಪ್ರತ್ಯುತ್ತರವನ್ನು ಬಿಜೆಪಿನೀಡಿತು. ಬಂಗಾಳಕ್ಕೆಭೇಟಿನೀಡುವನಾಯಕರು (ನಾನ್ ವೆಜಿಟೇರಿಯನ್) ಬಂಗಾಳದ ಮೀನು ಖಾದ್ಯವನ್ನು ಸವಿದು ನಾವು ಮಾಂಸಾಹಾರ ವಿರೋಧಿಗಳಲ್ಲ ಎಂದುಸಾರಿದರು. ಪ್ರಧಾನಿಮೋದಿಮಾಂಸಾಹಾರವನ್ನೇ ಪ್ರಸಾದವಾಗಿನೀಡುವದೇವಸ್ಥಾನಕ್ಕೆಭೇಟಿನೀಡಿಪೂಜೆ ಸಲ್ಲಿಸುವ ಮೂಲಕ ಮಮತಾ ವಾದ ಸುಳ್ಳಾಗಿಸಿದರು.

ವಲಸಿಗರ ಸಮಸ್ಯೆ: ಬಂಗಾಳಕ್ಕೆ ಬಾಂಗ್ಲಾದೇಶದಿಂದ ಅಕ್ರಮವಲಸಿಗರುಭಾರಿಪ್ರಮಾಣದಲ್ಲಿಬರುತ್ತಿದ್ದಾರೆ, ಸ್ಥಳೀಯರ ಉದ್ಯೋಗ ಕಸಿಯುತ್ತಿದ್ದಾರೆ ಎಂಬ ಬಿಜೆಪಿಯ ಪ್ರಚಾರ ಭರ್ಜರಿ ಫಸಲು ತಂದಿದೆ. ವಿಶೇಷ ಮತಪಟ್ಟಿ ಪರಿಷ್ಕರಣೆ ಮೂಲಕ ಸುಮಾರು 1 ಕೋಟಿ ಮತದಾರರನ್ನುಚುನಾವಣಾಆಯೋಗಕ್ಕೈಬಿಟ್ಟಿದ್ದರಿಂದ ಹಲವು ಕ್ಷೇತ್ರಗಳಲ್ಲಿ ಮಮತಾ ಅಭ್ಯರ್ಥಿಗಳು ಗೆಲ್ಲುವುದಕ್ಕೆ ತೊಡಕಾಗಿದೆ ಎನ್ನಲಾಗುತ್ತಿದೆ.

ಕೆಲಸ ಮಾಡಿತು ಪ್ರಧಾನಿ ಮೋದಿ ಚುರುಮುರಿ!

ಕೋಲ್ಕತಾ: ಒಂದು ಕಡೆ ಬಿಜೆಪಿ ನಾಯಕರು ಪಶ್ಚಿಮ ಬಂಗಾಳದಲ್ಲಿ ಸಣ್ಣಸಣ್ಣ ಸಂಘಟನಾ ಸಭೆಗಳನ್ನು ಆಯೋಜಿಸಿ ಕಾರ್ಯಕರ್ತರು ಮತ್ತು ಜನರನ್ನು ಒಗ್ಗೂಡಿಸುವ ಕೆಲಸ ಮಾಡುತ್ತಿದ್ದರೆ, ಇತ್ತ ಪ್ರಧಾನಿ ನರೇಂದ್ರ ಮೋದಿ ಝಾರ್‌ಗ್ರಾಮದ ಅಂಗಡಿಯೊಂದಕ್ಕೆ ಹೋಗಿ ಚುರುಮುರಿ ತಿಂದಿದ್ದು ಪ್ರಭಾವ ಬೀರಿದೆ. ಅಲ್ಲಿ ಹಾಗೂ ಸುತ್ತಲಿನಪ್ರದೇಶಗಳಲ್ಲಿ ಬಿಜೆಪಿ ಗೆದ್ದಿದೆ. ಬಂಗಾಳದಲ್ಲಿ ಮೊದಲ ಹಂತದ ಚುನಾವಣೆಗೂ ಕೆಲ ದಿನಗಳ ಮುನ್ನ, ರಸ್ತೆ ಬದಿಯ ಅಂಗಡಿಯೊಂದರಲ್ಲಿ ಮೋದಿ ಝಾಲ್ಮುರಿ (ಚುರುಮುರಿ) ಖರೀದಿಸಿ ತಿಂದರು. ತ್ರಿಪುರಾದ ಮಕ್ಕಳೊಂದಿಗೆಬಂಗಾಳಿಗಳನೆಚ್ಚಿನಕಾಲ್ಚೆಂಡುಆಟಆಡಿಅಲ್ಲಿನವರಿಗೆಹತ್ತಿರಾವಾದರು. ಟಿಎಂಸಿಗರುಮೋದಿ ಅವರ ಈ ತಂತ್ರಗಳನ್ನು ಪುಕ್ಕಟೆ ಪ್ರಚಾರ ಎಂದು ಟೀಕಿಸಿದರೂ, ಇಂಥ ತಂತ್ರಗಳು ಫಲ ನೀಡಿವೆ.



ಎಡರಂಗ ಮಣಿಸಿ ಕೇರಳದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ

ಸತತ 10 ವರ್ಷಗಳ ಎಲ್‌ಡಿಎಫ್ ಆಡಳಿತಕ್ಕೆ ತೆರೆ | ಕಾಂಗ್ರೆಸ್ ತೆಕ್ಕೆಗೆ ಮತ್ತೊಂದು ರಾಜ್ಯ | ದಶಕದಲ್ಲಿ ಇದೇ ಮೊದಲು ಸಲ ಎಲ್ಲೂ ಈಗ ಎಡಪಕ್ಷ ಆಡಳಿತ ಇಲ್ಲ

ತಿರುವನಂತಪುರ: ಸತತ 10 ವರ್ಷಗಳಿಂದ ಆಡಳಿತ ನಡೆಸುತ್ತಿದ್ದ ಸಿಪಿಎಂ ನೇತೃತ್ವದ ಎಲ್‌ಡಿಎಫ್ ಮೈತ್ರಿಕೂಟಕ್ಕೆ ಈ ಸಲ ಕೇರಳದಲ್ಲಿ ಸೋಲಾಗಿದೆ. ರಾಜ್ಯ ವಿಧಾನಸಭೆಯ 140 ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ನೇತೃತ್ವದ ಯುನೈಟೆಡ್ ಡೆಮಾಕ್ರೆಟಿಕ್ ಫ್ರಂಟ್ (ಯುಡಿಎಫ್) ಸ್ಪಷ್ಟಬಹುಮತದೊಂದಿಗೆ ಅಧಿಕಾರಕ್ಕೆ ಬರುವಲ್ಲಿ ಯಶಸ್ವಿಯಾಗಿದೆ. ಇನ್ನೊಂದೆಡೆ ಬಿಜೆಪಿ ಕೂಡಾ ತನ್ನ ಖಾತೆ ತೆರೆಯುವಲ್ಲಿ ಯಶಸ್ವಿಯಾಗಿದೆ.

ಕೇರಳದಲ್ಲೂ ಸೋಲಿನ ಪರಿಣಾಮ ಇದೀಗ ದೇಶದ ಯಾವುದೇ ರಾಜ್ಯದಲ್ಲೂ ಎಡಪಕ್ಷಗಳ ಆಡಳಿತ ಇಲ್ಲದಂತಾಗಿದೆ. ಈ ಹಿಂದೆ ಪಶ್ಚಿಮ ಬಂಗಾಳ, ಕೇರಳ, ತ್ರಿಪುರಾದಲ್ಲಿ ಭಾರೀ ಪ್ರಾಬಲ್ಯ ಹೊಂದಿದ್ದ ಎಡಪಕ್ಷಗಳು ಕಳೆದೊಂದು ದಶಕದಿಂದ ಕೇರಳದಲ್ಲಿ ಮಾತ್ರ ಅಸ್ತಿತ್ವ ಉಳಿಸಿಕೊಂಡಿತ್ತು. ಇದೀಗ ಅದು ಕೂಡಾ ಪಕ್ಷದ ಕೈತಪ್ಪಿದೆ.

ಆಡಳಿತ ವಿರೋಧಿ ಅಲೆ: ಸತತ 10 ವರ್ಷಗಳ ಆಡಳಿತ ವಿರೋಧಿ ಅಲೆ, ಪಕ್ಷದ ನಾಯಕರ ಧರ್ಮ ವಿರೋಧಿ ಹೇಳಿಕೆಗಳು, ಸಚಿವರ ವಿರುದ್ಧದ ಭ್ರಷ್ಟಾಚಾರದ ಆರೋಪ, ಯುವ ಸಮೂಹಕ್ಕೆ ಅಗತ್ಯ ಉದ್ಯೋಗ ಸೃಷ್ಟಿಯಲ್ಲಿ ವೈಫಲ್ಯ, ಭಾರೀ ಸಾಲದ ಹೊರೆ, ಕುಟುಂಬ ರಾಜಕಾರಣ, ಶಬರಿಮಲೆಗೆ ಮಹಿಳೆಯರ ಪ್ರವೇಶ ವಿವಾದದಲ್ಲಿ ಸರ್ಕಾರದ ಜನವಿರೋಧಿ ನಿಲುವು ಎಡಪಕ್ಷಗಳಿಗೆ ಮುಳುವಾದರೆ, ಇದರ ಲಾಭ ಪಡೆದು ಒಗ್ಗಟ್ಟಿನಿಂದ ಕಾಂಗ್ರೆಸ್ ನೇತೃತ್ವದ ಯುಡಿಎಫ್ ಕೂಟ ಹೋರಾಡಿದ ಕಾರಣ ಜಯ ಒಲಿದುಬಂದಿದೆ. ಜೊತೆಗೆ ಕಾಂಗ್ರೆಸ್ ಘೋಷಿಸಿದ್ದ ಕರ್ನಾಟಕದ ಮಾದರಿ ಹಲವು ಗ್ಯಾರಂಟಿ ಯೋಜನೆಗಳು ಕೂಡಾ ಪಕ್ಷಕ್ಕೆ ನೆರವಾಗಿವೆ.

ಇನ್ನು ಬಿಜೆಪಿ ಅಧ್ಯಕ್ಷ ರಾಜೀವ್ ಚಂದ್ರಶೇಖರ್ ನೇತೃತ್ವದ ಪ್ರಚಾರ ರಾಜ್ಯದೆಲ್ಲೆಡೆ ಪಕ್ಷದ ಮತಗಳಿಗೆ ಹೆಚ್ಚಿಸುವಲ್ಲಿ ಮತ್ತು ವಿಧಾನಸಭೆಯಲ್ಲಿ ಖಾತೆ ತೆರೆಸುವಲ್ಲಿ ಪಕ್ಷಕ್ಕೆ ನೆರವಾಗಿದೆ.

ಜಯಕ್ಕೆ ಕಾರಣ

- ಸತತ 10 ವರ್ಷಗಳ ಆಡಳಿತ ವಿರೋಧಿ ಅಲೆಯ ಬಿಸಿಯನ್ನು ಎಲ್‌ಡಿಎಫ್ ಎದುರಿಸಬೇಕಾಯ್ತು
- ಶಬರಿಮಲೆ ಪ್ರಕರಣವನ್ನು ಸಿಪಿಎಂ ಸರ್ಕಾರ ನಿರ್ವಹಿಸಿದ ರೀತಿ ಸರ್ಕಾರಕ್ಕೆ ಹಿನ್ನಡೆ ತಂದಿತು
- ಹೆಚ್ಚು ಶಿಕ್ಷಿತರ ನಾಡಿನಲ್ಲಿ, ಅಗತ್ಯ ಉದ್ಯೋಗ ಸೃಷ್ಟಿಯಲ್ಲಿ ವೈಫಲ್ಯ ಸರ್ಕಾರಕ್ಕೆ ಮುಳುವಾಯಿತು
- ಸಿಪಿಎಂ ತಳಮಟ್ಟದ ಕಾರ್ಯಕರ್ತರ ಪ್ರಮಾಣ ಕುಸಿತ. ಮತದಾರರ ಮತಗಟ್ಟೆಗೆ ತರುವಲ್ಲಿ ವಿಫಲ
- ಧಾರ್ಮಿಕ ನಂಬಿಕೆಗೆ ಧಕ್ಕೆ ತರುವ ಕುರಿತ ಸಿಪಿಎಂ ನಾಯಕರ ಹೇಳಿಕೆಯಿಂದ ಸರ್ಕಾರಕ್ಕೆ ಧಕ್ಕೆ
- ಎಲ್‌ಡಿಎಫ್ ವಿರುದ್ಧ ಕಾಂಗ್ರೆಸ್ ಸೇರಿದಂತೆ ಯುಡಿಎಫ್ ನಾಯಕರ ಯೋಜಿತ ಪ್ರಚಾರದಿಂದ ಫಲ
- ಎಲ್‌ಡಿಎಫ ಸರ್ಕಾರದ ವೈಫಲ್ಯ ಜನರಿಗೆ ಮುಟ್ಟಿಸುವಲ್ಲಿ ಯಶಸ್ವಿಯಾದ ಯುಡಿಎಫ್ ನಾಯಕರು
- ಪ್ರಣಾಳಿಕೆಯಲ್ಲಿ ಹಲವು ಗ್ಯಾರಂಟಿ, ಕಲ್ಯಾಣ, ಅಭಿವೃದ್ಧಿ ಕೆಲಸಗಳ ಬಗ್ಗೆ ಕಾಂಗ್ರೆಸ್‌ನಿಂದ ಪ್ರಸ್ತಾಪ

ಕೇರಳ (ಒಟ್ಟು ಸ್ಥಾನ 140 / ಬಹುಮತಕ್ಕೆ 71)

ಪಕ್ಷ	ಸ್ಥಾನ	2021	ಲಾಭ/ನಷ್ಟ	% ಮತ
ಯುಡಿಎಫ್	89	40	+49	40
ಎಲ್‌ಡಿಎಫ್	35	92	-57	29
ಬಿಜೆಪಿ	3	0	+3	12
ಇತರರು	13	8	+5	19

ಗೆದ್ದ ಪ್ರಮುಖರು

- ರಾಜೀವ್ ಚಂದ್ರಶೇಖರ್ (ಬಿಜೆಪಿ)
- ವಿ.ಡಿ. ಸತೀಶನ್ (ಕಾಂಗ್ರೆಸ್)
- ರಮೇಶ್ ಚೆನ್ನಿತ್ತಲ (ಕಾಂಗ್ರೆಸ್)
- ಪಿಣರಾಯಿ ವಿಜಯನ್ (ಎಲ್‌ಡಿಎಫ್)
- ಚಾಂಡಿ ಊಮ್ಮನ್ (ಯುಡಿಎಫ್)

ಸೋತ ಪ್ರಮುಖರು

- ವೀಣಾ ಜಾರ್ಜ್ (ಎಲ್‌ಡಿಎಫ್)
- ಶಿವನ್ ಕುಟ್ಟಿ (ಎಲ್‌ಡಿಎಫ್)
- ವಿ. ಮುರಳೀಧರನ್ (ಬಿಜೆಪಿ)
- ಶೈಲಜಾ ಟೀಚರ್ (ಎಲ್‌ಡಿಎಫ್)



ಕೇರಳ
140 ಒಟ್ಟು ಸ್ಥಾನ
71 ಬಹುಮತಕ್ಕೆ

13 ಸಚಿವರು ಸೋಲು

ಒಂದು ಕಡೆ ಪಿಣರಾಯಿ ವಿಜಯನ್ ಅವರು ಸಿಎಂ ಸ್ಥಾನ ಕಳೆದುಕೊಳ್ಳುತ್ತಿದ್ದರೆ, ಅತ್ತ ಅವರ ಸರ್ಕಾರದಲ್ಲಿ ಸಚಿವರಾಗಿದ್ದ 21 ಮಂದಿಯ ಪೈಕಿ 13 ಜನ ಸೋಲನ್ನು ಕಂಡಿದ್ದಾರೆ. ಇದರೊಂದಿಗೆ ಎಡರಂಗಕ್ಕೆ ಭಾರಿ ಹಿನ್ನಡೆ ಆಗಿದೆ.



ನೇಮಂ ಕ್ಷೇತ್ರದಲ್ಲಿ ಜಯಭೇರಿ ಬಾರಿಸಿದ ಕೇರಳ ಬಿಜೆಪಿ ರಾಜ್ಯಾಧ್ಯಕ್ಷ ರಾಜೀವ್ ಚಂದ್ರಶೇಖರ್ ಅವರಿಂದ ಸಂಭ್ರಮ.

ಭಾರತದ ಎಲ್ಲೂ ಇದೀಗ ಎಡರಂಗದ ಸರ್ಕಾರ ಇಲ್ಲ!

ನವದೆಹಲಿ: ಕೇರಳದಲ್ಲಿ ಎಡರಂಗದ ಸೋಲಿನೊಂದಿಗೆ ದೇಶದ ಎಲ್ಲೂ ಎಡಪಕ್ಷಗಳ ಸರ್ಕಾರ ಅಸ್ತಿತ್ವದಲ್ಲಿ ಇಲ್ಲವಾದಂತಾಗಿದೆ. ಈ ರೀತಿ ಆಗಿದ್ದು 50 ವರ್ಷದಲ್ಲಿ ಮೊದಲು. ಅಂದರೆ 1977 ರಿಂದ ಆರಂಭವಾಗಿ ಈವರೆಗೂ ದೇಶದ ಎಲ್ಲಾದರೂ 1 ಕಡೆ ಎಡರಂಗ ಸರ್ಕಾರ ಇರುತ್ತಿತ್ತು. ಈಗ 50 ವರ್ಷ ಬಳಿಕ ಎಲ್ಲೂ ಇಲ್ಲವಾಗಿದೆ. ಪಶ್ಚಿಮ ಬಂಗಾಳದಲ್ಲಿ 1977 ರಿಂದ 2011 ರವರೆಗೆ ಸತತ 34 ವರ್ಷ ಅಧಿಕಾರ ನಡೆಸಿತ್ತು. ತ್ರಿಪುರಾದಲ್ಲಿ 1993 ರಿಂದ 2018 ರವರೆಗೆ ಅಧಿಕಾರ ನಡೆಸಿತ್ತು. ಕೇರಳದಲ್ಲಿ 1980, 1987, 1996, 2006, 2016, 2021 ರಲ್ಲಿ ಎಡಪಕ್ಷಗಳು ಗೆದ್ದಿದ್ದವು.

ಸಿಎಂ ಗಾದಿಗೆ ಚೆನ್ನಿತ್ತಲ, ವೇಣು, ಸತೀಶ್ ಸೆಣಸು

ಕಾಂಗ್ರೆಸ್ ಅಧಿಕಾರಕ್ಕೆ ಬರುವುದು ಖಚಿತವಾಗುತ್ತಲೇ ಮುಂದಿನ ಸಿಎಂ ಯಾರೆಂಬ ಚರ್ಚೆ ಆರಂಭವಾಗಿದೆ. ಪಕ್ಷದ ಹಿರಿಯ ನಾಯಕರಾದ ರಮೇಶ್ ಚೆನ್ನಿತ್ತಲ, ಸತೀಶನ್ ಮುಖ್ಯಮಂತ್ರಿ ಹುದ್ದೆ ರೇಸ್‌ನಲ್ಲಿ ಮುಂಚೂಣಿಯಲ್ಲಿದ್ದಾರೆ. ಮತ್ತೊಂದೆಡೆ ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ವೇಣುಗೋಪಾಲ್ ಕೂಡಾ ಕುರ್ಚಿ ಮೇಲೆ ಟವಲ್ ಹಾಕಿದ್ದಾರೆ ಎಂಬ ವರದಿಗಳಿವೆ. ಹೀಗಾಗಿ ಮುಂದಿನ ಬೆಳವಣಿಗೆ ಸಾಕಷ್ಟು ಕುತೂಹಲ ಕೆರಳಿಸಿದೆ.

ನೆಲೆಯೇ ಇಲ್ಲದ ಕೇರಳದಲ್ಲಿ ಬಿಜೆಪಿಗೆ ನೆಲೆ

ಕೇರಳದಲ್ಲಿ ಬಿಜೆಪಿ ಚಾರಿತ್ರಿಕ ಸಾಧನೆ

ಸಂಘಟನೆಯ ಫಲ | ಇದೇ ಮೊದಲ ಬಾರಿಗೆ 3 ಕ್ಷೇತ್ರಗಳಲ್ಲಿ ಗೆದ್ದ ಬಿಜೆಪಿ ರಾಜ್ಯಾಧ್ಯಕ್ಷ ರಾಜೀವ್ ಚಂದ್ರಶೇಖರ್ ಸೇರಿ 3 ಬಿಜೆಪಿಗರಿಗೆ ವಿಜಯ ಸುಮಾರು ಶೇ.12ರಷ್ಟು ಮತ ಪಡೆದ ಕೇಸರಿ ಪಕ್ಷದ ನೆಲೆ ಮತ್ತಷ್ಟು ಗಟ್ಟಿ


ತಿರುವನಂತಪುರ: ಕೇರಳ ವಿಧಾನಸಭೆಗೆ ನಡೆದ ಚುನಾವಣೆಯಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ, ಕೇಂದ್ರದ ಮಾಜಿ ಸಚಿವ ರಾಜೀವ್ ಚಂದ್ರಶೇಖರ್ ಸೇರಿ ಪಕ್ಷದಿಂದ ಮೂವರು ಶಾಸಕರಾಗಿ ಆಯ್ಕೆಯಾಗಿದ್ದಾರೆ. ಈ ಮೂಲಕ ಇದೇ ಮೊದಲ ಬಾರಿ ಬಿಜೆಪಿ ರಾಜ್ಯದಲ್ಲಿ 3 ಸ್ಥಾನ ಗೆದ್ದಿದೆ ಹಾಗೂ ಪಕ್ಷದ ಸೂಕ್ತ ಅಸ್ತಿತ್ವವೇ ಇಲ್ಲದ ರಾಜ್ಯದಲ್ಲಿ ನೆಲೆ ಕಂಡುಕೊಂಡಿದೆ.

ನೇಮಂ, ಚಾತನ್ನೂರ್, ಕಜಕ್ ಕೊಟ್ಟಮ್‌ನಲ್ಲಿ ಬಿಜೆಪಿ ಗೆಲುವು ಸಾಧಿಸಿದೆ. ಶೇ.11.5ರಷ್ಟು ಮತ ಪಡೆದು ನೆಲೆ ಗಟ್ಟಿ ಮಾಡಿಕೊಂಡಿದೆ, ತಿರುವನಂತಪುರ ಹೊರವಲಯ ನೇಮಂ ಕ್ಷೇತ್ರದಲ್ಲಿ ರಾಜೀವ್ ಚಂದ್ರಶೇಖರ್ ಅವರು ಪಿಣರಾಯಿ ವಿಜಯನ್ ಸರ್ಕಾರದಲ್ಲಿ ಸಚಿವರಾಗಿದ್ದ ವಿ. ಶಿವನ್ ಕುಟ್ಟಿ ಅವರ ವಿರುದ್ಧ 4,165 ಮತಗಳ ಅಂತರದಿಂದ ಗೆಲುವು ಸಾಧಿಸಿದ್ದಾರೆ.

ಅದೇ ರೀತಿ ಚಾತನ್ನೂರು ಕ್ಷೇತ್ರದಿಂದ ಬಿ.ಬಿ.ಗೋಪಕುಮಾರ್ ಅವರು ಎಲ್‌ಡಿಎಫ್‌ನ ಆರ್.ರಾಜೇಂದ್ರನ್ ಅವರ ವಿರುದ್ಧ 4,402 ಮತಗಳ ಅಂತರದಿಂದ, ಕಜಕೊಟ್ಟಂ ಕ್ಷೇತ್ರದಿಂದ ಸ್ಪರ್ಧಿಸಿದ್ದ ವಿ.ಮುರಳೀಧರನ್ ಅವರು ಎಲ್‌ಡಿಎಫ್‌ನ ಹಾಲಿ ಶಾಸಕ ಕಡಕಂಪಳ್ಳಿ ಸುರೇಂದ್ರನ್ ವಿರುದ್ಧ ಕೇವಲ 300 ಮತಗಳ ಅಂತರದಿಂದ ಗೆದ್ದಿದ್ದಾರೆ.

ಪಕ್ಷ ಸಂಘಟಕ ರಾಜೀವ್: ರಾಜೀವ್ ಚಂದ್ರಶೇಖರ್ ಅವರು ಕೇರಳ ವಿಧಾನಸಭೆಗೆ ಇದೇ ಮೊದಲ ಬಾರಿಗೆ ಸ್ಪರ್ಧಿಸುತ್ತಿದ್ದು, ಮೊದಲ ಬಾರಿ ಶಾಸಕರಾಗಿ ಆಯ್ಕೆಯಾಗಿದ್ದಾರೆ. ಕಳೆದ ಲೋಕಸಭಾ ಚುನಾವಣೆಯಲ್ಲಿ ತಿರುವನಂತಪುರದಿಂದ ಸ್ಪರ್ಧಿಸಿದ್ದ ಅವರು ಕಾಂಗ್ರೆಸ್‌ನ ಶಶಿ ತರೂರ್ ವಿರುದ್ಧ ಅಲ್ಪಮತಗಳ ಅಂತರದಿಂದ ಸೋಲುಂಡಿದ್ದರು. ಆದರೆ ಕಳೆದ ವರ್ಷ ತಿರುವನಂತಪುರ ಮಹಾನಗರ ಪಾಲಿಕೆಯಲ್ಲಿ ಬಿಜೆಪಿ ಅಭೂತಪೂರ್ವ ಜಯ ಸಾಧಿಸಿತ್ತು. ಅಂದಿನಿಂದಲೇ ರಾಜ್ಯದಲ್ಲಿ ಬಿಜೆಪಿ ಪ್ರಮುಖ ಪಕ್ಷವಾಗಿ ಹೊರಹೊಮ್ಮುವ ಸುಳಿವು ಸಿಕ್ಕಿತ್ತು.

ಇದು ಅತ್ಯಂತ ಸಂತಸದ ದಿನ



ನನಗೆ ಅತೀವ ಸಂತಸವಾಗಿದೆ. ಈ ಗೆಲುವಿಗೆ ಕಾರಣವಾದ ಬಿಜೆಪಿಯ ಎಲ್ಲ ಕಾರ್ಯಕರ್ತರ ಬಗ್ಗೆ ಹೆಮ್ಮೆ ಪಡುತ್ತೇನೆ. ಅವರಿಗೆ ಕೃತಜ್ಞತೆ ಸಲ್ಲಿಸುತ್ತೇನೆ. ನನಗೆ ಸೇವೆ ಸಲ್ಲಿಸಲು ಅವಕಾಶ ನೀಡಿದ್ದಕ್ಕಾಗಿ ನೇಮಂ ಜನರಿಗೆ ನಾನು ತುಂಬಾ ಕೃತಜ್ಞನಾಗಿದ್ದೇನೆ.

- **ರಾಜೀವ್ ಚಂದ್ರಶೇಖರ್** ಕೇರಳ ಬಿಜೆಪಿ ಅಧ್ಯಕ್ಷ

ಅಸ್ಸಾಂನಲ್ಲಿ ಕಮಲದ ಹ್ಯಾಟ್ರಿಕ್ 'ಕಮಾಲ್': ಸ್ಥಾನ ಗಳಿಕೆಯಲ್ಲಿ ಭರ್ಜರಿ ಶತಕ!

100+ ಸ್ಥಾನ ಗಳಿಸಿ ಬಿಜೆಪಿ ಮೈತ್ರಿಕೂಟದಿಂದ ದಾಖಲೆ | 30ರ ಗಡಿ ದಾಟಲೂ ವಿಫಲವಾದ ಕಾಂಗ್ರೆಸ್ | ಉಳಿದ ಅನೇಕ ಪ್ರತಿಪಕ್ಷಗಳು ಧೂಳೀಪಟ

ನವದೆಹಲಿ: ಅಸ್ಸಾಂ ವಿಧಾನಸಭೆ ಚುನಾವಣೆಯಲ್ಲಿ ನಿರೀಕ್ಷೆಯಂತೆ ಬಿಜೆಪಿ ಸತತ ಮೂರನೇ ಬಾರಿ ಗೆಲುವು ಸಾಧಿಸುವ ಮೂಲಕ ಹ್ಯಾಟ್ರಿಕ್ ಸಾಧನೆ ಮಾಡಿದೆ. ಈ ಮೂಲಕ ಅಸ್ಸಾಂ ವಿಧಾನಸಭೆ ಚುನಾವಣೆಯಲ್ಲಿ ಇತಿಹಾಸದಲ್ಲಿ ಬಿಜೆಪಿ ಹೊಸ ಇತಿಹಾಸ ಬರೆದಿದೆ. ಈ ಬಾರಿ ಬಿಜೆಪಿಗೆ ಸೋಲುಣಿಸಿಯೇ ಸಿದ್ಧ ಎಂಬ ವಿಶ್ವಾಸದಲ್ಲಿದ್ದ ಕಾಂಗ್ರೆಸ್ ಹೀನಾಯ ಸಾಧನೆ ತೋರುವ ಮೂಲಕ ತೀವ್ರ ಮುಖಭಂಗಕ್ಕೊಳಗಾಗಿದೆ.

ಚುನಾವಣೋತ್ತರ ಸಮೀಕ್ಷೆಗಳ ಪ್ರಕಾರ ಅಸ್ಸಾಂನಲ್ಲಿ ಈ ಬಾರಿ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರದ ಗೆಲುವು ಪಕ್ಕಾ ಆಗಿತ್ತು. ಆ್ಯಕ್ಸಿಸ್ ಮೈ ಇಂಡಿಯಾ ಸೇರಿ ಹಲವು ಸಮೀಕ್ಷೆಗಳು ಅಸ್ಸಾಂನಲ್ಲಿ ಬಿಜೆಪಿ ಭಾರೀ ಗೆಲುವಿನ ಭವಿಷ್ಯ ನುಡಿದಿದ್ದವು. ಆ ಸಮೀಕ್ಷೆಗಳೆಲ್ಲ ಈಗ ನಿಜವಾಗಿದೆ. ಮುಖ್ಯಮಂತ್ರಿ ಹೇಮಂತ್ ಬಿಸ್ವಾ ಶರ್ಮಾ ಅವರ ವರ್ಚಸ್ಸು ಮತ್ತು ಮೋದಿ ಅಲೆ ಎದುರು ಗೌರವ್ ಗಗೋಯ್ ನೇತೃತ್ವದ ಕಾಂಗ್ರೆಸ್ ಭಾರೀ ಪ್ರಚಾರದ ಹೊರತಾಗಿಯೂ ಹೆಚ್ಚಿನ ಸ್ಥಾನಗಳಿಸುವಲ್ಲಿ ವಿಫಲವಾಯಿತು. ಸ್ವತಃ ಕಾಂಗ್ರೆಸ್ ರಾಜ್ಯಾಧ್ಯಕ್ಷರಾದ ಗೌರವ್ ಗಗೋಯ್ ಅವರೇ ಚುನಾವಣೆಯಲ್ಲಿ ಹಿನ್ನಡೆ ಅನುಭವಿಸಬೇಕಾಯಿತು.

ಒಟ್ಟು 126 ಸ್ಥಾನ ಬಲದ ಅಸ್ಸಾಂನಲ್ಲಿ ಕಳೆದ ಬಾರಿಯ ಚುನಾವಣೆಯಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಒಕ್ಕೂಟ 75 ಸ್ಥಾನಗಳಿಸಿತ್ತು. ಆದರೆ ಈ ಬಾರಿ 90ಕ್ಕೂ ಹೆಚ್ಚು ಸ್ಥಾನ ಗೆಲ್ಲುವ ಮೂಲಕ ಆಡಳಿತ ವಿರೋಧಿ ಅಲೆ ಮೆಟ್ಟಿನಿಂತು ಉತ್ತಮ ಸಾಧನೆ ತೋರಿದೆ. ಇದು ಅಸ್ಸಾಂನಲ್ಲಿ ಬಿಜೆಪಿ ಮೈತ್ರಿಕೂಟದ ಈವರೆಗಿನ ಅತ್ಯುತ್ತಮ ಪ್ರದರ್ಶನವಾಗಿದೆ.

ಮತದಾರರಿಂದ ತಕ್ಕ ಪಾಠ



ಗೌರವ್ ಗೊಗೊಯ್ ಅವರು ಪವನ್ ಖೇರಾ ಅವರೊಂದಿಗೆ ಕುಳಿತು ಪತ್ರಿಕಾಗೋಷ್ಠಿ ನಡೆಸದಿದ್ದರೆ ಅವರು ಚುನಾವಣೆಯಲ್ಲಿ ಗೆಲ್ಲುತ್ತಿದ್ದರು. ಖೇರಾ ಒಬ್ಬ ಅಸ್ಸಾಮಿ ಮಹಿಳೆಯನ್ನು ಕೆಣಕಲು ಬಯಸಿದ್ದರು. ಅದು ಜನರನ್ನು ಭಾವುಕರನ್ನಾಗಿಸಿತು. ಅದಕ್ಕಾಗಿ ಮತದಾರರು ಅವರನ್ನು ಪೇಡಾ (ಅಪ್ಪಚ್ಚಿ) ರೀತಿ ಮಾಡಿದರು.

- **ಹಿಮಂತ ಬಿಸ್ವಾ ಶರ್ಮಾ** ಅಸ್ಸಾಂ ಸಿಎಂ

2016ರ ಚುನಾವಣೆಯಲ್ಲಿ ಬಿಜೆಪಿ ಮೈತ್ರಿಕೂಟ 86 ಸ್ಥಾನ ಗೆದ್ದಿದ್ದೇ ಈವರೆಗಿನ ಅತ್ಯುತ್ತಮ ಸಾಧನೆಯಾಗಿತ್ತು. ಕಳೆದ ಚುನಾವಣೆಯಲ್ಲಿ 50ಕ್ಕೂ ಹೆಚ್ಚು ಸ್ಥಾನ ಪಡೆದಿದ್ದ ಮೈತ್ರಿಕೂಟ ಗೆದ್ದ ಈ ಬಾರಿ 30 ಗಡಿ ದಾಟಲು ಪರದಾಡಿದೆ. ಕಾಂಗ್ರೆಸ್‌ನ ಗೌರವ್ ಗಗೋಯ್, ರಾಯ್‌ಜೋರ್ ದಳದ ಅಖಿಲ್ ಗಗೋಯ್ ಮತ್ತು ಎಜೆಪಿಯ ಲುರಿಂಜ್ಯೋತಿ ಗಗೋಯ್ ಅವರ 3ಜಿ ಮೈತ್ರಿಕೂಟ ಈ ಬಾರಿ ಕಮಾಲ್ ಮಾಡಲು ವಿಫಲವಾಗಿದೆ.

ಬಿಜೆಪಿ ಗೆದ್ದಿದ್ದು ಹೇಗೆ?


